ಕಲ್ಯಾಣ ಕಿರಣ

ಸಂಪುಟ ೬
ಸಂಚಿಕೆ ೧೧
ಮಾರ್ಚ್ ೧೯೮
ಬಸವ ಶಕೆ ೮೬
ಬೆಲೆ : ೧–೫೦



ಕಲ್ಯಾಣ ಕಿರಣ
ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಜಗದ್ಗುರು ಮಾತೆ ಮಹಾದೇವಿ

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸ ಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ
ಬೆಂಗಳೂರು-೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ

ಚಂದಾ ವಿವರ :

ಬಿಡಿ ಸಂಚಿಕೆ	: ರೂ.	೧-೫೦
ವಾರ್ಷಿಕ	: ರೂ.	೧೬-೦೦
ದ್ವೈವಾರ್ಷಿಕ	: ರೂ.	೩೧-೦೦
ಅಜೀವ ಸದಸ್ಯತ್ವ	: ರೂ.	೧೫೧-೦೦
ಪೋಷಕರು	: ರೂ.	೫೦೧-೦೦
ಮಹಾಪೋಷಕರು	: ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ಪ್ರತಿತಿಂಗಳ ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಪಷ್ಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪುಟವಾಗಿ ತಿಳಿಸಬೇಕಲ್ಲದೆ ಅನುವಾದ ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅವನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನು ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
ಹೊಸ ಚಂದಾದಾರರು ೧೬-೦೦ (ಹದಿನಾರು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು ಚಂದಾದಾರರಾದ ತಿಂಗಳಿನಿಂದ ಮರು ವರ್ಷದ ಹಿಂದಿನ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಕಲ್ಯಾಣ ಕಿರಣ

ಸಂಪುಟ ೬] ಮಾರ್ಚ್ 1981 [ಸಂಚಿಕೆ ೧೧

ನುಡಿ ನೈವೇದ್ಯ : **ಬಸವ ಚರಣಕೆ**

ಜೀವನದ ಪಟವನ್ನು ಹಿಡಿದಿರುವ ಕೈಯೆಂದು
ಅನುದಿನವು ನೆನೆಯುವೆನು ಹೇ ಬಸವ ಗುರುವೆ ॥
ವಿಶ್ವದ ಬಾನಿನಲಿ ಹಾರಲಿಕೆ ಬಿಟ್ಟು
ಕರುಣೆಯ ಸೂತ್ರವನು ಕರದಲ್ಲಿ ಇಟ್ಟು
ಅರೆಚಣವು ಎಡಬಿಡದೆ ಕಣ್‌ಕಾವಲಿಟ್ಟು
ಒಲವಿಂದ ಕಾಯುವ ಹೊಣೆಯನ್ನು ಹೊತ್ತು ॥

ಕೋಲಿನ ತುದಿಯ ಕೋಡಗದ ತೆರದಲ್ಲಿ
ನೇಣಿನ ತುದಿಯ ಬೊಂಬೆಯ ಪರಿಯಲ್ಲಿ
ಕಲೆಗಾರನ ಕೈಯ ಕುಂಚದಾ ತೆರದಲ್ಲಿ
ವೈಣಿಕನ ಹಸ್ತದ ವೀಣೆಯ ತೆರದಲ್ಲಿ ॥

ನೀನಾಡಿಸಿದಂತೆ ಆಡುವ, ನುಡಿಸಿದಂತೆ ನುಡಿವ
ನೀನಿರಿಸಿದಂತೆ ಇರುವ ಇರುವಿಕೆಯನ್ನುಳಿದು
ಎನಗೆ ಬೇರೆ ಪರಿಯುಂಟೇ ಇರುವುಂಟೇ
ಮಹಾಜ್ಞಾನಿ, ಕಾರುಣ್ಯನಿಧಿ ಸಚ್ಚಿದಾನಂದ ಕಂದ ॥

— ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೯ ಆಜೀವ ಸದಸ್ಯತ್ವ ೧೫೧ ರೂ.

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

೧.	ನುಡಿ ನೈವೇದ್ಯ	ಮಾತಾಜಿ	೧
೨.	ಮಾತೃ ಹರಕೆ	ಸಂಪಾದಕರು	೩
೩.	ವಚನ ಪರುಷ	ಸ್ವಾಮಿ ಲಿಂಗಾನಂದರು	೮
೪.	ಸಮಸ್ಯೆ ? ಸಮಾಧಾನ !	ಸಮಾಧಾನಿ	೧೧
೫.	ಮಾತು ಜ್ಯೋತಿರ್ಲಿಂಗ	ಸೋದರಿ ಕುಮುದಾ	೧೫
೬.	ಸ್ಫುರಣ–ಕಿರಣ	ಮಾತಾಜಿ	೧೯
೭.	ಒಂದು ಸಂದರ್ಶನ	„	೨೦
೮.	ಬಸವ ಬೀಡಿನಿಂದ ಸಿರಿಯ ನಾಡಿಗೆ	„	೨೭
೯.	Parable	Mataji	೪೧
೧೦.	Sing dear children sweet song	sister Umadevi	೪೩
೧೧.	"ಬಸವ ಭಾರತಿ" ವಿದ್ಯಾಲಯ		೪೫
೧೨.	ವಿಶ್ವಜ್ಯೋತಿ	ಜಿ. ಮಹಾದೇವಸ್ವಾಮಿ	೪೭
೧೩.	ಸನ್ಮಾನ ಪತ್ರ	ಬ್ಯಾಡಗಿ ನಗರ ಭಕ್ತಮಂಡಳಿ	೫೮
೧೪.	ಚಿಂತನ	ಮಾತಾಜಿ	೬೦

ಮುಖಪುಟ : ಧ್ಯಾನಮಗ್ನ ಪೂಜ್ಯ ಮಾತಾಜಿ



ಮಾತೃ ವಾಣಿ

ಹದಿಮೂರು ಮಾರ್ಚ್ ೧೯೮೧, ಮೂವತ್ತೈದು ವರ್ಷಗಳ ಆಯುಷ್ಯ ಸವೆದು ಹೊಸ ಹುಟ್ಟು ಹಬ್ಬವನ್ನು ಆಚರಿಸುವ ದಿನ. ಈ ಬಾರಿಯ ಹುಟ್ಟುಹಬ್ಬ ಹತ್ತಾರು ಸಾವಿರ ಮೈಲಿಯ ಆಚೆಯ ಪಾಶ್ಚಿಮಾತ್ಯ ರಾಷ್ಟ್ರವೊಂದರಲ್ಲಿ. ಕಳೆದ ವರ್ಷ ಬಳ್ಳಾರಿಯಲ್ಲಿ. ಜೀವನವೊಂದು ಸತತವಾಗಿ ಹರಿಯುವ ಕಾಲ ಪ್ರವಾಹ. ಯಾರು ಬಯಸಲಿ ಬಿಡಲಿ, ತನ್ನ ಪಾಡಿಗೆ ತಾನು ಸಾಗುತ್ತ ಹೋಗುವುದು. ಒಂದು ನದಿಯು ಸಮುದ್ರ ಸೇರುವ ಗುರಿಯೊಡನೆ ಹುಟ್ಟಿದ ಕ್ಷಣದಿಂದಲೇ ಹರಿಯ ತೊಡಗುವುದು. ಕೆಲವು ಊರಿನ ಜನ ಅದರ ಸದುಪಯೋಗ ಮಾಡಿಕೊಳ್ಳುವರು. ಇನ್ನು ಕೆಲವು ಕಡೆ ಅಣೆಕಟ್ಟು ಕಟ್ಟುವರು; ಇನ್ನು ಕೆಲವು ಕಡೆ ಸದುಪಯೋಗ ಮಾಡಿಕೊಳ್ಳುವುದರ ಬದಲಿಗೆ ಊರಿನ ಕೊಳಚೆಯನ್ನು ಅದಕ್ಕಿಷ್ಟು ಸೇರಿಸುವರು. ಆದರೆ ಆ ನದಿ ಮಾತ್ರ ನಿರ್ವಿಕಾರವಾಗಿ ಹರಿಯುತ್ತ ಹೋಗುವುದು. ನೀರು ಬಯಸಿದವರಿಗೆ ನೀರು ಕೊಟ್ಟು ದಾಹ ಹಿಂಗಿಸುವುದು. ಮೈ ತೊಳೆದುಕೊಂಡು ಸ್ವಚ್ಛವಾಗಲು ಇಚ್ಛಿಸಿದವರಿಗೆ ಮೈ ತೊಳೆದು ಸಂತೈಸುವುದು. ಅಣೆಕಟ್ಟು ಕಟ್ಟಿ ತಡೆದಿಟ್ಟುಕೊಳ್ಳುವವರ ಬಳಿ ತುಂಬಿ ನಿಂತು ಮತ್ತೆ ಮುಂದಕ್ಕೆ ಹರಿಯುವುದು; ಕೊಳಚೆಯನ್ನು ಸೇರಿಸಿದರೆ ಅದನ್ನೂ ಸ್ವೀಕರಿಸಿ, ನಿರ್ವಿಕಾರವಾಗಿ ಹರಿಯುತ್ತ ಬಿಸಿಲಿನ ಕಿರಣಗಳಿಗೆ ಮೈಯೊಡ್ಡಿ ತನ್ನಲ್ಲಿ ಸೇರಿಸಲ್ಪಟ್ಟ ಕೊಳಚೆಯನ್ನು ಕಡಿಮೆ ಮಾಡಿಕೊಳ್ಳುತ್ತ ಮತ್ತೆ ಕೊಂಚ ದೂರ ಹರಿಯುವುದರೊಳಗೇ ಶುದ್ಧೀಕರಣ ಹೊಂದಿ ಬಿಡುವುದು.

ಹೀಗೆ ಧಾರ್ಮಿಕ ಜನರ ಜೀವನವನ್ನೂ ಈ ನದಿಗೆ ಹೋಲಿಸಬಹುದು. (ಅದೇಕೋ ಜೀವನವನ್ನು ನದಿಗೆ ಹೋಲಿಸುವ ಉಪಮೆ ನನಗೆ ತೀರಾ ಹಿಡಿಸಿದೆ. ಬೇರೆಷ್ಟೋ ಉಪಮೆಗಳನ್ನು ನಾನು ಹುಡುಕುತ್ತಲೇ ಇದ್ದೇನೆ. ಯಾವುದೂ ಇಷ್ಟು ಸಮಂಜಸವೆನಿಸಿಲ್ಲ. ಪರ್ವತ, ಗಾಳಿ ಮುಂತಾದ ನೈಸರ್ಗಿಕ ವಸ್ತುಗಳಿಗೆ, ಯುದ್ಧಭೂಮಿ, ನಾಟಕರಂಗ ಮುಂತಾದ ಚಟುವಟಿಕೆಗೆ ಹೋಲಿಸಿವರೂ ಅವೆಲ್ಲ ಏಕದೇಶೀಯ ಎನಿಸುವುದು. ಈ ಅರ್ಥವ್ಯಾಪ್ತಿಯ ದೃಷ್ಟಿಯಿಂದ ನದಿಯ ಉದಾಹರಣೆ ನನಗೆ ತುಂಬಾ ಪ್ರಿಯ. ಅಂತೆಯೇ ಈ ಸ್ಫೂರ್ತಿಯಿಂದ ತರಂಗಿಣಿ–ಅಕ್ಕ ಮಹಾದೇವಿಯನ್ನು ಕುರಿತಾದ ಕಾದಂಬರಿ ಸೃಷ್ಟಿಯಾಯಿತು). ನದಿ ಯಾವುದೋ ಗಿರಿ ತಪ್ಪಲಲ್ಲಿ, ಕಣಿವೆಯಲ್ಲಿ ಜನನ. ಜನನ–ಬಾಲ್ಯಗಳ ಸ್ಥಿತಿಯಲ್ಲಿ ಸಾಮಾನ್ಯ ಸೆಲೆಯಂತೆಯೋ ಹಳ್ಳದಂತೆಯೋ ಹರಿಯುವುದು. ನಂತರ ಹಲವಾರು ಕಿರುಹಳ್ಳಗಳನ್ನು ತೊರೆಗಳನ್ನು ಸೇರಿಸಿಕೊಂಡು ಬೃಹತ್‌ರೂಪ ಪಡೆಯುತ್ತ ಮುಂದೆ ಸಾಗುವುದು. ದಾರಿಯಲ್ಲಿ ಬರುವ ಎಡರುತೊಡರನ್ನು ಗೆಲ್ಲುವುದು. ಕಣಿವೆ ಕೊಳ್ಳಗಳು ಬಂದಾಗ ಕೊರೆಯುತ್ತ ಹರಿದು, ಪ್ರಪಾತಗಳು ಇದಿರಾದಾಗ ಧುಮ್ಮಿಕ್ಕಿ ನರ್ತಿಸಿ, ಬೆಟ್ಟಗಳು ಇದಿರಾದಾಗ ಅವನ್ನು ಸೀಳಿಯೋ ಬಳಸಿಯೋ ಹರಿದು ಬಯಲಲ್ಲಿ ಸಾಗುವುದು. ಕಂಟಕಗಳ ಸರಪಳಿ ಮುಗಿಯುತ್ತಿದ್ದಂತೆಯೇ ಬಯಲಲ್ಲಿ ವಿಸ್ತಾರವಾದ ಸೊಬಗಿನಿಂದ ಹರಿದು, ಜುಳು ಜುಳು ನಾದವನ್ನು ಮಾಡುತ್ತಾ, ತನ್ನ ಪಾಡಿಗೆ ತಾನು ಕಾಲಿನ ಗೆಜ್ಜೆಯೊಡನೆ ಆಡುತ್ತ ಮೈಮರೆತ ಎಳೆಕೂಸಿನಂತೆ, ತನ್ನ ನಾದದಲ್ಲೇ ತಾನು ಮೈಮರೆಯುತ್ತ ಸಾಗುವುದು. ಬಡವರು-ಬಲ್ಲಿದರು, ಅಜ್ಞಾನಿಗಳು–ಸುಜ್ಞಾನಿಗಳು, ಪಾಪಿಗಳು–ಪುಣ್ಯಾತ್ಮರು ಎಂಬ ಭೇದವಿಲ್ಲದೆ ಬಯಸಿ ಬಂದವರಿಗೆಲ್ಲ ನೀರನ್ನು ಧಾರೆಯೆರೆಯುವುದು. ಹತ್ತಿರದ ಹೊಲಗಳಿಗೆಲ್ಲ ನೀರುಣ್ಣಿಸಿ ಬೆಳೆ ಬೆಳೆಯುವುದು.

ಶೀತವಲಯದ ರಾಷ್ಟ್ರಗಳಲ್ಲಿ ನದಿಯ ನೀರು ಈಗ ಹೆಪ್ಪುಗಟ್ಟಿರುವುದು. ನೋಡಲಿಕ್ಕೆ ಒಂದು ವಿಲಕ್ಷಣ ದೃಶ್ಯ. ಬೇರೆ ಬೇರೆ ಏನಾದರೂ ಭಂಗಿಗಳಲ್ಲಿ ಆಡುತ್ತ, ಕುಣಿಯುತ್ತ ಇದ್ದಾಗ ಯಾರಾದರೂ ಸಮ್ಮೋಹನ ವಿದ್ಯೆ ಪ್ರಯೋಗಿಸಿದರೆ ಅಥವಾ ಅವರಿಗೇ ಸ್ವತಃ ಸ್ತಂಭೀಭೂತತ್ವ ಪ್ರಾಪ್ತಿಯಾದರೆ ಯಾರು ಹೇಗೇಗಿರುವರೋ ಹಾಗೆಯೇ ನಿಲ್ಲುವಂತೆ, ನದಿಯು ಹೆಪ್ಪುಗಟ್ಟಿರುವುದು. ಏರಿಳಿಯುವ ಅಲೆಗಳು ಹಾಗೆಯೇ ಹೆಪ್ಪುಗಟ್ಟಿರುತ್ತವೆ. ಸುಳಿಯು ತಿರುಗುತ್ತಾ ಹಾಗೇ ಹೆಪ್ಪಾಗಿರುತ್ತದೆ. ಒಂದು ತರಹದ ಸ್ಥಿರಚಿತ್ರ (still life) ನೋಡಿದಂತಾಗುತ್ತದೆ. ಚಳಿಗಾಲದ ನದಿ, ಗಿಡಗಳನ್ನು ನೋಡಿದರೆ, ನಿಸರ್ಗದ ಬಗ್ಗೆ ಜಿಗುಪ್ಸೆಗೊಂಡು ನದಿ

ಹೀಗೆ ಮೌನ ತಪಸ್ವಿಯಂತೆ ನಿಂತಿದೆಯೇನೋ ಎನ್ನಿಸುವುದು. ಆದರೆ ಈ ಜಡತ್ವ ತಾತ್ಕಾಲಿಕ, ಶಾಶ್ವತವಲ್ಲ. ಬೇಸಿಗೆಯ ಹೊಂಗಿರಣಗಳು ಚೆಲ್ಲುವರಿಯುತ್ತಿದ್ದಂತೆಯೇ ಪುನಃ ಶಕ್ತಿಯನ್ನು ಮೈಗೂಡಿಸಿಕೊಂಡು ಒಣಗಿನಿಂತ ಗಿಡಗಳು ಚಿಗುರೊಡೆಯುತ್ತವೆ; ಹೆಪ್ಪುಗಟ್ಟಿನಿಂತ ನದಿ ಕರಗಿ ಕಲರವ ನಿನಾದದೊಡನೆ ಹರಿಯಲು ತೊಡಗುವುದು. ಅಂತೂ ಮುಂದೆ ಸಾಗಿ ಸಮುದ್ರವನ್ನು ಬೆರೆದೇ ತೀರುವುದು.

ಇಂಥ ನೈಸರ್ಗಿಕ ನದಿಯನ್ನು ಜೀವನದ ನದಿಗೆ ಹೋಲಿಸಬಹುದು ಸಂಪೂರ್ಣವಾಗಿ. ಧಾರ್ಮಿಕ ಜನರ ಜೀವನವಾದರೂ ಹೀಗೆಯೇ. ತಾಯಿ ತಂದೆಯರ ಗರ್ಭದ ಗಿರಿಕಂದರದಲ್ಲಿ ಜನನ. ಕೆಲವೊಂದು ನದಿಗಳು ಹುಟ್ಟಿನಿಂದ ಕಡೆಯವರೆಗೂ ಒಂದೇ ಹೆಸರನ್ನು ಧರಿಸಿರುತ್ತವೆ. ಉದಾಹರಣೆಗೆ ಕಾವೇರಿ. ತಲಕಾವೇರಿಯಿಂದ ಸಮುದ್ರ ಸೇರುವವರೆಗೂ ಅದೇ ಹೆಸರು. ಇನ್ನು ಕೆಲವು ನದಿಗಳು ಕೊಂಚ ಹರಿದಾನಂತರ ಹೊಸ ಹೆಸರು ಧರಿಸುತ್ತವೆ. ತುಂಗಾ–ಮತ್ತು ಭದ್ರ ಎರಡೂ ಸೇರಿದಾನಂತರ ತುಂಗಭದ್ರೆಯಾದರೆ, ಮಲಪ್ರಭಾ–ಕೃಷ್ಣೆ ಸೇರಿದಾನಂತರ ಪ್ರಭೆಯ ಹೆಸರಳಿದು, ಕೃಷ್ಣೆಯ ಹೆಸರು ಮಾತ್ರ ಉಳಿಯುತ್ತದೆ. ಹಾಗೆಯೇ ಕೆಲವರು ಬಾಲ್ಯದಿಂದಲೂ ಒಂದೇ ಪ್ರಕಾರದ ಸಾತ್ವಿಕ ಜೀವನ ನಡೆಸಿ, ಅಭಿರುಚಿ ಬೆಳೆಸಿಕೊಂಡು ಸಂತ ಜೀವನ ಪ್ರವೇಶಿಸುವರು. ಇನ್ನು ಕೆಲವರು ಬಾಲ್ಯದ ಪ್ರವೃತ್ತಿ ಅಭಿರುಚಿ ಏನೇ ಇದ್ದರೂ ಸಂಪೂರ್ಣ ಬದಲಾವಣೆ ಹೊಂದಿ, ಆಧ್ಯಾತ್ಮಿಕ ಹೊಸ ಜೀವನವನ್ನು ಪಡೆದು ಮುನ್ನಡೆಯುವರು.

ಈ ಜೀವನ ನದಿಯು ಜ್ಞಾನಪ್ರವಾಹವನ್ನು ತುಂಬಿಕೊಂಡು ವೃದ್ಧಿಯಾಗುತ್ತ ಹೋಗಿ, ಸಾಹಿತ್ಯ ಸೃಷ್ಟಿಯ ಅಣೆಕಟ್ಟಿನಲ್ಲಿ ತಡೆದು ನಿಂತು, ಬೋಧೆ, ಸಾಹಿತ್ಯ ಕೃತಿ ರಚನೆಯ ನಾಲೆಗಳಲ್ಲಿ ಹರಿದು ವ್ಯಕ್ತವಾಗಬಹುದು. ಜೀವನ ನದಿಗೆ ಇದಿರಾಗುವ ಹಲವು ಬಗೆಯ ಕಂಟಕಗಳನ್ನು ಚಿತ್ತ ಸಮತೆಯಿಂದ ಎದುರಿಸುತ್ತ, ಪ್ರಶಾಂತವಾಗಿ ಹರಿಯುತ್ತ ತನ್ನ ಆತ್ಯಂತಿಕ ಗುರಿ ಎಡೆಗೆ ಸಾಗುವುದು. ಮಾರ್ಗ ಮಧ್ಯದಲ್ಲಿ ಅನೇಕ ಸಹೃದಯರಿಗೆ, ಸಾಧಕರಿಗೆ, ನೊಂದವರಿಗೆ ಜ್ಞಾನದ ನೀರುಣ್ಣಿಸಿ, ಅವರೆಲ್ಲರನ್ನು ಪುನೀತಗೊಳಿಸಿ ಮುಂದಕ್ಕೆ ಹರಿಯುವುದು. ಈ ನದಿಯ ಓಟದಂತೆ ನಿರಂತರವಾಗಿ, ನಿರ್ವಿಕಾರವಾಗಿ ಜೀವನ ಪ್ರವಾಹವೂ ಹರಿಯಬೇಕು ಎಂದು ಎಷ್ಟೋ ಬಾರಿ ನನಗನ್ನಿಸುವುದು.

ಆದರೆ ಕಲ್ಪನೆಯ ಕುದುರೆಯನ್ನು ವಾಸ್ತವಿಕ ಕುದುರೆ ಬೆನ್ನಟ್ಟಲಾರದು. ಆದರ್ಶಗಳು ಎಷ್ಟೊಂದು ರಮ್ಯವೆನಿಸುತ್ತವೆ. ಆದರೆ ಅವು ಪ್ರಯೋಗಕ್ಕೆ ಬರುವಾಗ

ಎಷ್ಟೊಂದು ಆಘಾತಗಳನ್ನು ಎದುರಿಸುತ್ತವೆ. ಲೋಕದ ಸುತ್ತಲಿನ ಜನರ ವೈವಿಧ್ಯಮಯ ಗುಣನಡತೆ, ಪ್ರತಿಕ್ರಿಯೆ ಎಲ್ಲವನ್ನೂ ಕಂಡಾಗ ಎಷ್ಟೋಬಾರಿ ನಿರಾಶೆಯ ಕಾರ್ಮೋಡ ಕವಿಯುವುದು. ಮನುಷ್ಯನನ್ನು ತಿದ್ದಲೆಳಸುವುದು ತುಂಬಾ ವ್ಯರ್ಥಸಹಿತ ಪ್ರಯತ್ನ; ಅಂಥದಕ್ಕೆ ಪ್ರಯತ್ನವನ್ನೇ ಮಾಡಬಾರದು ಎನ್ನಿಸದಿರದು. ಬಹುಶಃ ದೇವರೂ ಸಹ ಒಬ್ಬೊಬ್ಬ ಸತ್ತಾಗಲೂ (ಕೆಲವೇ ಕೆಲವು ಸಾರ್ಥಕಜೀವಿಗಳು ಸತ್ತಾಗ ಬಿಟ್ಟು) ಪಶ್ಚಾತ್ತಾಪ; ವ್ಯಥೆ ಪಡುವನೇನೋ; "ನಾನು ಹುಟ್ಟಿಸಿದ ಈ ಜೀವಿ ಯಾವ ಸಾರ್ಥಕ್ಯವನ್ನೂ ಸಾಧಿಸಲಿಲ್ಲ ಬಹುಮೂಲ್ಯವಾದ ಮಾನವಜನ್ಮ ವ್ಯರ್ಥವಾಯಿತಲ್ಲಾ" ಎಂದು ಪರಿತಾಪ ಪಡುವನೇನೋ! ಆದರೆ ಅವನಿನ್ನೂ ಸಂಪೂರ್ಣ ನಿರಾಶನಾಗಿಲ್ಲ ಎಂಬುದಕ್ಕೆ ಸಾಕ್ಷಿ, ಇನ್ನೂ ಅನೇಕ ಜನರನ್ನು ಹುಟ್ಟಿಸುತ್ತಿರುವುದು. 'ಇವನಾದರೂ ಏನಾದರೂ ಸಾಧಿಸಬಹುದು' ಎಂಬ ಭರವಸೆಯಿಂದ ನಿರಾಶೆಗೊಳ್ಳದೆ ಪುನಃ ಪುನಃ ಸೃಷ್ಟಿಸುವ ಕಾರ್ಯದಲ್ಲಿ ತನ್ಮಯನಾಗಿಯೇ ಇದ್ದಾನೆ. ಹೀಗೆ ದೇವನು ಒಬ್ಬ ಮಹಾ ಆಶಾವಾದಿ.

ಈ ಆಶಾವಾದಿತ್ವದ ಕಲ್ಪನೆ ನಮಗೂ ಸ್ಫೂರ್ತಿ ನೀಡುತ್ತದೆ. 'ಹಾಕಿದ ಬೀಜಗಳೆಲ್ಲ, ಮೊಳೆಯಲಿಲ್ಲ, ಮೊಳೆತು ಸಸಿಯಾಗಲಿಲ್ಲ, ಸಸಿಯಾದರೂ ಸಂಪೂರ್ಣವಾಗಿ ಬೆಳೆಯಲಿಲ್ಲ, ಸಂಪೂರ್ಣವಾಗಿ ಬೆಳೆದರೂ ಫಲವೀಯಲಿಲ್ಲ' ಎಂದ ಮಾತ್ರಕ್ಕೇ ರೈತನು ವ್ಯವಸಾಯದ ಕಾಯಕ ನಿಲ್ಲಿಸನು. ಹುಟ್ಟಿದ ಜೀವಿಗಳೆಲ್ಲ ಪರಿಪಕ್ವತೆ ಸಾಧಿಸಲಿಲ್ಲ ಎಂದ ಮಾತ್ರಕ್ಕೇ ದೇವನು ಸೃಷ್ಟಿಯ ಕಾರ್ಯ ನಿಲ್ಲಿಸಲಿಲ್ಲ. ಹೀಗೆ ಆಲೋಚನೆ ಮಾಡಿದಾಗ ನಿರಾಶೆಯ ಕಾರ್ಮೋಡ ಸರಿದು ಆಶಾಕಿರಣದ ಹೊಂಬೆಳಕು ಕಾಣುತ್ತದೆ. ಸೂರ್ಯನು ಮುಳುಗುವಾಗ ನಿಸ್ಸತ್ವವಾಗಿ, ದಣಿದು ಮುಳುಗಿ ಮರುದಿನ ಮತ್ತೆ ಉತ್ಸಾಹದ ಬುಗ್ಗೆಯಾಗಿ ಹೊಂಗಿರಣಗಳನ್ನು ಚೆಲ್ಲುತ್ತಾ, ಮರುಕಳಿಸಿದ ಉತ್ಸಾಹದಿಂದ ಬರುವಂತೆ ಮನಸ್ಸೂ ಸಹ ಒಮ್ಮೊಮ್ಮೆ ನೊಂದು, ನಿರಾಶೆಗೊಂಡು ಎಲ್ಲ ಕಾರ್ಯಚಟುವಟಿಕೆ ಬಿಟ್ಟು ಕುಳಿತುಕೊಳ್ಳೋಣವೆಂದು ಆಲೋಚಿಸುತ್ತದೆ; ಮತ್ತೊಮ್ಮೆ ಯಾರೊಬ್ಬರಿಂದಲೋ ಸ್ಫೂರ್ತಿಗೊಂಡು ಮತ್ತೆ ಕಾರ್ಯೋನ್ಮುಖವಾಗುತ್ತದೆ. ಜೀವನ ಯಾತ್ರೆಯಲ್ಲಿ ಸಾಗುವಾಗ ಯಾರೋ ಬಂದು ಜೊತೆಗೂಡುತ್ತಾರೆ. ಸಹಾಯ ಹಸ್ತ ನೀಡುತ್ತಾರೆ. ಮತ್ತೆ ಯಾವಾಗಲೋ ಅಗಲುತ್ತಾರೆ ಎಂದೆಂದೂ ನಮ್ಮಿಂದ ಉಪಕೃತರಾಗದವರು ಅಸಾಮಾನ್ಯ ಉಪಕಾರ ಮಾಡುತ್ತಾರೆ. ಯಥೇಚ್ಛವಾಗಿ ತಿಂದುಂಡೂ ಅನ್ನವಿಟ್ಟ ಕೈಗೇ ಕಚ್ಚಿ ಹೋಗುವವರೂ ಇರುತ್ತಾರೆ. ಈ ಜೀವನವನ್ನು ವಿಶ್ಲೇಷಿಸುವುದೆಂತು? ನೀರನ್ನು ವಿಭಜಿಸಿ ಇದು H_2O ಗಳಿಂದ ಆಗಿದೆ ಎಂದು ನಿರ್ಣಯಿಸಿದಂತೆ, ಜೀವನಕ್ಕೂ

ಒಂದು ನಿರ್ದಿಷ್ಟ ಸೂತ್ರ (formula) ಕಂಡು ಹಿಡಿಯಲು ಸಾಧ್ಯವೆ? ಬದುಕು ಹೀಗೆ ಇರಬೇಕು ಎಂದು ಕೆಲವು ಆದರ್ಶಗಳನ್ನು ಗೊತ್ತುಪಡಿಸಲು ಸಾಧ್ಯವೆ? ಬಹಳ ಕಷ್ಟ. ವಿಚಾರಶೀಲನಾದವನು, ಚಿಂತನಾ ಸಾಮರ್ಥ್ಯವಿದ್ದವನು ಪರಿಸರವನ್ನು ತಿದ್ದಲೆಳಸುವವನು, ಸಾಮಾನ್ಯ ಜೀವನದಲ್ಲಿ ಅತೃಪ್ತನಾಗಿ, ಆದರ್ಶ ಜೀವನವನ್ನು ಬಯಸುವವನು ಈ ಹುಟ್ಟುಗುಣ ಪ್ರವೃತ್ತ ಜಗತ್ತಿನಲ್ಲಿ ತುಂಬಾ ಅಸುಖಿ; ಅತೃಪ್ತ. ಕೈಕಾಲು ಕಟ್ಟಲ್ಪಟ್ಟು, ಕಂಭಕ್ಕೆ ಬಿಗಿಯಲ್ಪಟ್ಟು, ಬಾಯಿಗೆ ಬಟ್ಟೆ ತುರುಕಲ್ಪಟ್ಟ ಓರ್ವಸಾಹಸಿಯ ಎದುರಿಗೆ ಓರ್ವ ಕೊಲೆಗಡುಕನು ಒಂದು ಮಗುವನ್ನೋ, ಓರ್ವ ಸ್ತ್ರೀಯನ್ನೋ ಕೊಲೆ ಮಾಡುತ್ತಿದ್ದರೆ ಅವನ ಪರಿಸ್ಥಿತಿ ಎಷ್ಟು ಚಿಂತಾಜನಕವೋ ಹಾಗೆಯೇ ಇಂದು ಆದರ್ಶವಾದಿಯ ಪರಿಸ್ಥಿತಿ. ಸುತ್ತಲಿನ ಪರಿಸ್ಥಿತಿ ಭಯಾನಕ. ಇವನ ಮನದಲ್ಲೋ ಆದರ್ಶಗಳ ತಾಡನ. ಪರಿಸ್ಥಿತಿ, ವ್ಯವಸ್ಥೆಯ ರಕ್ಕಸ ಶಕ್ತಿಯ ಮುಂದೆ ಇವನು ನಿಸ್ಸಹಾಯಕ.

ದೇಶ ಮುಂದಾಗಬೇಕು; ಜನರು ಜ್ಞಾನಿಗಳಾಗಬೇಕು. ಸದ್ಗುಣಿಗಳಾಗಿ ಜನತೆ ರಾಷ್ಟ್ರ ನಿರ್ಮಾಣದಲ್ಲಿ ತೊಡಗಬೇಕು. ಶ್ರೇಷ್ಠಮಟ್ಟದ ಜನಾಂಗವನ್ನು ನಿರ್ಮಾಣ ಮಾಡಬೇಕು ಎಂಬುದೆಲ್ಲ ಆಸೆಯೇ! ಇಂಥ ಆಸೆಯ ಕನಸು ನನಸಾಗಲು ಎಷ್ಟು ಕಷ್ಟ. ನನಸು ಮಾಡಲೆಂದು ಪ್ರಯತ್ನಿಸುವ ಪಥದಲ್ಲಿ ನೂರೆಂಟು ಎಡರು.

'ಮರಳಿ ಯತ್ನವ ಮಾಡು' ಎಂಬ ಒಂದೇ ಘೋಷಣೆಯೊಡನೆ ದೇವನಲ್ಲಿ ಅನನ್ಯವಾಗಿ ಬೇಡಬೇಕು, 'ನನ್ನ ಕನಸು–ನನಗಾಗಿ ತಾಳಿರುವುದಿಲ್ಲ, ಲೋಕಕ್ಕಾಗಿ ತಾಳಿರುವುದು–ನನಸಾಗಲಿ. ಅದನ್ನು ಕಾಣುವ, ಸಾಧಿಸುವ ಶಕ್ತಿಯನ್ನು ಕೊಡು. ಸಾಧನೆಯ ಪಥದಲ್ಲಿ ನಿರುತ್ಸಾಹವನ್ನು ಕೊಡದಿರು. ಈ ಸಾಧನೆಯ ಪಥದಲ್ಲಿ ಉತ್ತಮ ಚೈತನ್ಯಗಳನ್ನು ಜೊತೆಗೂಡಿ ನಡೆಯಲು ಕಳಿಸು. ನಿನ್ನ ಅನುಗ್ರಹ ಸದಾ ಇರಲಿ. ಗುರಿಯ ಬಗ್ಗೆ ಅನನ್ಯವಾದ ಶ್ರದ್ಧೆ ಇರಲಿ."

ಲೋಕದಲ್ಲಿ ಹುಟ್ಟಿರ್ದ ಬಳಿಕ
ಸ್ತುತಿನಿಂದೆಗಳು ಬಂದರೆ, ಮನದಲ್ಲಿ ಕೋಪವ ತಾಳದೆ
ಸಮಾಧಾನಿಯಾಗಿರಬೇಕು. —ಅಕ್ಕಮಹಾದೇವಿ

ಹಾಲುಳ್ಳಲ್ಲಿ ಹಬ್ಬವ ಮಾಡಿರೋ
ಗಾಳಿ ಬಂದಲ್ಲಿ ತೂರಿ ಕೊಳ್ಳಿರೋ
—ಸಿದ್ಧರಾಮ

ವಚನ ಪರುಷ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ನಿರ್ಲಿಪ್ತ ಶರಣ

ಭೋಗಿ ಎನಲಿಲ್ಲ ನಿರ್ಭೋಗಿ ಎನಲಿಲ್ಲ
ಕಾಮಿ ಎನಲಿಲ್ಲ, ನಿಷ್ಕಾಮಿ ಎನಲಿಲ್ಲ
ತನ್ನ ಪರಿ ಬೇರೆ ನೋಡಯ್ಯಾ.
ದೇವನೆನಲಿಲ್ಲ ಭಕ್ತನೆನಲಿಲ್ಲ
ಭಾವಿ ಎನಲಿಲ್ಲ ನಿರ್ಭಾವಿ ಎನಲಿಲ್ಲ.
ಭವ ಭವಂಗಳೆಲ್ಲವ ಪರಿಹರಿಸಿ ಕಳೆವ
ನಿರ್ಭಾಂತ ನಿರುತ್ತರ ಅಪ್ರತಿಮನು.
ಆ ಅಪ್ರತಿಮಂಗೆ ಪ್ರತಿಯುಂಟೆ?
ಕೂಡಲ ಚನ್ನ ಸಂಗಮದೇವಾ.

—ಚನ್ನಬಸವಣ್ಣನವರು

ಈ ಮೇಲಿನ ವಚನದಲ್ಲಿ ಚನ್ನಬಸವಣ್ಣನವರು ಶಿವಯೋಗಿಯ ವಿಶೇಷ ಮನಃಸ್ಥಿತಿಯನ್ನು, ದೃಷ್ಟಿಕೋನವನ್ನು ಕುರಿತು ಹೇಳುವರು. ಶರಣರ ಸಿದ್ಧಾಂತ ಜೀವನ ನಿರಾಕರಣ ಸಿದ್ಧಾಂತವಲ್ಲ, ಜೀವನ ಉದಾತ್ತೀಕರಣ ಸಿದ್ಧಾಂತ. ಶರಣನು ಭೋಗಿಯೂ ಅಲ್ಲ; ನಿರ್ಭೋಗಿಯೂ ಅಲ್ಲ. ಅಂದರೆ ತನ್ನ ಸಮಸ್ತ ಚಿತ್ತ, ಮನ, ಬುದ್ಧಿಗಳೆಲ್ಲವನ್ನೂ ಪರಮಾತ್ಮನೆಡೆಗೆ ಹರಿಸಿರುವುದರಿಂದ ಅವನು ಉಳಿದ ಲೌಕಿಕರಂತೆ ಇಂದ್ರಿಯಗಳ ಸುಖದಲ್ಲಿ ತಲ್ಲೀನನಾಗಿರನು. ಆದ್ದರಿಂದ ಭೋಗಿಯಲ್ಲ. ಆದರೆ ಅವನು ನಿರ್ಭೋಗಿಯೂ ಅಲ್ಲ. ಅಂದರೆ, ಅದು ಮಾಯೆ, ಇದು ಮಾಯೆ; ಉಳ್ಳಾಗಡ್ಡೆ ಮಾಯೆ, ಬೆಳ್ಳುಳ್ಳಿ ಮಾಯೆ, ನಲ್ಲಿಯ ನೀರು ಮಾಯೆ, ಹೀಗೆ ಭ್ರಾಂತನೂ ಅಲ್ಲ; ಬಂದುದನ್ನು ಸಮರ್ಪಣ ಭಾವದಿಂದ ಸ್ವೀಕರಿಸಿ ಪರಮಾತ್ಮನಿಗೆ ಅರ್ಪಿಸುವವನು. ಲೋಕದ ಜನರು ಉಣ್ಣುವಂತೆ, ವ್ಯವಹರಿಸುವಂತೆ ತಾನೂ ತೋರಿದರೂ ಮಾನಸಿಕವಾಗಿ ಅವರ ಮಟ್ಟದಾಟ ವಿಶೇಷ ಮನಃಸ್ಥಿತಿ ಪಡೆದಿರುತ್ತಾನೆ.

ಅವನು ಕಾಮಿಯೂ ಅಲ್ಲ, ನಿಷ್ಕಾಮಿಯೂ ಅಲ್ಲ. ದೇಹ ಇಂದ್ರಿಯಗಳ ತೃಪ್ತಿಯಲ್ಲಿ ಅವನಿಗೆ ಕೊಂಚವೂ ಆಸಕ್ತಿಯಿಲ್ಲ. ಆದರೆ ಅವನು ದೈವೀಕಾರುಣ್ಯಕ್ಕೆ, ಸಮರಸಕ್ಕೆ, ದಿವ್ಯಾನುಗ್ರಹಕ್ಕೆ ಹಂಬಲಿಸುವುದನ್ನು ನೋಡಿದರೆ ಅವನು ನಿಷ್ಕಾಮಿಯಲ್ಲ ಎನ್ನಿಸುತ್ತದೆ. ಸರ್ವಾಂಗದಿಂದಲೂ ಪರಮಾತ್ಮನನ್ನು ಅವನು ಕಾಮಿಸುತ್ತಾನೆ. ಒಂದರೆಕ್ಷಣವೂ ಭಕ್ತನನ್ನು ಬಿಟ್ಟಿರದ 'ಅತಿಕಾಮಿ'ಯಾದ ದೇವನ ನೆನಹಿನಲ್ಲಿರುವ ಭಕ್ತನೂ ಅತಿ ಕಾಮಿಯೇ! ಈ ಸ್ಥಿತಿ ಅನುಭಾವ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡುತ್ತದೆ.

ಒಮ್ಮೆ ಕಾಮನ ಕಾಲ ಹಿಡಿವೆ
ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ.
ಸುಡಲೀ ವಿರಹವ ನಾನಾರಿಗೆ ಧೃತಿಗೆಡುವೆ?
ಚನ್ನಮಲ್ಲಿಕಾರ್ಜುನ ದೇವನು ಎನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗಿತೆಯಾದೆನವ್ವಾ!

ವೀರವೈರಾಗ್ಯನಿಧಿ ಅಕ್ಕಮಹಾದೇವಿಯ ಈ ಅವಸ್ಥೆ ನೋಡಿದರೆ ಆಕೆ ನಿಷ್ಕಾಮಿ ಎನ್ನಿಸದು. ಲೌಕಿಕರ ವಿರಹಕ್ಕಿಂತಲೂ ಹೆಚ್ಚು ತೀವ್ರವೂ ಉತ್ಕಟವೂ ಆಗಿರುತ್ತದೆ ಈ ವಿರಹ. ಆದರೆ ಈ ವಿರಹ ದೈವೀಮುಖವಾಗಿ ಹರಿದಿರುವುದರಿಂದ ಶಿವಪ್ರೇಮವಾಗಿ, ಪರಿಶುದ್ಧತೆ ಹೊಂದಿರುತ್ತದೆ. ಶರಣನ ಮನವು ಮಾರುಗೊಂಡ, ತನುವ ಸೂರೆಗೊಂಡ ಸುಖವ ನೊಪ್ಪುಗೊಂಡ, ಇರುವನಿಂಬುಗೊಂಡವ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣನಾದ ದೇವನಾದ್ದರಿಂದ ಇದು ಲೌಕಿಕ ಕಾಮಿತ್ವವಲ್ಲ, ಪಾರಲೌಕಿಕ ದೈವೀಸ್ಥಿತಿ.

ತಾನು ಭಕ್ತ, ಪೂಜಿಸುವವ; ದೇವನು ಪೂಜೆಗೊಳ್ಳುವವನು ಎಂಬ ಭಾವನೆಯಿಂದ ಇವನ ಪೂಜೆ ಮತ್ತು ಸಾಧನೆ ಆರಂಭವಾದರೂ ಬರುಬರುತ್ತ ದೈವೀ ಆನಂದದ ಮಡಿಲಲ್ಲಿ ವಿಹರಿಸುವಾಗ ಭಕ್ತ-ದೇವರ ದ್ವೈತಭಾವ ಕರಗಿ, ತಾನೇ ತಾನಾದ ಸ್ಥಿತಿಗೆ ಬರುವನು. ಆಗ ಪೂಜ್ಯ-ಪೂಜಕ-ಪೂಜೆ ಎಂಬ ತ್ರಿಪುಟಿಯಳಿಯುವುದು. ಆಗ ಸಾಧಕನಿಗೆ ತಾನು ಭಕ್ತನೋ, ಪೂಜಿಸುವವನೋ ಅಥವಾ ದೇವನೇ ಲೀಲೆಗಾಗಿ ಭಕ್ತನಾಗಿ ಪೂಜಿಸಿಕೊಳ್ಳಲ್ಪಡುತ್ತಿರುವನೋ ಎಂಬ ಭಾವ ಅಳವಡುವುದು.

ಆಗ ಭಾವಿಯಲ್ಲದ ನಿರ್ಭಾವಿಯಲ್ಲದ ನಿರ್ವಿಕಾರ ಸ್ಥಿತಿಗೆ ತಲ್ಪುವನು. ದೇವನ ದಿವ್ಯಸ್ಥಿತಿಯನ್ನು ಅನುಭವಿಸುತ್ತ, ಆನಂದಿಸುತ್ತ ಹೊರಟವನು ಅನುಭವಿಸುವ ಭಾವವನ್ನೂ ಮರೆತು ನಿರ್ಭಾವದ ಸ್ಥಿತಿಗೆ ಬರುವನು ಆಗ ಹಾಡುವನು,

ಕಂಗಳು ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ.
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನವ ತುಂಬಿದ ಬಳಿಕ ನೆನೆಯಲಿಲ್ಲ.
ಮಹಂತ ಕೂಡಲ ಸಂಗಮದೇವನ !

ಇಂಥ ಸ್ಥಿತಿ ಹೊಂದಿಯೂ, ಲೋಕದ ಸೇವೆಯಲ್ಲಿ ತಲ್ಲೀನನಾಗುವನು. ಮಾಡುವವ ನಾನು ಎಂಬ ಭಾವ ಮರೆತು ದೇವನ ಒಂದು ಅಂಗತಾನೆಂದು ನಿರ್ಲಿಪ್ತ ಪ್ರಜ್ಞೆಯಿಂದ ಮಾಡುವನು. ಪರಮಾತ್ಮನ ಸಾಕಾರರೂಪವಾಗಿ, ವಿಶೇಷ ಪ್ರತಿನಿಧಿಯಾಗಿ ಲೋಕದ ಜನರ ಭವವನ್ನು ಪರಿಹರಿಸುವನು. ತಾನಷ್ಟೇ ದೈವೀಜ್ಞಾನವನ್ನು ಹೊಂದಿದರಾಗದು. ಉಳಿದವರೂ ಹೊಂದಿ ಆನಂದ ಪಡಲೆಂದು ಮರಳಿ ಲೋಕ ಜಾಗೃತಿಯ ಕಾರ್ಯದಲ್ಲಿ ತೊಡಗುವನು. ಆದರೆ ಈಗವನು ಕಾರ್ಯ ಮಾಡುವುದು ಭ್ರಾಂತ ಸ್ಥಿತಿಯಲ್ಲಲ್ಲ, ನಿರ್ಭ್ರಾಂತ ಸ್ಥಿತಿಯಲ್ಲಿ. ವಾದ ವಿವಾದಗಳಿಲ್ಲದ ಶುದ್ಧ ದೈವೀ ಅನುಭವದ ನಿರುತ್ತರ ಸ್ಥಿತಿಯಲ್ಲಿ ನಿಂತು ಕಾರ್ಯೋನ್ಮುಖವಾಗಿರುವನು. ಅವನನ್ನು ಯಾರಿಗೆ ಹೋಲಿಸುವುದು ? ದೇವರಿಗೆ ?! ಇಲ್ಲ; ಹುಟ್ಟದ ಸಾಯದ, ಭವಕ್ಕೆ ಬೀಳದ ದೇಹಮನಗಳ ಉಪಾಧಿಗೇ ಸಿಕ್ಕದ ಆ ದೇವನದೇನು ದೊಡ್ಡಸ್ತಿಕೆ ! ಅವನೊಡ್ಡಿದ ಎಡರು ತೊಡರು ಕಂಟಕಗಳನ್ನು ದಾಟ ಮುನ್ನಡೆದ ಶರಣನು ಬಹುದೊಡ್ಡ ವ್ಯಕ್ತಿ. ಇಂದ್ರಿಯಾಸಕ್ತನಾದ ಮಾನವನಿಗೆ ಹೊಲಿಸೋಣವೇ ? ಇಲ್ಲ. ಹುಟ್ಟುಗುಣ ಇಂದ್ರಿಯಾಸಕ್ತಿಯ ಸೆಳವಿಗೇ ಸಿಕ್ಕದ ಮಹಾನುಭಾವಿ ಈ ಶರಣ. ಹಾಗಾದರೆ ಜ್ಞಾನಿಯಾಗಿ, ಅಂತರ್ಮುಖಿಯಾಗಿ ತುರ್ಯಾತೀತ್ ಸ್ಥಿತಿಯಲ್ಲಿ ಬಹಿರ್ ಪ್ರಜ್ಞೆಯಳಿದು ಬಾಳುವ ಜ್ಞಾನಿಗೆ ಹೋಲಿಸೋಣವೆ ? ಇಲ್ಲ. ಅಂಥ ದಿವ್ಯಾನುಭವ ಹೊಂದಿಯೂ ತನ್ನ ಮನವನ್ನು ಮರ್ತ್ಯದ ಪರಿವರ್ತನೆಗೆ ತೊಡಗಿಸಿ, ಕಾರ್ಯಪ್ರವೃತ್ತನಾಗಿರುವ ಈ ಮಹಾಂತನನ್ನು ನಿಶ್ಯಬ್ದ ಜ್ಞಾನಿಗೆ ಹೋಲಿಸಲಾಗದು. ಹೀಗಾಗಿ ಶರಣನು ಅಪ್ರತಿಮನು, ಅವನಿಗೆ ಹೋಲಿಸಲು ಲೋಕದಲ್ಲಿ ಬೇರೆಯುವರು ಸಿಗುವುದು ಕಷ್ಟ. ಅವನು ಸರ್ವಾಂಗಲಿಂಗಿ, ಅತಿಮಾನವ, ಲೋಕಸಂಗ್ರಹಿ, ಅನುಭಾವಿ, ದಿವ್ಯಜ್ಞಾನಿ.

ವಿಶ್ವಕಲ್ಯಾಣ ಗುರಿಮುಟ್ಟ ಬಯಸುವ ಪಥಿಕನು
ಬಸವ ಪಥದಲ್ಲಿ ಬಾಳರಥ ನಡೆಸಲಿ !

ಸಮಸ್ಯೆ? ಸಮಾಧಾನ!

ಡಿ. ಆರ್. ರಾಮಯ್ಯ. ದ್ಯಾವರನಹಳ್ಳಿ

★ ನೋಬೆಲ್ ಪ್ರಶಸ್ತಿ ವಿಜೇತೆಯಾದ ಮದರ್ ತೆರೇಸಾ, ಬ್ಯಾಬಿಲೋನಿಯಾದ ರಾಜ ಹಮ್ಮೂರಾಬಿ ಮುಂತಾದ ಅನೇಕರು ಕುಟುಂಬ ಯೋಜನೆಯನ್ನು ಭ್ರೂಣಹತ್ಯೆ ಎಂದು ವಿರೋಧಿಸಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ವೇನು ?

● ಈ ಸಮಸ್ಯೆಗಳು ಇಂದು ನೈತಿಕ ಸಮಸ್ಯೆಗಳಾಗಿರುವುದಕ್ಕಿಂತ ಹೆಚ್ಚು ರಾಜಕೀಯ, ರಾಷ್ಟ್ರೀಯ, ಮಾನವೀಯ ಸಮಸ್ಯೆಗಳಾಗಿವೆ. ಒಬ್ಬ ಮನುಷ್ಯ ಸಾಯಲೇ ಬೇಕಾದ್ದು ನಿಜವಿದ್ದರೂ ಸಾವನ್ನು ಮುಂದಕ್ಕೆ ದೂಡಲು ವೈದ್ಯರು ಯತ್ನಿಸುವರು. ಹೇಗಿದ್ದರೂ ಸಾಯಲೇಬೇಕಾದ ನಶ್ವರ ಜೀವಿ ಇಂದೇ ಸತ್ತರೇನಂತೆ ಎಂದು ಭಾವಿಸಿದರೆ ವೈದ್ಯವಿಜ್ಞಾನ ಬೇಕೇ ಇಲ್ಲ. ಹಾಗೆಯೇ ಈಗಾಗಲೇ ಹುಟ್ಟಿರುವ ಹಲವಾರು ಹೊಟ್ಟೆಗಳೊಡನೆ ಹಂಚಿಕೊಂಡು ತಿನ್ನ ಬೇಕಾದ ಪರಿಸ್ಥಿತಿ ಎದುರಿಸುತ್ತಿರುವ ಮಾನವ ಇನ್ನಷ್ಟನ್ನು ಸೃಷ್ಟಿಸಿದರೆ, ಆಗ ಬಡತನವನ್ನೇ ಹಂಚಿಕೊಳ್ಳಬೇಕಾಗುತ್ತದೆ.

ಸಂಯಮದಿಂದ ಜನಸಂಖ್ಯೆಯನ್ನು ನಿಗ್ರಹಿಸಿದರೆ ಅದು ಭ್ರೂಣ ಹತ್ಯೆ ಹೇಗಾದೀತು ? ಮೈದಳೆಯುವ ಮುನ್ನವೇ ಒಂದು ಮಗು ಹುಟ್ಟಲು ಅವಕಾಶ ನೀಡದಿದ್ದರೆ ಅದು ಭ್ರೂಣ ಹತ್ಯೆಯಲ್ಲ. ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಕುಟುಂಬ ಯೋಜನೆ ಅನಿವಾರ್ಯ. ಆದರೆ ತೆರೇಸಾರಂತಹವರೂ ಇಂದು ರಾಜಕೀಯ ದೃಷ್ಟಿಯಿಂದ ಮಾತನಾಡುತ್ತಾರೆ. ಹಿಂದೂಸ್ಥಾನದಲ್ಲೇ ಅನಾಥರಾಗಿರುವ ಹಿಂದುಗಳಿಗೆ ಯಾವ ಧಾರ್ಮಿಕ ರಕ್ಷಣೆ ಇಲ್ಲ; ಅಲ್ಪ ಸಂಖ್ಯಾತರು ಭಾರತದ ದತ್ತುಪುತ್ರರು ಎಂದರಿತಿರುವ ತೆರೇಸಾ ಇಂಥ ಮಾತ

ನಾಡಿದರೆ ಆಶ್ಚರ್ಯವೇನಲ್ಲ. ಕ್ರೈಸ್ತ ಶಾಸ್ತ್ರದ ಪ್ರಕಾರ ಕುಟುಂಬ ಯೋಜನೆ ಪಾಪವಾದರೆ ಇಂಗ್ಲೆಂಡ್, ಅಮೆರಿಕಾದಲ್ಲಿ ಏಕೆ ಜಾರಿಗೆ ತಂದಿದ್ದಾರೆ? ಅಲ್ಲೇಕೆ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ? ಬಡತನ ಹೆಚ್ಚಿದಷ್ಟೂ, ಬಡವರು ಹೆಚ್ಚಿದಷ್ಟೂ ಕ್ರೈಸ್ತ ಧರ್ಮಕ್ಕೆ ಸುಗ್ಗಿಕಾಲ ಎಂಬುದನ್ನು ತೆರೇಸಾ ಅರಿತಿದ್ದಾರೆ. ಕ್ರೈಸ್ತರು, ಮುಸ್ಲಿಮರು ಜನಸಂಖ್ಯಾ ದೃಷ್ಟಿಯಿಂದ ಹೆಚ್ಚಬೇಕು, ಅಂದರೆ ಹಿಂದೂ ಜನಾಂಗ ಕ್ಷೀಣವಾಗುತ್ತದೆ ಎಂದೇ ಆ ನೇತಾರರ ಧೋರಣೆ ಪ್ರಚಾರ ಮತ್ತು ಕಾರ್ಯ. ಆ ದೃಷ್ಟಿಯಿಂದ ಸರ್ಕಾರ ಎಲ್ಲರಿಗೂ ಒಂದೇ ಕಾಯಿದೆ ಮಾಡದಿದ್ದರೆ, ಹಿಂದುಗಳು ಬಡತನದಿಂದ ಸತ್ತರೂ ಚಿಂತೆಯಿಲ್ಲ, ಹೆಚ್ಚು ಮಕ್ಕಳನ್ನು ಉತ್ಪಾದಿಸಬೇಕು ಎಂದು ಹಿಂದೂ ಧರ್ಮಗುರುಗಳು ಹೇಳಬೇಕಾದೀತು.

ರಾಜಕುಮಾರ ಶೆಟಕಾರ ಬೀದರ.

★ ಗುಡಿಗಳಿಗೆ ಹೋಗುವ ಭಕ್ತರು ಗುಡಿಗೆ ಸುತ್ತುಹಾಕಲು ಕಾರಣವೇನು?

● ದೇವರೇ ನೀನು ಸರ್ವವ್ಯಾಪಿ. ಇಂತಹ ನಿನಗೆ ನಾನು ನಮಸ್ಕರಿಸುವುದೆಂತು? ನನ್ನ ತೃಪ್ತಿಗಾಗಿ ನಿನ್ನನ್ನು ಸೀಮಿತಗೊಳಿಸಿ, ನಿನ್ನನ್ನು ಸುತ್ತುತ್ತ ಸರ್ವವ್ಯಾಪಿಯಾಗಿರುವೆ ಎಂಬುದನ್ನು ಸಿದ್ಧಾಂತೀಕರಿಸುವೆ ಎಂದಿರಬಹುದು.

★ ಲಿಂಗಾಯತ ಧರ್ಮದ ಸಂಸ್ಥಾಪಕ ಬಸವಣ್ಣನವರೇ ಗೃಹಸ್ಥರಿದ್ದರು ಅಂದಾಗ ಮಠಾಧೀಶರೂ ಗೃಹಸ್ಥರೇಕಾಗಬಾರದು?

● ಬ್ರಹ್ಮಚರ್ಯ ಜೀವನ ಗೃಹಸ್ಥ ಜೀವನ ಸ್ವೀಕಾರ ಅವರವರ ಅಭಿರುಚಿ, ಆದರ್ಶಗಳ ಮೇಲೆ ಇರುತ್ತದೆ. ಸಮಾಜದ ಸೇವೆಗಾಗಲೀ ಆಧ್ಯಾತ್ಮಸಾಧನೆಗಾಗಲೀ, ಧರ್ಮಪ್ರಸಾರಕ್ಕಾಗಲೀ ಗೃಹಸ್ಥ ಜೀವನ ಅಡ್ಡಿ ಬರದಿದ್ದರೂ, ಕೆಲವರು ಲೌಕಿಕ ಜೀವನ ಸುಖಭೋಗ, ಪ್ರೇಮ-ವ್ಯಾಮೋಹ-ಕಾಮುಗಳಿಗೆ ಸಿಕ್ಕಿ ಬೀಳದೆ ಶುದ್ಧ ದೈವೀ ಜೀವನ ನಡೆಸಲು ಇಚ್ಛಿಸುವರು. ಅಂಥವರನ್ನು ಮದುವೆಯಾಗಿ ಎನ್ನುವುದೆಂದರೆ ಮೀನನ್ನು ನೀರಿನಿಂದ ಹೊರತೆಗೆದಂತೆ. ಸಂಯಮ ಇಷ್ಟವಿಲ್ಲದವರನ್ನು ಒತ್ತಾಯದಿಂದ ವಿರಕ್ತರನ್ನು ಮಾಡುವುದೂ ಅಷ್ಟೇ ಹಾನಿಕಾರಕ. ಆದ್ದರಿಂದ ವ್ಯಕ್ತಿಗಳು ತಮ್ಮ ಅಭಿರುಚಿ, ಆಸಕ್ತಿ, ಆದರ್ಶಕ್ಕನುಗುಣವಾದುದನ್ನು ಅವರೇ ಆರಿಸಿಕೊಳ್ಳಬೇಕು.

ಸು. ಮಲ್ಲಿಕಾರ್ಜುನಪ್ಪ, ಮುತ್ತೀಪುರ

★ ಲಿಂಗವಂತರಲ್ಲದವರಲ್ಲಿ ಲಿಂಗವಂತರು ಪ್ರಸಾದ (ಊಟ) ಸ್ವೀಕರಿಸಬಹುದೆ?

● ಪ್ರಸಾದ ಎಂದರೆ ದೇವಾಲಯ ಪ್ರಸಾದವೋ, ಊಟವೋ ಅರ್ಥವಾಗಲಿಲ್ಲ. ಸ್ವತಃ ತಾನೇ ದೇವರನ್ನು ಧರಿಸಿ, ಪೂಜಿಸಿ ತೀರ್ಥ-ಪ್ರಸಾದ ಪಡೆಯುವಾಗ ಇನ್ನಾವ ಪ್ರಸಾದವೂ ಬೇಕಿಲ್ಲ. ಸ್ವಯಂಕೃತ ಪೂಜೆಮಾಡಿ ಪ್ರಸಾದ ಪಡೆಯಬೇಕು. ಇನ್ನು ಊಟದ ಬಗ್ಗೆ! ಉತ್ತರಿಸುವುದು ತೀರಾ ಕಷ್ಟಸಾಧ್ಯ. ಅಮೆರಿಕಾದಿಂದ ಈ ಪ್ರಶ್ನೆಗೆ ಉತ್ತರಿಸುವಾಗ ಸ್ವಲ್ಪ ಆಲೋಚಿಸಬೇಕಾಗಿದೆ. ಎಷ್ಟೋ ಜನ ಲಿಂಗವಂತರೇ ಮಾಂಸಾಹಾರಕ್ಕೆ ಮೊದಲಾಗಿದ್ದಾರೆ. ಇದು ಅಮೆರಿಕಾ ಮತ್ತು ಭಾರತ ಎರಡೂ ಕಡೆಗಳಲ್ಲಿ ಆರಂಭವಾಗಿದೆ ಎಷ್ಟೋ ಇತರ ಹಿಂದುಗಳೇ ತಮ್ಮ ಆಚಾರ ವಿಚಾರಗಳನ್ನು ಶುದ್ಧವಾಗಿಟ್ಟು ಕೊಂಡಿದ್ದಾರೆ. ಅನೇಕ ಅಮೆರಿಕನ್ನರು, ಮಾಂಸಾಹಾರಿ ಹಿಂದುಗಳು ಮಾಂಸಾಹಾರ ಬಿಟ್ಟು ಸಸ್ಯಾಹಾರಕ್ಕೆ ಬಂದಿರುವಾಗ, ಸಸ್ಯಾಹಾರಿಗಳಾದ ಅನೇಕ ಬ್ರಾಹ್ಮಣರು, ಲಿಂಗಾಯತರು ಮಾಂಸಾಹಾರಕ್ಕೆ ಇಳಿದಿರುವಾಗ ಜಾತಿಯ ಮೇಲೆ ಏನನ್ನೂ ನಿರ್ಧರಿಸುವುದು ಕಷ್ಟ.

★ ಕಾವಿ ಬಟ್ಟೆ ಧರಿಸಿದ ಗುರುಗಳನ್ನು ಬುದ್ಧಿ ಎಂದು ಸಂಬೋಧಿಸುವ ರೂಢಿಯಿದೆ. ಹಾಗಾದರೆ ಕಾವೀ ಬಟ್ಟೆ ಧರಿಸಿದ ಹೆಣ್ಣುಮಕ್ಕಳನ್ನು ಏನನ್ನಬೇಕು?

● ಗುರೂಜಿ ಎಂಬ ಶಬ್ದ ತತ್ತ್ವವಾಚಕ ಅದನ್ನು ಬಳಸಬಹುದು. ಇದಕ್ಕಿಂತ ಮಿಗಿಲಾಗಿ 'ಮಾತಾಜಿ', 'ಅಮ್ಮಾ' ಎಂಬುದು ಹೆಚ್ಚು ಅರ್ಥಗರ್ಭಿತ. ಸನ್ಯಾಸಿನಿಯರನ್ನು 'ಮಾತಾಜಿ' ಎಂಬುದೇ ಸೂಕ್ತ. ಬುದ್ಧಿ, ಅಜ್ಜಯ್ಯ ಇವೆಲ್ಲ ಅಷ್ಟೊಂದು ಸಾಂಕೇತಿಕ ಪದಗಳಲ್ಲ, ಪುರುಷ ಗುರುಗಳನ್ನು ಗುರೂಜಿ, ಸ್ವಾಮೀಜಿ, ಅಪ್ಪಾಜಿ, ಅಪ್ಪಾವರೇ ಎನ್ನುವುದು ಸೂಕ್ತ.

ವಿದ್ಯಾಸಾಗರ ಸೀಳಿನ, ಚಿಂಚೋಳಿ

★ ಒಂದು ತರುಣ ಸಂಘ ಸುವ್ಯವಸ್ಥಿತವಾಗಿ. ಪ್ರಗತಿಪರ ಸಾಧನೆಯತ್ತ ಮುನ್ನಡೆಯಬೇಕಾದರೆ ನಾವು ಮೊದಲು ಹಾಕಬೇಕಾದ ಯೋಜನೆಗಳಾವುವು.

● ಕೆಲವು ಆದರ್ಶವಾದಿಗಳನ್ನು ಕಲೆಹಾಕಿ. ಅಥವಾ ನಿಮ್ಮಂತಹ ತರುಣರನ್ನು ಸಂದರ್ಶಿಸಿ, ಆದರ್ಶವನ್ನು ಉದ್ದೀಪಿಸಿ. ಅಂಥವರು ಒಂದುಗೂಡಿ ಒಂದು ಜಾಗದಲ್ಲಿ ಚಿಂತನ ಮಂಥನ ಮಾಡಿ ಸಂಜೆಯವೇಳೆ ಒಂದು ಜಾಗದಲ್ಲಿ ಸೇರಿ, ಸ್ವಲ್ಪ ಹೊತ್ತು ಪ್ರಾರ್ಥನೆ ಮಾಡಿ, ನಂತರ ಉತ್ತಮ ಸಾಹಿತ್ಯ ಕೃತಿ

ಗಳನ್ನು ಓದಿರಿ, ಚರ್ಚಿಸಿರಿ. ಧರ್ಮ, ರಾಷ್ಟ್ರ, ಜೀವನಕ್ಕೆ ಸಂಬಂಧಿಸಿದ ವಿಷಯ ಕುರಿತು ಆಲೋಚನೆ ಮಾಡಿರಿ. ವಾರಕ್ಕೊಮ್ಮೆ ಸಮುದಾಯ ಪ್ರಾರ್ಥನೆ ರೂಢಿಸಿರಿ. ಶರಣರ, ಮಹಾತ್ಮರ, ರಾಷ್ಟ್ರವೀರರ ಜಯಂತಿ ಆಚರಿಸಿರಿ. ಶನಿವಾರ, ಭಾನುವಾರಗಳಂದು ಬೇರೆ ಬೇರೆ ಮನೆ ಸಂದರ್ಶಿಸಿ ಅವರಿಗೆ ಧಾರ್ಮಿಕ ವಿಷಯ ಬೋಧೆ ಮಾಡಿ, ಅಥವಾ ಶರಣರ ಚರಿತ್ರೆಗಳನ್ನು ನಿರೂಪಿಸಿರಿ. ತರುಣ ಸಂಘ ಎಂದ ಮಾತ್ರಕ್ಕೇ ಇತರರಿಗೆ ಅವಕಾಶ ನೀಡದಂತೆ ಕಾರ್ಯ ಮಾಡದೆ, ಎಲ್ಲರನ್ನೂ ಆಹ್ವಾನಿಸಿರಿ. ನಿಮ್ಮೂರಿನ ಹಿರಿಯರನ್ನು ಒಂದೊಂದು ವಾರದ ಸಭೆಗೆ ಕರೆದು, ಸ್ಥಾನಕೊಟ್ಟು ಅವರ ಒಲುಮೆ ಸಂಪಾದಿಸಿರಿ. ಇಂದು ಜನರಲ್ಲಿ ಸೂಕ್ತ ಜಾಗೃತಿ ಆಗದ ಹೊರತು ರಾಷ್ಟ್ರ ನಿರ್ಮಾಣ ಸಾಧ್ಯವಿಲ್ಲ. ಆ ದಿಶೆಯಲ್ಲಿ ದುಡಿಯಿರಿ.

★

"ನಮ್ಮೀ ಜನಾಂಗದ ಮಾತೃಸ್ಥಾನ ಭಾರತ ಮತ್ತು ಸಂಸ್ಕೃತ ಯೂರೋಪಿಯನ್ ಭಾಷೆಗಳ ತಾಯಿ; ನಮ್ಮ ತತ್ವಶಾಸ್ತ್ರದ ಜನನಿ ಭಾರತಿ; ಅರಬರ ಮುಖಾಂತರ ನಾವು ತಿಳಿದ ಬಹಳಷ್ಟು ಗಣಿತಶಾಸ್ತ್ರದ ವಿಷಯಗಳಿಗೆ ಮೂಲ ಭಾರತವೇ ಆಗಿದೆ. ಬುದ್ಧನ ಮೂಲಕ ಭಾರತ ನೀಡಿದ ಸಂದೇಶಗಳಿಂದಲೆ, ಕ್ರಿಶ್ಚಿಯನ್ ಧರ್ಮ ಚೌಕಟ್ಟನ್ನು ಪಡೆದು ಕಂಗೊಳಿಸುತ್ತಿದೆ; ಇಂದಿನ ಪ್ರಜಾಪ್ರಭುತ್ವ-ಸ್ವರಾಜ್ಯ ಪದ್ಧತಿಗಳಿಗೆ ಸ್ಫೂರ್ತಿ ಭಾರತದ ಗ್ರಾಮಾಡಳಿತ ಪದ್ಧತಿಯೇ ಆಗಿದೆ. ತಾಯಿಭಾರತಿ ಹೀಗೆ ಹಲವು ಕಾರಣಗಳಿಂದ ನಮ್ಮೆಲ್ಲರ ತಾಯಿಯೇ ಆಗಿದ್ದಾಳೆ"

ವಿಲ್‌ಡುರಾಂಟ್
ಅಮೆರಿಕಾದ ಪ್ರಸಿದ್ಧ ಚಿಂತಕ ಮತ್ತು ಇತಿಹಾಸಕಾರ

ದೇವರನ್ನು ಬಿಟ್ಟರೆ, ನಮ್ಮ ಕೃತಜ್ಞತೆ ಸಲ್ಲಬೇಕಾದದ್ದು ಮಾತೆಗೆ, ಅವಳು ನಮಗೆ ಜನ್ಮ ಕೊಡುತ್ತಾಳೆ. ಜೀವನವನ್ನು ಜೀವಿಸಲು ಯೋಗ್ಯವಾದುದನ್ನಾಗಿ ಮಾಡುತ್ತಾಳೆ.

ಮಾತು ಜ್ಯೋತಿರ್ಲಿಂಗ

ಸಂಗ್ರಹ: ಸೋದರಿ ಕುಮುದಾ

★ ಆಗಾಗ ವಿಶ್ರಾಂತಿ ಪಡೆಯಿರಿ. ವಿರಾಮ ಪಡೆದ ಭೂಮಿ ಸಹ ಫಲವತ್ತಾದ ಬೆಳೆ ಬೆಳೆಯುವುದು.

—ಓವಿಡ್

★ ಎಲ್ಲರೂ ತಮ್ಮಿಂದಲೇ ತಾವು ರೂಪಿಸಲ್ಪಟ್ಟವರು. ಆದರೆ ಯಶಸ್ಸು ಸಾಧಿಸಿದವರು ಆ ಮಾತನಾಡುತ್ತಾರೆ; ಸಾಧಿಸದವರು ಇನ್ನೊಬ್ಬರನ್ನು ದೂರುತ್ತಾರೆ.

—ಫಾಲ್ಕನ್

★ ಮಾನವನ ಬದುಕಿನ ಶೇಕಡಾ 80 ಕೇವಲ ತೋರಿಕೆ.

—ಊಡಿ ಆನನ್

★ ಶ್ರೀಮಂತರು ಒಂದು ವಿಶೇಷ ಅನುಭವದಿಂದ ವಂಚಿತರಾಗುತ್ತಾರೆ- ಸಾಲದ ಕಡೆಯ ಕಂತನ್ನು ಕೊಟ್ಟು ಸುಖಪಡುವ ಅನುಭವದಿಂದ.

—ಬರ್ನಾಡ್ ಷಹಾ

★ ನಿನ್ನೊಲಿಮೆ ನೆಟ್ಟುಹಸಿವು ತೃಷೆ ಮರೆದೆನು ಚೆನ್ನಮಲ್ಲಿಕಾರ್ಜುನಾ.

— ಅಕ್ಕಮಹಾದೇವಿ

★ ದೀರ್ಘವಾದ ಮತ್ತು ಸ್ವಾದ ಸಹಿತ ಜೀವನದ ಗುಟ್ಟೆಂದರೆ ಮಲಗುವ ಮುನ್ನ ಎಲ್ಲರನ್ನೂ, ಎಲ್ಲಕ್ಕೂ ಕ್ಷಮಿಸುವುದು.

—ಆನ್ ಲ್ಯಾಂಡರ್ಸ್

★ ಬಿಲ್ಲುಗಾರನ ಕೈಯ ಧನುಸ್ಸಿನಂತೆ ನೀವು ಬಾಗುವುದಾದರೆ ಸಂತೋಷವಾಗಿ ಬಾಗಿರಿ. ಏಕೆಂದರೆ ತೊಟ್ಟ ಬಾಣದ ಮೇಲೆ ಅವನಿಗೆ ಎಷ್ಟು ಪ್ರೀತಿ ಇದೆಯೋ ದೃಢವಾಗಿ ನಿಲ್ಲುವ ಬಿಲ್ಲಿನ ಮೇಲೂ ಅವನಿಗೆ ಅಷ್ಟೇ ಪ್ರೀತಿಯಿದೆ.

—ಖಲೀಲ್ ಗಿಬ್ರಾನ್

★



—ಮಾತಾಜಿ

ವಾಷಿಂಗ್‌ಟನ್ ಕ್ಯಾಂಪ್

1. ದೇವ-ಭಕ್ತ ಸಂಬಂಧ

'ಶಿವಭಕ್ತರ ನೋವೇ ಅದು ಲಿಂಗದ ನೋವು, ಶಿವಭಕ್ತರು ನೊಂದರೆ ಅದು ಲಿಂಗದ ನೋವು' ಈ ಬಸವ ವಚನಾಮೃತದ ಸಾಲು ಚೆನ್ನಾಗಿ ಅರ್ಥವಾಯಿತು ಅಂದು. ಕ್ರಿಸ್‌ಮಸ್ ಹಬ್ಬದ ವಿಶೇಷ ಕಾರ್ಯಕ್ರಮಗಳು ಟಿ.ವಿ.ಯಲ್ಲಿ ಪ್ರದರ್ಶಿತವಾಗುತ್ತಿದ್ದವು. ಡಾ|| ಕುಂಬಾರರ ಮನೆಯವರೊಡನೆ ಹನ್ನೊಂದು ಗಂಟೆ ನ್ಯೂಸ್ ಕೇಳುತ್ತಿದ್ದೆವು. ಅಂದಿನ ವಿಶೇಷ, ಇರಾನಿನ ವಶದಲ್ಲಿ ಒತ್ತೆಯಾಳುಗಳಾಗಿರುವ ರಾಯಭಾರಿ ಕಛೇರಿಯ ಸಿಬ್ಬಂದಿ ವರ್ಗದವರೊಡನೆ ಸಂದರ್ಶನ. ಟಿ. ವಿ. ಮುಖಾಂತರ ಅಮೆರಿಕದಲ್ಲಿರುವ ಅವರ ಬಂಧುಗಳು ನೋಡಬಹುದಿತ್ತು ಆ ಬಂಧಿಗಳನ್ನು. ಅಮೆರಿಕಾದ ಸರ್ಕಾರ ಈ ಬಾರಿ ವಿಶೇಷ ಸರ್ಕಾರಿ ಉತ್ಸವಗಳನ್ನು ಆಚರಿಸಲಿಲ್ಲ. ಒತ್ತೆಯಾಳುಗಳಿಗೆ ಸಹಾನುಭೂತಿ ತೋರಲು. ಅವರ ದುಃಖದಲ್ಲಿ ಸರ್ಕಾರ ಮತ್ತು ಇಡೀ ಪ್ರಜಾವರ್ಗವೇ ಪಾಲುಗೊಂಡಿದೆ ಎಂಬುದನ್ನು ತೋರಲು ಅದ್ದೂರಿಯ ಕ್ರಿಸ್‌ಮಸ್ ಸಾರ್ವಜನಿಕವಾಗಿ ಆಚರಿಸಲಿಲ್ಲ (ಸರ್ಕಾರದ ಪರವಾಗಿ).

ಆಗ ನನಗನ್ನಿಸಿತು. ತನ್ನ ರಾಯಭಾರಿಗಳು, ತನ್ನ ಪ್ರತಿನಿಧಿ ಸಿಬ್ಬಂದಿ ವರ್ಗದವರ ನೋವು ತನ್ನ ನೋವು, ಅವರಿಗಾದ ಅಪಮಾನ ತನಗಾದ ಅಪಮಾನ ಎಂದು ಒಂದು ಸರ್ಕಾರ ಭಾವಿಸುವುದೆಂತೋ ಅಂತೆಯೇ ದೇವರು ತನ್ನ ಭಕ್ತರ ನೋವು, ಅವರ ಅಪಮಾನ ಸಹಿಸಲಾರ. ಇರಾನಿನಲ್ಲಿ ಒತ್ತೆಯಾಳಾಗಿರುವ ಅವರು ಎಲ್ಲವನ್ನೂ ಮೌನವಾಗಿ ಸಹಿಸಿಕೊಂಡರೂ; ಅವರ ಒಡೆಯನಾದ ಸರ್ಕಾರ ಮೌನವಾಗಿ ಸಹಿಸಿಕೊಳ್ಳದೆ ಪ್ರತೀಕಾರ ಮಾಡಲು ಹೇಗೆ ಬಯಸುವುದೋ ಹಾಗೆಯೇ ದೇವರನ್ನಾಶ್ರಯಿಸಿ ಅವನ ಪ್ರತಿನಿಧಿಗಳಾಗಿ ಮರ್ತ್ಯದಲ್ಲಿ ಕಾರ್ಯ ಮಾಡುವ ಮಹಾತ್ಮರು, ಜ್ಞಾನಿಗಳು ಕುಹಕಿಗಳಿಂದ, ದುರ್ಜನರಿಂದ ಬರುವ

ಕಷ್ಟ, ಅವಹೇಳನ, ನಿಂದೆ ಸಹಿಸಿಕೊಂಡರೂ, ಒಡೆಯನಾದ ಪರಮಾತ್ಮ ಸಹಿಸಿಕೊಳ್ಳದೆ ದುರ್ಜನರನ್ನು ಶಿಕ್ಷಿಸುವನು.

2. ಫೋಟೋ-ಗಾಜು.

ಸದಾ ಜೊತೆಗಿರಿಸಿಕೊಳ್ಳಲು, ಸುಪ್ರಭಾತದಲ್ಲಿ ಎದ್ದ ತಕ್ಷಣ ದರ್ಶನ ಪಡೆದುಕೊಳ್ಳಲು ಬಸವಣ್ಣನವರ ಒಂದು ಫೋಟೋ ತಂದಿರುವೆ. ಎದ್ದ ತಕ್ಷಣ ದರ್ಶನ ಪಡೆದುಕೊಳ್ಳದಿದ್ದರೆ ಮನಸ್ಸಿಗೆ ಸಮಾಧಾನವಿರದು. ಇಲ್ಲೇ ಸಿಕ್ಕ ಒಂದು ಫೋಟೋ ಫ್ರೇಮ್ ತೆಗದುಕೊಂಡು ಅದನ್ನು ಹೊಂದಿಸಿಟ್ಟೆ. ಒಂದು ದಿನ ಬೆಳಿಗ್ಗೆ ಇಷ್ಟಲಿಂಗಪೂಜೆ ಮುಗಿದೊಡನೆಯೇ ಬಸವಣ್ಣನವರ ಫೋಟೋಕ್ಕೆ ಪೂಜೆ ಮಾಡುತ್ತಿದ್ದೆ. ಗಂಧವನ್ನು ಬೊಟ್ಟಾಗಿ ಇಡುವಾಗ ಥಕ್ಕನೆ ಒಂದು ವಿಚಾರ ಸ್ಫುರಿಸಿತು. ಒಳಗೆ ಸುಂದರವಾದ ಫೋಟೋ ಇದೆ. ಮೇಲೆ ಗಾಜಿನ ಆವರಣವಿದೆ. ಈ ಗಾಜಿನ ಆವರಣವಿಲ್ಲದಿದ್ದರೆ, ನೀರು ಸಿಂಪಡಿಸಿ ಗಂಧದ ಬೊಟ್ಟು ಇಡಲು ಬರುತ್ತಿತ್ತೇ? ಈ ಗಾಜಿನ ಆವರಣವಿರುವುದರಿಂದ ಮೂಲ ಭಾವಚಿತ್ರ ಧಕ್ಕೆಯಾಗದಂತೆ ಪೂಜೆಗೊಳ್ಳುತ್ತಿದೆ. ಹಾಗೆಯೇ, 1. ಚಿತ್ತ ಸಮತೆ (Equanimity of mind) ಎಂಬ ಗಾಜಿನ ಆವರಣ ಮಹಾತ್ಮನಿಗಿದ್ದರೆ ಸ್ತುತಿ ಎಂಬ ಗಂಧದ ಬೊಟ್ಟಾಗಲೀ, ನಿಂದೆ ಎಂಬ ಮಸಿಯ ತೊಟ್ಟಾಗಲೀ ಅವನನ್ನು ಕಲಂಕಿತಗೊಳಿಸದು. 2. ಪರಮಾತ್ಮನು ಲೀಲೆ ಎಂಬ ಗಾಜಿನ ಆವರಣದೊಳಗಿದ್ದಾನಾದ್ದರಿಂದ ಸೃಷ್ಟಿ, ಸ್ಥಿತಿ, ಪ್ರಲಯಗಳ ವಿಕಾರಗಳಿಗೆ ಒಳಗಾಗದಂತೆ, ನಿರ್ವಿಕಾರ, ನಿರಂಜನನಾಗಿದ್ದಾನೆ.

3. ಟ್ರಾಫಿಕ್‌ಲೈಟು-ನಿಶ್ಚಿಂತೆ,

ನ್ಯೂಯಾರ್ಕನಗರದಲ್ಲಿ ಕಾರಿನಲ್ಲಿ ಸಂಚರಿಸುತ್ತಿದ್ದೆವು. ಕಾರಿನಲ್ಲಿ ನಮ್ಮನ್ನು ಕರೆದೊಯ್ಯುತ್ತಿದ್ದವರು ಟ್ರಾಫಿಕ್ ಲೈಟು ಇಲ್ಲದ ಕಡೆ ಹೆದ್ದಾರಿಯನ್ನು ಸೇರಿಕೊಳ್ಳಬೇಕಿತ್ತು. ಆಗ ಅವರು ಸಹಜವಾಗಿ ಮಾತನಾಡಿದರು. "ಲೈಟು ಇದ್ದರೆ ಹಸಿರು ಬಣ್ಣದ ಗುರುತಿನ ಮೇಲೆ ಧೈರ್ಯವಾಗಿ ಮುಂದೆ ಹೋಗುತ್ತೇವೆ. ಟ್ರಾಫಿಕ್ ಲೈಟು ಇಲ್ಲದೆ ನಾವೇ ತಿರುಗಿಕೊಳ್ಳಬೇಕಾದಲ್ಲಿ ಹೆಚ್ಚಿನ ಜಾಗರೂಕತೆ ಬೇಕಾಗುತ್ತದೆ" ಎಂದರು. ತಕ್ಷಣ ನನಗೊಂದು ವಿಚಾರ ಹೊಳೆಯಿತು. ಲೈಟಿನ ಬಗ್ಗೆ ನಮಗೆ ಪೂರ್ಣವಿಶ್ವಾಸ. ದೂರದಲ್ಲಿ ಹಸಿರು ಬಣ್ಣ ಕಂಡ ತಕ್ಷಣ ಮತ್ತಾವ ವಾಹನಗಳೂ ಅಡ್ಡ ಬರವೆಂದು ಮುನ್ನುಗ್ಗುತ್ತೇವೆ. ಲೈಟಿಲ್ಲದಲ್ಲಿ ತುಂಬಾ ಜಾಗರೂಕತೆಯಿಂದ ಸಾಗುತ್ತೇವೆ. ಹಾಗೆಯೇ ದೇವರಲ್ಲಿ, ಧರ್ಮ ಗುರುವಿನಲ್ಲಿ ನಮಗೆ ಅನನ್ಯ ಶರಣಾಗತಿ ಇದ್ದಾಗ ಅವುಗಳ ಕಾರುಣ್ಯದ ಬೆಳಕಿನಲ್ಲಿ ನಿಶ್ಚಿಂತೆಯಿಂದ ಮುಂದೆ ಸಾಗು

ತ್ತೇವೆ. ಆ ನಂಬಿಕೆ ಇಲ್ಲದಲ್ಲಿ ಅತ್ಯಂತ ಪರಿಶ್ರಮ ಪೂರ್ವಕವಾಗಿ, ಜಾಗರೂಕತೆಯಿಂದ ಮುಂದೆ ಸಾಗಬೇಕಾಗುತ್ತದೆ. ಏಕೆಂದರೆ ಜವಾಬ್ದಾರಿ ನಮ್ಮ ಮೇಲಿರುತ್ತದೆ.

4. ಏರೋಗ್ರಾಮ್ ಮತ್ತು ಏರ್‌ಮೇಲ್ ಎನ್‌ವೆಲಪ್

ಬೆಂಗಳೂರಿಗೆ ಆಶ್ರಮಕ್ಕೆ ಪತ್ರ ಬರೆಯಲೆಂದು ಏರೋಗ್ರಾಮ್ ಲೆಟರ್ಸ್‌ನಲ್ಲಿ ವಿಷಯವನ್ನು ಬರೆದಿಟ್ಟದ್ದೆ. ಅಂಚೆಗೆ ಹಾಕಲು ಮರೆತು ಬಿಟ್ಟದ್ದೆ. ಕೆನಡಾದ ಟೊರೊಂಟೋಕ್ಕೆ ಬಂದಾಗ ಪತ್ರ ಬರೆದುದು ನೆನಪಾಯಿತು. ಆದರೆ ಏರೋಗ್ರಾಮ್ ಲೇಟರ್ ಯೂ. ಎಸ್. ಎ. ದು ಇತ್ತು. ಮತ್ತೆ ಕೆನಡಾದ ಏರೋಗ್ರಾಮ್ ಲೆಟರ್‌ನಲ್ಲಿ ಬರೆಯಬೇಕಾಯಿತು, ಆದರೆ ಇನ್ನೊಂದು ಲೆಟರನ್ನು ಬಿಳಿಯ ಹಾಳೆಯಲ್ಲಿ ಬರೆದಿಟ್ಟದ್ದೆ. ಅದನ್ನು ಏರ್‌ಮೇಲ್ ಕವರದಲ್ಲಿ ಹಾಕಿ ಸ್ಟಾಂಪ್ ಕೆನಡಾದ್ದು ಹಚ್ಚಿ ಪೋಸ್ಟ್ ಮಾಡಿದೆ. ಆಗ ಒಂದು ವಿಚಾರ ಸ್ಫುರಿಸಿತು. ಏರೋಗ್ರಾಮ್ ಲೆಟರ್ (ನಾವು ಇನ್‌ಲ್ಯಾಂಡ ಲೆಟರ್ಸ್ ಅನ್ನುತ್ತೇವಲ್ಲ; ಆ ತರಹದ್ದು) ಒಂದು ದೇಶದ್ದು ಇನ್ನೊಂದು ದೇಶಕ್ಕೆ ಏನೇನೂ ಉಪಯೋಗವಾಗದು. ಬಿಳಿಯ ಹಾಳೆಯಲ್ಲಿ ಬರೆದು ಏರ್‌ಮೇಲ್ ಕವರಿನಲ್ಲಿ ಹಾಕಿದರೆ, ಯಾವದೇಶದ ಸ್ಟಾಂಪಾದರೂ ಹಚ್ಚಿ ಪೋಸ್ಟ್ ಮಾಡಬಹುದು. ಹಾಗೆಯೇ ಕೆಲವು ಮತ ಧರ್ಮಗಳು ಪಂಥಗಳು ತುಂಬಾ ಸಕಾಲಿಕ ವಿದ್ದು ಎಲ್ಲ ದೇಶಭಾಷೆಗಳ ಜನಕ್ಕೆ ಉಪಯೋಗವಾಗವು, ಆಕರ್ಷಿಸವು. ಅವು ಆಯಾ ಜಾತಿ, ದೇಶಗಳಿಗೆ ಮಾತ್ರ ಉಪಯುಕ್ತವಾಗುವವು ಆದರೆ ಬುದ್ಧ, ಬಸವಣ್ಣ, ಅರವಿಂದರಂಥವರ ವಿಚಾರಗಳನ್ನು ವಿವಿಧ ಭಾಷೆ-ದೇಶಗಳಿಗೆ ಅನ್ವಯವಾಗುವಂತೆ ಬೋಧಿಸಲು ಬರುವುದು. ಅವು ಸರ್ವಕಾಲಿಕ ಸತ್ಯಗಳಾಗಿ ಎಲ್ಲೆಡೆಯಲ್ಲೂ ಅನ್ವಯವಾಗುವುವು.

5. ಗಾಜು ಮತ್ತು ಹಿಮದಾವರಣ

ಬೆಳಗಾಗಿ ಎಷ್ಟೋ ಹೊತ್ತಾಗಿದ್ದರೂ ಮಬ್ಬು ಹರಿದಿರಲೇ ಇಲ್ಲ. ಹೊರಗಡೆ ಎಲ್ಲ ತುಂಬಾ ಮೋಡಕವಿದ ವಾತಾವರಣವಿರಬೇಕೆಂದು ನಾನು ಭಾವಿಸಿದ್ದೆ. ಆದರೆ ಅಷ್ಟರಲ್ಲಿ ಯಾರೋ ಬಂದು ಹೊರಗಡೆ ಹೊಂಬಿಸಿಲು ಹರಡಿದೆ ಎಂದರು. ಆದರೆ ನಾನು ನಂಬದೆ ಕಿಟಕಿ ನೋಡಿದೆ. ಮತ್ತೂ ಅಲ್ಲಿ ಮಂಕು. ಆಗ ಬಂದವರು ಹೇಳಿದರು. ಗಾಜಿನ ಮೇಲೆ ಕುಳಿತ ತೇವವು ಹೆಪ್ಪುಗಟ್ಟಿ ಒಂದು ಪರದೆಯಂತಾಗಿದೆ. ಆದರೆ ಹೊರಗಡೆ ಬಿಸಿಲು ಹರಡಿದೆ. ಹೆಪ್ಪುಗಟ್ಟಿದ ಪರದೆಯ ಮುಖಾಂತರ ಎಷ್ಟೇ ನೋಡಿದರೂ ಹೊರಗಿನ ನಿಸರ್ಗದ ನಿಜ ಚಿತ್ರಗೊತ್ತಾಗದಷ್ಟೆ! ಅದೇ ರೀತಿ ಕೆಲವೊಮ್ಮೆ ಸಾಧಕರು, ಸನ್ಯಾಸಿಗಳು, ದೊಡ್ಡ ವ್ಯಕ್ತಿಗಳು ತುಂಬಾ ಉನ್ನತ ವ್ಯಕ್ತಿತ್ವ

ಪಡೆದಿರುತ್ತಾರೆ. ಆದರೆ ಅವರ ಬಂಧುಗಳು ಹಿಂದಿನ ಯಾವುದೋ ಒಂದು ವ್ಯಾಮೋಹ ಮತ್ತು ಅಸಡ್ಡೆಯಿಂದ "ಅವರೇ ನಮ್ಮ ಕಣ್ಣೆದುರಿಗೆ ಹುಟ್ಟಿ ಬೆಳೆದವರಷ್ಟೇ ನಮಗೆಲ್ಲಾ ಗೊತ್ತು" ಎಂದು ಪೂರ್ವಾಗ್ರಹ ಪೀಡಿತ ದೃಷ್ಟಿಯಿಂದ ನೋಡುತ್ತ ಬೆಳೆದು ನಿಂತವರನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದೇ ಇಲ್ಲ. ಜಗತ್ತಿಗೆಲ್ಲ ಅವರ ವ್ಯಕ್ತಿತ್ವದ ಅರಿವಾಗುತ್ತಿದ್ದರೂ ರಕ್ತ ಸಂಬಂಧಿಗಳಿಗೆ ಅರ್ಥವಾಗಿರುವುದೇ ಇಲ್ಲ.

6. ಮಂಜಿನ ತೆರೆ ಕರಗಿದಾಗ

ಅನೇಕ ಮಜಲುಗಳ ಒಂದು ಭವ್ಯ ಭವನದಲ್ಲಿದ್ದ ಡಾ|| ಬಸವರಾಜ ಚಿಂಚೋಳಿ ಅವರ ಮನೆಯಲ್ಲಿ ಟೊರಾಂಟೋದಲ್ಲಿ ಇದ್ದೆವು. ಚಳಿ ತುತ್ತ ತುದಿಗೇರಿ ರಾತ್ರಿ ಕಿಟಕಿಯ ಗಾಜು ತೆಳುವಾದ ಹಿಮದಿಂದ ಆಚ್ಛಾದಿತವಾಗಿತ್ತು. ಆದರೆ ಸ್ವಲ್ಪ ಹೊತ್ತಿನಲ್ಲೇ ಹವಾಮಾನದಲ್ಲಿ ಕಾವೇರಿ, ಹಿಮದ ಆವರಣ ಕರಗುತ್ತ ಹೋಯಿತು. ಹಿಮವೆಲ್ಲಾ ಕರಗಿದಾಗ ಟೊರಾಂಟೋ ನಗರ ಸುಂದರವಾಗಿ ಅಂಗೈಯಲ್ಲಿ ಹಿಡಿದಂತೆ ತೋರತೊಡಗಿತ್ತು ಮತ್ತು ರಾತ್ರಿಯಲ್ಲಿ ಮಾನವ ನಿರ್ಮಿತ ವಿದ್ಯುತ್ ನಕ್ಷತ್ರ ಲೋಕ ಬಣ್ಣ ಬಣ್ಣಗಳಿಂದ ಕಂಗೊಳಿಸುತ್ತಿತ್ತು. ನಾಲ್ಕು ಗೋಡೆಗಳ ಮಧ್ಯದಲ್ಲಿ ಈವರೆಗೆ ಬಂಧಿತರಾಗಿ ಕುಳಿತಿದ್ದ ನಮಗೆ ವರ್ಣಮಯಲೋಕವೊಂದು ಗೋಚರಿಸತೊಡಗಿತು. ಆಗ ಒಂದು ವಿಚಾರ ಸ್ಫುರಿಸಿತು. ಕಿಟಕಿಯನ್ನು ಆವರಿಸಿದ ಹಿಮದ ಆಚ್ಛಾದನೆಯಿಂದಾಗಿ ಹೊರಗಿನ ಲೋಕ ಕಂಡಿರಲಿಲ್ಲ. ಆ ಆಚ್ಛಾದನೆ ಕರಗುತ್ತ ಹೋದಂತೆ ಹೊರಗಿನ ಚಿತ್ರ ಅತ್ಯಂತ ಸ್ಪಷ್ಟವಾಯಿತು. ಸುಂದರ ಟೊರೊಂಟೋ ನಗರ ಕಾಣಬಂದಿತು. ಹಾಗೆಯೇ ಮನುಷ್ಯನ ಮನಸ್ಸಿಗೆ ಕವಿದ ಅಜ್ಞಾನದ ಮಂಜಿನ ತೆರೆ ದೈವೀ ಜಗತ್ತಿನ ಸ್ವಾರಸ್ಯವನ್ನು ಮುಚ್ಚಿಹಾಕುತ್ತದೆ. ಆ ಅಜ್ಞಾನದ ತೆರೆ ಕರಗುತ್ತ ಬಂದಂತೆ ದೈವೀಜಗತ್ತಿನ ಹಿರಿಮೆ-ಗರಿಮೆ ಗೋಚರವಾಗತೊಡಗಿ, ದೈವೀಸೃಷ್ಟಿ ಎಷ್ಟೊಂದು ಅದ್ಭುತ ಎನ್ನಿಸತೊಡಗುವುದು. ★

ಕಾಲ ಅಮೂಲ್ಯವಾದದ್ದು ನಿಜ. ಆದರೆ ಸತ್ಯ ಕಾಲಕ್ಕಿಂತ ಅಮೂಲ್ಯವು.

—ದಿಸ್ರೇಲಿ

ಬೆಂಕಿ ಚಿನ್ನವನ್ನು ಪರೀಕ್ಷಿಸಿದರೆ ಸಂಕಟಗಳು ಧೈರ್ಯಶಾಲಿಗಳನ್ನು ಪರೀಕ್ಷಿಸುತ್ತದೆ.

—ಸೆನೆಕಾ

ಒಂದು ಸಂದರ್ಶನ

ಜಗದ್ಗುರು ಮಾತೆ ಮಹಾದೇವಿ

ಬಿಳಿಯರ ಬೃಂದಾವನಕ್ಕೆ

ಅಮೆರಿಕಾದ ಸುಂದರ ಹಿಂದೂ ಮಂದಿರಗಳು ಕೆಲವೇ ಕೆಲವು. ಹಿಂದೂಗಳೇ ಕಟ್ಟಿ ನಡೆಸುತ್ತಿರುವ ನ್ಯೂಯಾರ್ಕಿನ ಗಣಪತಿ ದೇವಾಲಯ ಒಂದು, ಪಿಟ್ಸ್‌ಬರ್ಗ್‌ನ ವೆಂಕಟೇಶ್ವರ ದೇವಾಲಯ ಇನ್ನೊಂದು. ಅಮೆರಿಕನ್ನರೇ ಕಟ್ಟಿರುವ ಮತ್ತೊಂದು. ಭವ್ಯ ಮಹಾಮಂದಿರ ವೀಲಿಂಗ್‌ನ ಗುಡ್ಡದಲ್ಲಿರುವ ವೃಂದಾವನ.

ಪಿಟ್ಸ್‌ಬರ್ಗ್‌ನಲ್ಲಿ ವಿಶೇಷವಾದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು ಡಾ. ಚನ್ನರಸಪ್ಪನವರು. ಸಾಕಷ್ಟು ವರ್ಷಗಳಿಂದ ಇಲ್ಲಿಯ ವಿಶ್ವವಿದ್ಯಾಲಯದಲ್ಲಿ ಕಾರ್ಯಪ್ರವೃತ್ತರಾಗಿರುವ ಚನ್ನರಸಪ್ಪನವರು ವೆಂಕಟೇಶ್ವರ ಮಂದಿರ ಮೈದಳೆಯಲು ಪ್ರಮುಖ ಕಾರ್ಯಕರ್ತರು ಪಿಟ್ಸ್‌ಬರ್ಗ್‌ನ ಥಿಯಾಸಫಿ ಸೊಸೈಟಿಯಲ್ಲಿ ಒಂದು ಭಾಷಣ ಏರ್ಪಡಿಸಿದ್ದರು. ಗುರುವಾರ ದಿ. 22 ಜನವರಿ 1981ರಂದು ಸಂಜೆ ಏಳು ಗಂಟೆಗೆ ಭಾಷಣ. ಆತ್ಮ, ಪರಮಾತ್ಮದ ತಾತ್ತ್ವಿಕ ವಿಶ್ಲೇಷಣೆ ಪ್ರಮುಖ ವಿಷಯ ಡಾ. ಚನ್ನರಸಪ್ಪನವರು ಪರಿಚಯ ಮಾಡಿಕೊಟ್ಟ ನಂತರ ಒಂದೂಕಾಲು ಗಂಟೆಗಳ ಕಾಲ ಈ ವಿಷಯವನ್ನು ಕುರಿತು ಮಾತನಾಡಿದೆ. ನಂತರ ಯೋಗಾಸನ ಪ್ರದರ್ಶನ ಕುಮುದಾಳಿಂದ.

ನಿಶ್ಯಬ್ದತೆ, ಕುತೂಹಲ, ಚಿಂತನ ಶೀಲತೆಯಿಂದ ಭಾಷಣವನ್ನು ಆಲಿಸಿದರು ನೆರೆದ ಸಭಿಕರು. ಪ್ರವಚನದ ನಿರೂಪಣಾ ಶೈಲಿಯನ್ನು, ನಿರರ್ಗಳತೆಯನ್ನು, ಸರಳವಾದ ಉದಾಹರಣೆ, ಉಪಮೆ–ಕಥೆಗಳಿಂದ ತಾತ್ತ್ವಿಕ ವಿಷಯಗಳನ್ನು ಅರ್ಥೈಸುವ ರೀತಿಯನ್ನು ಬಹುವಾಗಿ ಮೆಚ್ಚಿಕೊಂಡರು. "ಈವತ್ತು ತುಂಬಾ ಜ್ಞಾನಗಳಿಸಿಕೊಂಡೆವು" ಎಂದು ನಂತರ ಉದ್ಗಾರ ತೆಗೆದರು. 'ಏನಾದರೂ ಸಂದೇಹವಿದ್ದರೆ ಪ್ರಶ್ನೆ ಕೇಳಿ' ಎಂದೆ. 'ಇಂದು ಮಾತನಾಡಿದ ವಿಷಯಗಳ ಬಗ್ಗೆ ಯಾವ ಸಂದೇಹ ಉಳಿಯದಂತೆ ವಿಮರ್ಶೆ ಮಾಡಿದಿರಿ. ಇಂದು ನೀವು ಹೇಳಿದ್ದನ್ನೇ ಮತ್ತೆ ಚಿಂತನ ಮಾಡಲು ಸಾಕಷ್ಟು ವಿಷಯ ಕೊಟ್ಟಿದ್ದೀರಿ. ನಿಜಕ್ಕೂ ಅದ್ಭುತವಾಗಿತ್ತು' ಎಂದರು

ಓರ್ವ ಸಭಿಕರು. ಸಮಾಜದ ಅಧ್ಯಕ್ಷರು ಮತ್ತು ಅವರ ಪತ್ನಿ 'ಇಂದು ನಮ್ಮ ಸಂಸ್ಥೆಗೆ ಬಂದುದು ಸುದೈವ. ಇನ್ನಷ್ಟು ನಿಮ್ಮ ಭಾಷಣ ಕೇಳಬೇಕೆನಿಸುತ್ತಿದೆ' ಎಂದರು. ಇನ್ನೋರ್ವರು 'ಈ ಹೊತ್ತು ನನ್ನ ತಮ್ಮನಿದ್ದಿದ್ದರೆ ಚೆನ್ನಾಗಿತ್ತು. ಅವನು ಬೇರೆ ಊರಿಗೆ ಪ್ರವಾಸ ಹೋಗಿದ್ದಾನೆ. ದೇವರನ್ನು ನಂಬದ ನಾಸ್ತಿಕನಾದ ಅವನು ಇಂದು ನಿಮ್ಮ ಭಾಷಣ ಕೇಳಿದ್ದರೆ ಪರಿವರ್ತನೆಗೊಳ್ಳುತ್ತಿದ್ದುದು ಖಂಡಿತಾ' ಎಂದರು. ವಿದ್ಯಾವಂತರು, ಚಿಂತನಶೀಲರು, ಬೌದ್ಧಿಕ ತರಬೇತಿಯುಳ್ಳ ಸಭಿಕರನ್ನು ಒಳಗೊಂಡ ಥಿಯಾಸಫಿ ಸೊಸೈಟಿಯ ಕಾರ್ಯಕ್ರಮ ಚೆನ್ನಾಗಿತ್ತು.

ದಿ. 24–1–1981 ರಂದು ವೆಂಕಟೇಶ್ವರ ದೇವಾಲಯದ ಸಭಾಂಗಣದಲ್ಲಿ ಪ್ರವಚನ ವಿಷಯ 'ಭಾರತೀಯ ಪರಂಪರೆಯ ಭವ್ಯತೆ.' ಸಭಾಂಗಣ ತುಂಬುವಂತೆ ಜನರು ನೆರೆದಿದ್ದರು. ಅಮೆರಿಕಾದ ಅನೇಕ ಹಿಂದುಗಳು ಸೇರಿ ಸ್ವಪ್ರಯತ್ನದಿಂದ ನಿರ್ಮಿಸಿರುವ ಈ ದೇವಾಲಯ ತುಂಬಾ ಸುಂದರವಾಗಿ, ಸುಂದರ ವಾತಾವರಣದಲ್ಲಿದೆ. ಪಿಟ್ಸ್‌ಬರ್ಗ್ ಕೇವಲ ಬೆಟ್ಟಗುಡ್ಡ, ಕಾಡು–ಕೊಳ್ಳಗಳ ಬೀಡು. ಬೇಸಿಗೆ ಕಾಲದಲ್ಲಿ ತೀರಾ ಸುಂದರವಾಗಿ ಕಾಣುವ ಈ ಪ್ರದೇಶ ಈಗೆಲ್ಲ ಚಳಿಗಾಲದಿಂದಾಗಿ ಬೋಳು ಬೋಳಾಗಿ, ಹಾಳಾಗಿ ಒಣಗಿನಿಂತ ಗಿಡಗಳಿಂದ ಶೋಭಿಸುವುದು. ಸುಂದರವಾದೊಂದು ಬೆಟ್ಟದ ತುದಿಯಲ್ಲಿ ದೇವಾಲಯವಿದೆ. ಬಿಳಿಯ ಬಣ್ಣದ ಹೊರಭಾಗ ಹೊಂದಿರುವ ಇದು ಹಗಲು ಹೊತ್ತಿನಲ್ಲಿ ಹಸಿರುಗಿಡಗಳ ಹಿನ್ನೆಲೆಯಲ್ಲಿ ಒಂದು ಬಗೆಯ ಚೆಲುವಿನಿಂದ ಶೋಭಿಸಿದರೆ, ರಾತ್ರಿಯ ವೇಳೆಯಲ್ಲಿ ವಿದ್ಯುತ್ ಬೆಳಗಿನ ಶೃಂಗಾರದಲ್ಲಿ ಇನ್ನೊಂದು ರೀತಿ ಕಂಗೊಳಿಸುತ್ತದೆ.

ಗರ್ಭಗುಡಿಯಲ್ಲಿ ವೆಂಕಟೇಶ್ವರ, ಅಕ್ಕಪಕ್ಕದ ಗುಡಿಗಳಲ್ಲಿ ಪದ್ಮಾವತಿ ಆಂಡಾಳರ ವಿಗ್ರಹಗಳಿದ್ದರೆ, ಸಭಾಂಗಣದ ಹಿನ್ನೆಲೆಯಲ್ಲಿ ಅತ್ಯಂತ ಸುಂದರವಾದ ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ನಟರಾಜನ ಸುಂದರಮೂರ್ತಿ ಇದೆ. ಶಿಲ್ಪಿಯ ಕೈಚಳಕದಿಂದ ನಟರಾಜನಿಗೆ ಜೀವ ಬಂದಂತಿದ್ದು, ಆ ಭಂಗಿ ವಿಶೇಷ ಚೆಲುವಿಕೆಯಿಂದ ರಾರಾಜಿಸುತ್ತಿದೆ.

'ಭೌತಿಕ ಸಂಪತ್ತನ್ನು ಹೊಂದಿರುವುದರಲ್ಲಾಗಲೀ, ವೈಜ್ಞಾನಿಕ ಪ್ರಗತಿಯಲ್ಲಾಗಲೀ ಮುಂದಿರದಿದ್ದರೂ ಭಾರತವು ಅಸಾಮಾನ್ಯವಾದ ಅಧ್ಯಾತ್ಮ ಸಂಪತ್ತಿನಿಂದ ಕೂಡಿದೆ. ಹೀಗಾಗಿ ಅಮೆರಿಕಾದಲ್ಲಿರುವ ಭಾರತೀಯರ ಬಗ್ಗೆ ಏನೋ ಒಂದು ವಿಶೇಷ ಗೌರವವನ್ನು ಇಲ್ಲಿಯ ಜನ ಹೊಂದಿದ್ದಾರೆ. ಅದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಭಾರತೀಯರು ಬಾಳಬೇಕು. ತಮ್ಮ ಧರ್ಮ–ಸಂಸ್ಕೃತಿಗಳನ್ನು ಸಂರಕ್ಷಣೆ ಮಾಡಿಕೊಳ್ಳುತ್ತ, ಇತರರಿಗೂ ಅದರ ಮಹತ್ವ ಮನಗಾಣಿಸುತ್ತ, ಎಲ್ಲರನ್ನೂ ಸೌಹಾರ್ದತೆ

ಯಿಂದ ಕಂಡು ಬಾಳಬೇಕು. ಹಿಂದೂ ಸಂಸ್ಕೃತಿಯ ಹಿರಿಮೆ, ಗರಿಮೆ, ವೈಶಾಲ್ಯಗಳನ್ನು ಹೇಳುತ್ತಾ, ಸಾಮಾನ್ಯ ಹಿಂದುಗಳು ಆಚರಿಸುವ (Common sense level) ಆಚರಣೆಯನ್ನು ಕಂಡು ಇದೇ ಹಿಂದೂ ತತ್ತ್ವ ಎಂದು ತಿಳಿಯಬಾರದು. ಮೂಢ ನಂಬಿಕೆ, ಜಾತೀಯತೆ, ಕಂದಾಚಾರಗಳ ತೆರೆಸರಿಸಿ ಒಳಗೆ ಪ್ರವೇಶಿಸಿದರೆ ವೈಜ್ಞಾನಿಕ, ವೈಚಾರಿಕ, ಮೌಲ್ಯಗಳ ಪ್ರೌಢ ವಿಚಾರಧಾರೆ (Speculative level) ಇದೆ. ಇನ್ನೂ ಅಂತರಾಳವನ್ನು ಪ್ರವೇಶಿಸಿದರೆ ಅತ್ಯಂತ ಅನುಭವ ಪ್ರಧಾನ ದಾರ್ಶನಿಕ ವಿಚಾರಗಳಿವೆ (Mystic level). ಕೇವಲ ಯಾಂತ್ರಿಕ ಆಚಾರ ಪ್ರಧಾನ ಧರ್ಮಾಚರಣೆಗಳಿಗಿಂತ ಅನುಭವ ಪ್ರಧಾನ ಅಧ್ಯಾತ್ಮಿಕ ಆಚರಣೆಗಳು ತುಂಬಾ ಅವಶ್ಯಕ," ಎಂದು ಹೇಳಿ ಭಾರತೀಯ ತತ್ತ್ವಜ್ಞಾನದ ಜೀವನದೃಷ್ಟಿ, ಮೌಲ್ಯಗಳನ್ನು ಕುರಿತು ಮಾತನಾಡಿದೆ.

ನಂತರ ಸೋದರಿ ಕುಮುದಾಳಿಂದ ಯೋಗಾಸನ ಪ್ರದರ್ಶನ. ಅತ್ಯಂತ ಕಷ್ಟಕರವಾದ ಭಂಗಿಗಳೊಡನೆ ಆಕೆ ಪ್ರದರ್ಶಿಸಿದ ಯೋಗಾಸನಗಳನ್ನು ಸಭಿಕರು ತುಂಬಾ ಮೆಚ್ಚಿಕೊಂಡರು. ಬಿಟ್ಟಗಣ್ಣಿನ ಬೆರಗು ದೃಷ್ಟಿಯಿಂದ ಯೋಗಾಸನಗಳನ್ನು ನೋಡಿ, "ನಿಮ್ಮ ಮೈಯಲ್ಲಿ ಎಲಬುಗಳು ಇದೆಯೋ ಇಲ್ಲವೋ ಎನಿಸುತ್ತೆ. ತುಂಬಾ ಉತ್ತಮ ಸಾಧನೆ" ಎಂದು ಪ್ರಶಂಸಿಸಿದರು. ಸಭಿಕರ ಮುಖಗಳು ಆನಂದ, ಮೆಚ್ಚುಗೆಗಳಿಂದ ಕೂಡಿದ್ದವು. ಇಂಥ ವೈಚಾರಿಕ ಉತ್ಕೃಷ್ಟ ಭಾಷಣ ಮತ್ತು ಯೋಗಾಸನ ಪ್ರದರ್ಶನ ಏರ್ಪಡಿಸಿದ್ದಕ್ಕೆ ಡಾ॥ ಚನ್ನರಸಪ್ಪನವರನ್ನು ಅಭಿನಂದಿಸಿದರು.

ಮರುದಿನ ಅವರು ನಮ್ಮನ್ನು ಅಮೆರಿಕನ್ ಭಕ್ತರ ಬೃಂದಾವನ ತೋರಿಸಲು ಕರೆದೊಯ್ದರು. ವೆಸ್ಟ್ ವರ್ಜಿನಿಯಾ ರಾಜ್ಯದಲ್ಲಿ, ಮೌಂಡ್ಸ್‌ವಿಲ್ಲೆ ಎಂಬಲ್ಲಿ ಇದಿದೆ. ಪಿಟ್ಸ್‌ಬರ್ಗ್‌ನಿಂದ ಸುಮಾರು ಒಂದೂವರೆ ತಾಸು ಕಾರಿನಲ್ಲಿ ಪಯಣ. ಸದ್ಯ ಅಂದು ರಸ್ತೆಗಳು ತೀರಾ ಅಸಹ್ಯವಾಗಿ ಇರಲಿಲ್ಲ. ವೀಲಿಂಗ್ ದಾಟಿದ ನಂತರವಂತೂ ವಿಪರೀತ ಬೆಟ್ಟಗಳ ತಿರುವುಗಳು, ಸಣ್ಣ ರಸ್ತೆ, ಪಕ್ಕದಲ್ಲೇ ಆಳವಾದ ಕೊಳ್ಳಗಳು.

ಬೇಸಿಗೆಯಲ್ಲಿ ತುಂಬಾ ಸುಂದರವಾಗಿ ಕಾಣುವ ವನಪ್ರದೇಶ ; ಹೂಗಿಡಗಳಿಂದ ಕೂಡಿದ ಕೊಳ್ಳಗಳು ಬಹಳ ಅದ್ಭುತವಾಗಿ ಕಾಣುವವಂತೆ. ಈಗ ಮಾತ್ರ ಎಲ್ಲೆಡೆಯಲ್ಲಿ ಹಿಮವೋ ಹಿಮ. ಆದರೆ ಹಿಮಾಚ್ಛಾದಿತ ನೆಲ, ಗುಡ್ಡ ಎಲ್ಲವುಗಳನ್ನು ಮೆಟ್ಟಿ ಮೇಲೇರಿ ನಿಂತಿದೆ ಸುವರ್ಣದರಮನೆ, (Palace of Gold) . ಈ ಸ್ವರ್ಣದರಮನೆ ಸ್ವಾಮಿ ಪ್ರಭುಪಾದ (ಹರೇರಾಮ ಹರೇ ಕೃಷ್ಣದ ಸಂಸ್ಥಾಪಕ)ರ ಸ್ಮರಣಾರ್ಥ ನಿರ್ಮಾಣವಾಗಿರುವ ಭವ್ಯ ಹರ್ಮ್ಯ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು

1965 ರಲ್ಲಿ ತಮ್ಮ 70ನೆಯ ವಯಸ್ಸಿನಲ್ಲಿ ಅಮೆರಿಕಾಕ್ಕೆ ಧರ್ಮಪ್ರಸಾರಾರ್ಥ ಬಂದರು. ಸ್ವಾಮಿ ಕೀರ್ತನಾನಂದ ಎಂದು ಕರೆಯಲ್ಪಡುವ ಓರ್ವ ಅಮೆರಿಕಾ ಶಿಷ್ಯ ಅವರಿಗೆ ದೊರೆತರು. ಈ ಕೀರ್ತನಾನಂದರಿಂದಲೇ ಮುಂದೆ ಹರೇ ಕೃಷ್ಣ ಪಂಥ ಅಮೆರಿಕಾದಲ್ಲಿ ಹಬ್ಬಿದುದು.

ಅಮೆರಿಕಾಕ್ಕೆ ಬಂದಾಗ ತಮ್ಮ ಗುರುಗಳಿಗೆ ವಾಸಕ್ಕಾಗಿ ಇರಲೆಂದು ಒಂದು ಮನೆಯನ್ನು ಶಿಷ್ಯರು ಕಟ್ಟಲಾರಂಭಿಸಿದರು. ಆದರದು ಹೊಸರೂಪು ತಳೆಯುತ್ತ ಮಂದಿರವೇ ಆಯಿತು. 1977ರಲ್ಲಿ ಗುರುಗಳು ತೀರಿಕೊಂಡಾಗ, ಈ ಮನೆಯನ್ನೊಂದು ಸ್ಮಾರಕವಾಗಿ ಮಾಡುವ ಆಲೋಚನೆ ಮೈದಳೆಯುವುದರೊಡನೆ, ಸುವರ್ಣಮಂದಿರವಾಗಿ ಮಾರ್ಪಾಡಾಯಿತು .ಸಂಜೆಯ ಮಬ್ಬಿನಲ್ಲೇ ಅತ್ಯಂತ ಸುಂದರವಾಗಿ ಮಿರುಗುವ ಈ ಅರಮನೆ, ಸೂರ್ಯನ ಹೊಂಬಿಸಿಲಲ್ಲಿ ಹೇಗೆ ಕಾಣಬಹುದೋ ಎಂದು ಕಲ್ಪಿಸಿಕೊಂಡೆವು. "ಒಂದು ಸ್ವರ್ಗದಂತಿದೆ" ಎಂದು ವಾಷಿಂಗ್ಟನ್ ಪೋಸ್ಟ್ ಪತ್ರಿಕೆ ಬರೆದರೆ, 'ಇಲ್ಲಿ ಬಂದರೆ ಈ ಭೂಮಿಯ ಮೇಲೆ ನಾವಿದ್ದೇವೆಯೆ ?' ಎಂಬ ಸಂದೇಹ ಉಂಟಾಗುತ್ತದೆ ಎನ್ನುತ್ತದೆ ಇನ್ನೊಂದು ಪತ್ರಿಕೆ. ಇಟಾಲಿಯನ್ ಅಮೃತ ಶಿಲೆ, ಸುವರ್ಣದ ರೇಖೆಗಳು, ಉತ್ಕೃಷ್ಟ ಗಾಜಿನ ದೀಪಗುಚ್ಛಗಳು, ಬಂಗಾರದ ಕಳಸಗಳು, ವಿಚಿತ್ರ ಶೋಭೆಯನ್ನು ಉಂಟುಮಾಡುತ್ತವೆ. ಇಲ್ಲಿ ಕೆತ್ತನೆ, ಶಿಲ್ಪ, ಕಲೆ. ಎಲ್ಲಾ ಒಂದುಗೂಡಿವೆ. ಇದನ್ನು ಕಟ್ಟಿರುವದೊಂದು ಪವಾಡವೇ ! ಕೀರ್ತನಾನಂದರ ಶಿಷ್ಯರೆಲ್ಲ ಒಂದುಗೂಡಿ, ಹಣ ಕೊಟ್ಟು ಯಾರಿಂದಲೂ ಮಾಡಿಸಬಾರದೆಂದು, ಎಲ್ಲಾ ತಾವೇ ಭಕ್ತಿಪೂರ್ವಕವಾಗಿ ಮಾಡಬೇಕೆಂದುಕೊಂಡು ತಾವೇ ಹೊಸದಾಗಿ ಕಲಿತು, ಪ್ರಯೋಗಿಸಿ ಮಾಡಿದ್ದಾರೆ. ಯಾವ ವೃತ್ತಿನಿರತ ಕಲಾಕಾರರನ್ನೂ ನಾಚಿಸುವಂತಿದೆ ಇಲ್ಲಿಯ ಕಲೆ. ಒಂದೊಂದು ಕೆತ್ತನೆ, ಕುಂಚಕಲೆಗೂ ಅನೇಕರು ತಮ್ಮ ಆಯುಷ್ಯವನ್ನೇ ಸವೆಸಿದ್ದಾರೆ. 1979ರಲ್ಲಿ ದೇವಾಲಯ ಸಂಪೂರ್ಣವಾಯಿತಂತೆ. ಗರ್ಭಗುಡಿಯಲ್ಲಿ ಪ್ರಭುಪಾದರ ವಿಗ್ರಹವಿದೆ. ಯಥಾರೀತಿಯ ಆಕಾರ ಬಣ್ಣಗಳಿಂದ ಕೂಡಿದ ವಿಗ್ರಹಗಳನ್ನು ನಿರ್ಮಾಣ ಮಾಡುವುದರಲ್ಲಿ ಇಲ್ಲಿಯವರು ನಿಷ್ಣಾತರು. ದೊಡ್ಡ ದೊಡ್ಡ ಮ್ಯೂಸಿಯಮ್‌ಗಳಲ್ಲಿ ವಿಶೇಷ ವ್ಯಕ್ತಿಗಳ ಪುತ್ಥಳಿ ಇರುತ್ತವೆ. ಅವರು ನಿಜ ವ್ಯಕ್ತಿಗಳೇ ಏನೋ ಎಂಬ ಭ್ರಮೆ ಬರುವಷ್ಟು ಸಹಜತೆಯಿಂದ ಕೂಡಿರುತ್ತವೆ. ನಮ್ಮಲ್ಲಿ ಹೆಚ್ಚಾಗಿ ಕರಿಯ ಶಿಲೆ, ವಿಗ್ರಹದ ಯಾವ ಸೌಂದರ್ಯ ಕಾಣದಂತೆ ಮುಚ್ಚಿರುವ ಬಟ್ಟೆ ಆಭರಣಗಳ ಅಲಂಕಾರ ಕಾಣುತ್ತೇವೆ. ಇಲ್ಲಿ ಪುತ್ಥಳಿಗಳನ್ನು ನೋಡಿದರೆ ಜೀವಂತ ವ್ಯಕ್ತಿಗಳ ಮುಂದಿದ್ದೇವೆ ಏನೋ ಎನ್ನಿಸುತ್ತದೆ. 22ಕ್ಯಾರಟ್ ಚಿನ್ನದ ಉಪಯೋಗ ಇಲ್ಲಿ ಮಾಡಿದ್ದಾರೆ. ದೇವಾಲಯದ ಮೇಲಿನ

ಕಳಸ 30ಟನ್ ಭಾರವಿದೆ. ಬಂಗಾರದ ತಗಡಿನಿಂದ ಆಚ್ಛಾದಿಸಲ್ಪಟ್ಟಿದೆ. ದೇವಾಲಯದ ಮೇಲ್ಛಾವಣಿಯಲ್ಲಿ ಬಿಡಿಸಿರುವ ತೈಲ ಚಿತ್ರಗಳು ಭಾರತೀಯ ಪುರಾಣಗಳು ಗೀತಾ, ಭಾಗವತದಿಂದ ಆರಿಸಲ್ಪಟ್ಟ ಕಥೆಗಳಿಂದ ಕೂಡಿವೆ.

ನಾವು ಹೋದಾಗ ಓರ್ವ ಅಮೆರಿಕನ್ ತರುಣ ಮಗ್ನಚಿತ್ತತೆಯಿಂದ ಚಿತ್ರಗಳನ್ನು ಬರೆಯುತ್ತಿದ್ದ. ಸಂತ ಚೈತನ್ಯ ಮತ್ತು ಅವರ ಶಿಷ್ಯ ವೃಂದದವರ ಒಂದು ಬೃಹತ್ ಚಿತ್ರ ಬರೆಯುತ್ತಿದ್ದ. ಎಷ್ಟೋ ಸಂತರ ಫೋಟೋಗಳನ್ನು, ಅವರ ಕಣ್ಣುಗಳನ್ನು ಅಭ್ಯಸಿಸುತ್ತ ಆ ಭವ್ಯತೆ-ದಿವ್ಯತೆ ತರಲು ಅವನು ಯತ್ನಿಸುತ್ತಿದ್ದುದನ್ನು ನೋಡಿ ತುಂಬಾ ಆಶ್ಚರ್ಯ ಆನಂದ ನಮಗೆ ಉಂಟಾದವು. ಹಿಡಿದುದನ್ನು ಸಮರ್ಪಕವಾಗಿ ಮಾಡುವ ನಿಷ್ಠೆ ಕಂಡು ಸಂತೋಷವೆನಿಸಿತು. ಈ ಜನರೇ ಹಾಗೆ. ತಮಗೆ ಸರಿ ಕಂಡುದನ್ನು ಆಚರಿಸುವ, ಸಾಧಿಸಿ ತೋರುವ ಎಂಟೆದೆಯ ಭಂಟರು.

ಈ ಸ್ವರ್ಣದರಮನೆ ತ್ಯಾಗ, ಏಕಾಗ್ರತೆ, ಸಂಕಲ್ಪಗಳ ತ್ರಿವೇಣಿ ಸಂಗಮ. ದುಡ್ಡು ಸ್ವಲ್ಪ ಅತಿಯಾಗಿಯೇ ವ್ಯಯವಾಗಿದೆ ಇಲ್ಲಿ. ಬಂಗಾರಕ್ಕೆ ಖರ್ಚು ಮಾಡಿರುವ ಮೊತ್ತವನ್ನು ಸರಳವಾದ ವಿಶಾಲವಾದ ಸಭಾಂಗಣ, ಪ್ರಾರ್ಥನಾ ಮಂದಿರಕ್ಕೆ ವ್ಯಯಿಸಿದ್ದರೆ ಹಣದ ಉಪಯೋಗ ಇನ್ನೂ ಸಾರ್ಥಕತೆ ಸಾದಿಸುತ್ತಿತು. ಈಗ ಇದು ಉಪಯುಕ್ತತೆಗಿಂತ ಮಿಗಿಲಾಗಿ ಭವ್ಯತೆಯ ಕಲ್ಪನೆ ತಂದುಕೊಡುತ್ತದೆ.

ಪ್ರಭುಪಾದರ ಸ್ಮಾರಕ ಮಂದಿರದಿಂದ ಕೃಷ್ಣಮಂದಿರದ ಬಳಿಗೆ ಸಾಗಿದೆವು. ಅದು ಸಣ್ಣದೊಂದು ಗುಡಿ. ಒಂದು ಪಡಸಾಲೆಯಲ್ಲಿ ಶ್ರೀಕೃಷ್ಣ, ರಾಧೆಯರ ವಿಗ್ರಹ, ಪುರಿ ಜಗನ್ನಾಥದ ಕರಾಳ ಆಕಾರದ ಬೊಂಬೆಗಳು ಎಲ್ಲ ಇವೆ. ವಿಪರೀತ ಜರಿಯುಳ್ಳ ವಸ್ತ್ರಗಳು, ಬೆಲೆಬಾಳುವ ಬಂಗಾರ, ವಜ್ರದ ಆಭರಣಗಳು ಆಡಂಬರತೆಯನ್ನುಂಟು ಮಾಡಿ, ಸರಳತೆ ಸತ್ತುಹೋಗಿದೆ. ವಿಗ್ರಹಗಳಲ್ಲಿ. ಅತ್ಯಂತ ಸರಳವಾದ ವಿಗ್ರಹದಷ್ಟು ಅಲಂಕರಿಸಲ್ಪಟ್ಟ ವಿಗ್ರಹ ಕಣ್ಸೆಳೆಯದು. ಸ್ವಭಾವತಃ ಅಮೃತಶಿಲೆಯ ಸುಂದರ ವಿಗ್ರಹ ಬಹಳ ರಮ್ಯವಾಗಿದ್ದು, ಆಡಂಬರದಿಂದಾಗಿ ಮಂಕು ಹೊಡೆದಿವೆ.

ಪ್ರಭುಪಾದರ ಸ್ವರ್ಣಮಂದಿರ ಕಂಡಾಗ ಮೂಡಿದ ಅಭಿಮಾನ ಮೆಚ್ಚುಗೆ ಈ ಭಾಗಕ್ಕೆ ಬಂದಾಗ ಕರಗುತ್ತ ಬಂದಿತು. ನಾವು ಮಂದಿರದ ಒಳಗೆ ಹೊಕ್ಕಾಗ ಮೂವರು ತರುಣಿಯರು ಹಳೆಯ ಸೀರೆಗಳನ್ನುಟ್ಟು ಎರಡು ಸಣ್ಣ ಹುಡುಗರನ್ನೂ ಸೇರಿಸಿಕೊಂಡು 'ಮಾತೆ ತುಳಸಿ' ಎಂದು ತಾಳಹಾಕುತ್ತ ತುಳಸೀಗಿಡವನ್ನುಳ್ಳ ಬೃಂದಾವನವನ್ನು ಸುತ್ತುತ್ತಿದ್ದರು. ನಾವು ಬಂದ ಪರಿವೆಯೂ ಇಲ್ಲದೆ ಕುಣಿಯುತ್ತಲೇ ಇದ್ದರು. ಬಂದವರ ಬಗ್ಗೆ ಏನೂ ವಿಚಾರಿಸಲೇ ಇಲ್ಲ. ಪೆದ್ದುಪೆದ್ದಾಗಿ ಅವರು ಕುಣಿಯುವ ರೀತಿ ಕಂಡು, ನಮ್ಮ ಹಳ್ಳಿಗಾಡಿನ ಲಂಬಾಣಿ ಹೆಣ್ಣುಮಕ್ಕಳ ನೃತ್ಯದ

ನೆನಪಾಯಿತು. ಲಂಬಾಣಿ ನೃತ್ಯವಾದರೂ ಎಷ್ಟೋ ವಾಸಿ, ಇದು ಅಷ್ಟು ಒರಟಾಗಿತ್ತು. ಮೂರುನಾಲ್ಕು ವರ್ಷದ ಹುಡುಗರಿಗೆಲ್ಲ ಪಂಚೆ ಉಡಿಸಿ, ಜುಟ್ಟು ಬಿಟ್ಟು, ನಾಮ ಬಳಿದು ಕುಣಿಸುತ್ತಾರೆ. ಆ ಮಕ್ಕಳಿಗೆ ಹೊರಗಿನ ಯಾವ ಶಿಕ್ಷಣವನ್ನೂ ಕೊಡದೆ ತಮ್ಮ ಮಿತವಲಯದ ಪರಿಸರದಲ್ಲೇ ಬೆಳೆಸುತ್ತಾರೆ. ಅವರಿಗೆ "ಹರೆ ರಾಮ ಹರೆ ಕೃಷ್ಣ" ಜಪ ಮಾಡುತ್ತ ಕೀರ್ತನ ಮಾಡುವುದು ಬಿಟ್ಟರೆ ಬೇರೆ ಯಾವ ಸಂಸ್ಕಾರವೂ ಸಿಗದು.

ಬೌದ್ಧಿಕ ಯಾವ ಸಂಸ್ಕಾರವೂ ಇಲ್ಲದೆ ಕೇವಲ ನರ್ತಿಸುವುದು, ಜಪಿಸುವುದು, ಹಾಡುವುದು ಇಲ್ಲಿಯ ಮುಖ್ಯ ಲಕ್ಷಣ. ಯಲ್ಲಮ್ಮನ ಗುಡ್ಡದ ಜಾತ್ರೆಯಲ್ಲಿ ಅಂಗಾರ ಬಳಿದುಕೊಂಡು ಸಾಗುವ ಹಳ್ಳಿಗಾಡಿನ ಜೋಗತಿಯರಂತೆ, ಈ ಭಕ್ತಿ ಪಂಥದವರು ಭಾರತದ ಹಳ್ಳಿಗಾಡಿನ ಸೀರೆಯುಟ್ಟು, ಗಂಡಸರು ಧೋತ್ರ ಉಟ್ಟು, ಗಂಡಸರು ಸ್ಪಷ್ಟವಾದ ನಾಮ ಧರಿಸಿಕೊಂಡು, ಎದ್ದು ಕಾಣುವಂತೆ ಜನ್ನಿವಾರ ಧರಿಸಿಕೊಂಡು ಜಪ ಮಾಡುತ್ತ ಮುಂಗೈಯನ್ನು ಒಂದು ಚೀಲದಲ್ಲಿ ಸೇರಿಸಿಕೊಂಡು ಮಣಿ ಎಣಿಸುತ್ತಾ ಹೋಗುವರು. 6-30ಕ್ಕೆ ಆರತಿ ಇತ್ತು. ಆರತಿಯವೇಳೆಗೆ ಹಲವಾರು ಜನ ಬಂದು ಸೇರಿದರು. ಆಗ ಓರ್ವ ಸಾಧಕ ಪೂಜೆಗೆ ತೊಡಗಿದ. ಇನ್ನುಳಿದ ಕೆಲವರು ತಾಳ, ತಬಲಾ ಬಾರಿಸತೊಡಗಿದರು ಮತ್ತೆ ಕೆಲವರು ಆ ತಾಳಕ್ಕೆ ತಕ್ಕಂತೆ ಕುಣಿಯತೊಡಗಿದರು. ಇದು ಬರುಬರುತ್ತ ಉಗ್ರವಾಯಿತು. ಸಿನಿಮಾ ಸಂಗೀತ, ಪಾಪ್ ಸಂಗೀತ ಹೇಳುತ್ತ, ಹೇಗೆ ಕೆಲವರು ಧಮ್ ಧಮ್ ಎಂದು ಕುಣಿಯುವರೋ ಹಾಗೆಯೇ ಇವರೂ ಹರೇ ರಾಮ ಹರೇ ಕೃಷ್ಣ ಎಂದು ಕುಣಿಯ ತೊಡಗಿದರು. ಆ ಶಬ್ದದ ಜೋರು ಎಷ್ಟಾಯಿತೆಂದರೆ ನಮಗೆ ತಲೆ ಭಾರವಾಗತೊಡಗಿತು. ಯಾವುದಾದರೂ ಉಗ್ರದೇವತೆಯ ಜಾತ್ರೆಯಲ್ಲಿ ಬಲಿಕೊಡುವಾಗ ಬಾರಿಸುವ ಉಗ್ರವಾದ್ಯಗಳ ಧನಿಯಂತಿತ್ತು. ನಾವು ಮೆಲ್ಲನೆ ಅಲ್ಲಿಂದ ನುಸುಳಿಕೊಂಡೆವು. ಈ ಒಂದು ವಿಧಾನದ ಬಗ್ಗೆ ಮಾತ್ರ ತೀವ್ರ ಬೇಸರವಾಯಿತು. ಒಂದು ದೃಷ್ಟಿಯಿಂದ ಭಾರತೀಯರ ಮತಧರ್ಮಯೋಗಗಳ ವಿಡಂಬನೆ ಇಲ್ಲಿ ನಡೆಯುತ್ತಿದೆ ಎನಿಸಿತು.

ಈ ರೀತಿಯ ಖೇದವನ್ನು ಮೀರಿಯೂ ಒಂದು ಉತ್ತಮ ಅಭಿಪ್ರಾಯ ಒಟ್ಟಾರೆ ಮೂಡುತ್ತದೆ. ಈ ಬೃಂದಾವನದ ವಲಯದಲ್ಲಿರುವವರು ಸರಳ ಜೀವಿಗಳು. ಪಾಶ್ಚಿಮಾತ್ಯ ಜೀವನ ವಿಧಾನದ, ವೈಭೋಗದ ವೈಖರಿಯನ್ನು ತಿರಸ್ಕರಿಸಿ ಸರಳವಾದ ಬದುಕನ್ನು ಸ್ವೀಕರಿಸಿದವರು. ಪ್ರತಿನಿತ್ಯ ಸ್ನಾನ ಮಾಡುವರು. ಸದಾ ಜಪ ಮಾಡುವರು. ಮಾಂಸಾಹಾರ, ಮದ್ಯಪಾನ ವರ್ಜಿಸಿರುವರು. ಸರಳವಾದ ಉಡುಗೆ ಉಟ್ಟು, ಶುದ್ಧ ಸಸ್ಯಾಹಾರ ಸ್ವೀಕರಿಸುತ್ತ ಸಾತ್ವಿಕ ಬಾಳನ್ನು ಬಾಳುವರು. ಸಾಮೂಹಿಕ ಜೀವನ ಇಲ್ಲಿ ಚೆನ್ನಾಗಿದೆ. ತಮ್ಮದೇ ಆದ ಗೋಶಾಲೆ ಇದೆ. ಬೆಳೆಗಳನ್ನೂ ತಾವೇ

ಬೆಳೆಯುತ್ತಾರೆ. ಪ್ರಾರಂಭದಲ್ಲಿ ಸ್ವಲ್ಪ ಭೂಮಿ ಹೊಂದಿದ್ದವರು ಈಗ ಸಾಕಷ್ಟು ಖರೀದಿಸಿದ್ದಾರೆ.

ಅಮೆರಿಕಾದಲ್ಲಿ ಹರೆ ಕೃಷ್ಣ ಪಂಥದ ಬಗ್ಗೆ ತುಂಬಾ ತಿರಸ್ಕಾರ ಮೂಡುತ್ತಿದೆ. ಕಾರಣವಿಷ್ಟೇ ; ಎಲ್ಲ ತರುಣ ವಯಸ್ಸಿನವರೇ ಸಮಾಜದ ವಲಯವನ್ನು ತೊರೆದು, ತಮ್ಮದೇ ಆದ ಲೋಕದಲ್ಲಿ ಸೇರಿ ಧೋತ್ರ ಉಟ್ಟು, ಜುಟ್ಟು ಬಿಟ್ಟು, ರಸ್ತೆಗಳಲ್ಲಿ ಹಾಡುತ್ತ ಸಾಗುವುದು ಹಿರಿಯರಿಗೆ ಕಿರಿಕಿರಿ ಉಂಟು ಮಾಡಿದೆ. ಅಲ್ಲದೆ ವಿಮಾನ ನಿಲ್ದಾಣ, ರೈಲ್ವೆ-ಬಸ್ ನಿಲ್ದಾಣಗಳಲ್ಲಿ ಹಣ ಸಂಗ್ರಹಕ್ಕಾಗಿ ಇವರು ಡಬ್ಬಿ ಹಿಡಿದು ಓಡಾಡುವುದು ಉದ್ರಿಕ್ತರನ್ನಾಗಿ ಮಾಡಿದೆ.


ಒಮ್ಮೊಮ್ಮೆ ಆಲೋಚಿಸಿದಾಗ ಅನ್ನಿಸುವುದು, ಬಾಕಿ ಹುಡುಗ-ಹುಡುಗಿಯರು ಸ್ವಚ್ಛಂದ ಬದುಕು ಬದುಕುತ್ತ, ಮಾಂಸಾಹಾರ, ಮದ್ಯಪಾನ, ಮಾಡುತ್ತ ಸಿಗರೇಟು ಅಫೀಮು ಮುಂತಾದ್ದನ್ನು ಸೇದುತ್ತ ಸಾಮಾಜ ಕಂಟಕರಾಗಿ ಬಾಳುತ್ತಿರುವಾಗ, ಇವರು ಅಂಥದೊಂದು ಸಮಾಜವನ್ನು ತಿರಸ್ಕರಿಸಿ ಸಾತ್ವಿಕರಾಗಿ ಯಾರಿಗೂ ಕೇಡುಂಟು ಮಾಡದೆ ಇದ್ದರೆ ತಪ್ಪೇನು? ಅವರು ಹಣ ಎತ್ತುವರು! ಅದು ನಿಜ. ಕೊಡುವ ಬಿಡುವ ಇಚ್ಛೆ ಇವರದು. ಕೊಡಲಾಗದಿದ್ದರೆ ಬಿಡಲಿ. ಆದರೆ ಕೆಟ್ಟ ಕೆಟ್ಟ ವಸ್ತುಗಳನ್ನು ಉತ್ಪಾದಿಸಿ, ವಿಪರೀತ ಜಾಹಿರಾತು ಕೊಟ್ಟು ಪ್ರಚಾರ ಮಾಡಿ ಮಾರಿ ತಮಗಾಗಿ ಬಾಳುವ ಕೆಲವು ವ್ಯಾಪಾರಸ್ಥರಷ್ಟೇನೂ ಇವರು ಸ್ವಾರ್ಥಿಗಳಲ್ಲ. ತಾವು ಸಂಗ್ರಹಿಸಿದ್ದನ್ನು ದೇವಾಲಯ ಕಟ್ಟಲು ಬಳಸುವ ನಿಸ್ವಾರ್ಥಿಗಳು. ಅವರ ದೇವಾಲಯ ರಚನೆ ಮಾತ್ರ ಎಂದೆಂದೂ ಮನದಲ್ಲಿ ಉಳಿಯುವಂಥದ್ದು.

ಕೇವಲ ಆಲೋಚಿಸುವುದು ಬಲಹೀನರ ರೀತಿ. ವಿಚಾರಿಸುವುದು ದೌರ್ಬಲ್ಯದ ಕುರುಹು. ಆಲೋಚಿಸಿ, ವಿಚಾರಿಸಿ, ಆಚರಿಸುವವನೇ ಶಕ್ತಿಶಾಲಿ, ಸತ್ವಶಾಲಿ ಪುರುಷ.

—ಸುಭಾಷಿತ

ತನಗೆ ಪ್ರಯೋಜನವಾಗಲಾರದ ಜನರ ಮೇಲೆ ಗೌರವವಿಡುವಾತನೇ ನಿಜವಾದ ಸಜ್ಜನ

—ವಿಲಿಯಂ ಲಾಯಿನ್ಸ್



ಲೇ: ಜಗದ್ಗುರು ಮಾತೆ ಮಹಾದೇವಿ.

ಭಾಗ-೩

ದೈವೀಶಕ್ತಿಯು ಮಾನವನಿಗೆ ಅದ್ಭುತ ವಿಚಾರ ಸಾಮರ್ಥ್ಯವನ್ನು ಕೊಟ್ಟಿದೆ. ಬುದ್ಧಿ ಶಕ್ತಿ, ಸ್ವತಂತ್ರ ವಿಮರ್ಶಾಪ್ರಜ್ಞೆ ಇವು ದೇವನ ಕೊಡುಗೆ. ಅವನ್ನು ಬಳಸಿಕೊಂಡು ಮನುಷ್ಯ ದೈವೀ ಸೃಷ್ಟಿಯನ್ನು ಇನ್ನೂ ಚೆನ್ನಾಗಿ ಶೃಂಗರಿಸಿ, ಪ್ರದರ್ಶಿಸಬಲ್ಲ. ಆವನ ಸಂಶೋಧನೆಗಳನ್ನು ಸೃಷ್ಟಿಯ ಲೀಲೆಯನ್ನು ಬಿತ್ತರಿಸಲು ಬಳಸಿಕೊಳ್ಳಬಲ್ಲ. ಇದು ವ್ಯಕ್ತವಾಗುವುದು ವಾಷಿಂಗ್ಟನ್ ಸಿಟಿಯಲ್ಲಿರುವ ಆನೇಕ ಮ್ಯೂಸಿಯಮ್‌ಗಳನ್ನು ನೋಡಿದಾಗ. ಹಾಗೆಯೇ ಜೆಫರ್ ಸನ್ ಮೆಮೊರಿಯಲ್, ಲಿಂಕನ್ ಮೆಮೊರಿಯಲ್ ಮುಂತಾದ ಸ್ಮಾರಕಗಳ ಸುತ್ತಲೂ ನಿರ್ಮಿಸಿರುವ ವಾತಾವರಣ ನೋಡಿದರೆ ಅಮೆರಿಕನ್ನರು ನಿಸರ್ಗಪ್ರೇಮಿಗಳು, ಸೌಂದರ್ಯದಾರಾಧಕರು ಎಂಬ ಭಾವ ಬರದಿರದು. ನದಿಯನ್ನು ಅಲ್ಲಿಗೆ ಹರಿಸಿ, ಸರೋವರದ ತೆರದಲ್ಲಿ ನಿಲ್ಲಿಸಿ, ಸುಂದರವಾದ ದಂಡೆಯನ್ನು ನಿರ್ಮಾಣಮಾಡಿ, ಅದರ ಸುತ್ತಲೂ ಜಪಾನಿ ಚೆರ್ರಿ ವೃಕ್ಷಗಳನ್ನು ನೆಟ್ಟು, ಮತ್ತು ಮೆಮೊರಿಯಲ್‌ಗಳ ಮೇಲೆ ರಾತ್ರಿಯ ವೇಳೆ ಸುಂದರವಾಗಿ ಬೆಳಕು ಚೆಲ್ಲುವಂತೆ ಮಾಡಿದ್ದಾರೆ. ರಾತ್ರಿಯ ವೇಳೆಯಲ್ಲಿ ವಿದ್ಯುತ್ ದೀಪಗಳು ಸ್ಮಾರಕದ ಮೇಲೆ, ನೀರಿನ ಮೇಲೆ ಬೆಳಕು ಚೆಲ್ಲಿ ಸ್ವರ್ಗವೊಂದನ್ನು ನಿರ್ಮಾಣ ಮಾಡುತ್ತವೆ.

ಇಂಥ ಹಲವಾರು ಸ್ಮಾರಕಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು ನಿರ್ಮಾಣ ಮಾಡಿದ್ದಾರೆ. ಸಮಯಸಿಕ್ಕಾಗ ಒಂದೊಂದನ್ನೇ ನೋಡೋಣ ಎಂದುಕೊಂಡೆ ನಾನು. ಈಗ ನಾವು ನೋಡಿದ ಇನ್ನೊಂದು ಮ್ಯೂಸಿಯಮ್ ಏರ್ ಮತ್ತು ಸ್ಪೇಸ್ ಮ್ಯೂಸಿಯಮ್. ಜಗತ್ತಿನ ಅದ್ಭುತಗಳಲ್ಲಿ ಒಂದೆಂಬಂತೆ ಇದು ಕಾಣಬರುತ್ತದೆ. ವಾಷಿಂಗ್ಟನ್‌ನಲ್ಲಿ ಸ್ಮಿತ್‌ಸೋನಿಯನ್ ಸಂಸ್ಥೆ ಎಂಬೊಂದು ಸಂಸ್ಥೆಯಿದೆ. ಇದು ಸ್ವತಂತ್ರವಾದ, ಕೇವಲ ಜ್ಞಾನ ಪ್ರಸರಣವನ್ನೇ ಏಕೈಕ ಗುರಿಯಾಗಿಟ್ಟುಕೊಂಡ ಸಂಸ್ಥೆ. ಇದರ ಮೂಲ ನಿಜಕ್ಕೂ ಆಶ್ಚರ್ಯಕಾರಕ. ಜೇಮ್ಸ್ ಸ್ಮಿತ್‌ಸನ್ ಎಂಬ ಓರ್ವ ಶ್ರೀಮಂತ

ಬ್ರಿಟಿಷ್ ವಿಜ್ಞಾನಿ 1829ರಲ್ಲಿ ತೀರಿಕೊಂಡ. ಅಮೆರಿಕಾದೇಶವನ್ನೇ ಸಂದರ್ಶಿಸಿರದ ಪುಣ್ಯಾತ್ಮ ಇಟಲಿಯಲ್ಲಿ ತೀರಿಕೊಳ್ಳುವಾಗ ತನ್ನ ಸಂಪೂರ್ಣ ಆಸ್ತಿಯನ್ನು ಅಮೆರಿಕಾಕ್ಕೆ ಉಯಿಲು ಬರೆದು, ಆ ಹಣದಿಂದ ಜ್ಞಾನ ಪ್ರಸರಣ ಮಾಡಬಲ್ಲ ಸಂಸ್ಥೆಯೊಂದನ್ನು ನಿರ್ಮಾಣ ಮಾಡಬೇಕು ಎಂದು ಕೇಳಿಕೊಂಡ. ಅಮೆರಿಕಾ ಸರ್ಕಾರ ಇದರಲ್ಲಿ ಆಸಕ್ತಿ ತಾಳಿ ಪ್ರಮುಖರ ಸಮಿತಿಯೊಂದನ್ನು ಮಾಡಿ 1847 ಮೇನಲ್ಲಿ ಅಸ್ತಿವಾರ ಹಾಕಲಾಯಿತು. ಇಂದು ಸಂಸ್ಥೆ ಬೃಹತ್ತಾಗಿ ಬೆಳೆದಿದ್ದು ಹಲವಾರು ಮ್ಯೂಸಿಯಮ್‌ಗಳನ್ನು ನಡೆಸುತ್ತಿದೆ.

(ನಮ್ಮಲ್ಲಿಯೂ ಅನೇಕ ಸಿರಿವಂತರಿದ್ದಾರೆ. ತಮಗೆ ಮಕ್ಕಳಿಲ್ಲದಿದ್ದಾಗ ಬೇರೆಯವರನ್ನು ದತ್ತು ಪಡೆದಾದರೂ ಆಸ್ತಿಯನ್ನು ಧಾರೆ ಎರೆಯುವರಲ್ಲದೆ ಇಂಥ ಜ್ಞಾನಪ್ರಸಾರಕ ಸಂಸ್ಥೆಗಳನ್ನು ನಿರ್ಮಿಸಲು ಆಕಾಂಕ್ಷೆ ತಾಳರು. ಬಹಳ ಎಂದರೆ ದೇವಸ್ಥಾನಗಳನ್ನು ಕಟ್ಟಲು, ವಿಗ್ರಹಗಳಿಗೆ ವಜ್ರ ವೈಢೂರ್ಯಗಳ ಕಿರೀಟ ಮಾಡಿಸಲು ಹಣ ಸುರಿಯುತ್ತಾರೆ. ಒಂದು ದೇವಾಲಯದ ಆವರಣದಲ್ಲಿ ಧಾರ್ಮಿಕ ಪರಂಪರೆಯನ್ನು ಚಿತ್ರಿಸುವ ಮ್ಯೂಸಿಯಮ್ ಮಾಡಿದರೆ, ಬಂದವರಿಗೆ ಧಾರ್ಮಿಕ ಪ್ರಜ್ಞೆಯಾದರೂ ಮೂಡುವದು. ಕಲ್ಲು ಮಣ್ಣುಗಳ ದೇವಾಲಯಗಳನ್ನು ಹೊಸದಾಗಿ ನಿರ್ಮಿಸುತ್ತ, –ಹಳೆಯವನ್ನೇ ನೋಡಿಕೊಳ್ಳಲು ಜನರು ಇಲ್ಲದಾಗ, ಹಣವನ್ನು ಜಡ್ಡುಗಟ್ಟಿಸುವುದೆಂದರೆ, ಬಡ ದೇಶದ ಪ್ರಗತಿಗೆ ಆತಂಕಕಾರಿ ಎನ್ನಿಸದಿರುವುದು ಆಶ್ಚರ್ಯಕರ.)

ನ್ಯಾಷನಲ್ ಏರ್ ಅಂಡ್ ಸ್ಪೇಸ್ ಮ್ಯೂಸಿಯಮ್

ಜಗತ್ತಿನ ಅದ್ಭುತಗಳಲ್ಲೊಂದೆಂಬಂತೆ ಈ ವಸ್ತು ಸಂಗ್ರಹಾಲಯವನ್ನು ನಿರ್ಮಿಸಿದ್ದಾರೆ. ಇದಕ್ಕೆ ಸರಿಸಾಟಿಯಾಗುವ ಇನ್ನೊಂದು ಮ್ಯುಸಿಯಮ್ ಬೇರೆಲ್ಲಿಯೂ ಇಲ್ಲವಂತೆ. ಇದರ ತುಂಬಾ ಪ್ರದರ್ಶಿತವಾಗಿರುವವು ಗಗನಯಾನ ಮಾಡಿ ಬಂದ ಪವನ ವಾಹನಗಳು, ಮತ್ತು ಅಲ್ಲಿಂದ ಗಗನಯಾತ್ರಿಗಳು ಭೂಮಿಯಲ್ಲಿದ್ದ ವಿಜ್ಞಾನಿಗಳೊಡನೆ ಆಡಿದ ಮಾತು ಕತೆ, ಸಂವಾದಗಳು, ಅಲ್ಲಿ ಅವರು ಕಂಡುಬಂದ ದೃಶ್ಯಗಳ ಪ್ರತ್ಯಕ್ಷ ವರದಿ ಇವೆ.

ವಿಮಾನ ಯುಗದ ಇತಿಹಾಸವನ್ನು ಚಿತ್ರಿಸುತ್ತವೆ, 240 ಐತಿಹಾಸಿಕ ವಿಮಾನಗಳು. 40 ಅಂತರಿಕ್ಷ ನೌಕೆಗಳು 50 ಮಿಸ್ಸೈಲ್‌ಗಳು, ರಾಕೆಟ್ಟುಗಳು ನೂರಾರು ಜೆಟ್ ಮಾಡೆಲ್ ಮುಂತಾದವಿವೆ. ಮೂರು ಅಂತಸ್ತುಗಳ ಬೃಹತ್ ಕಟ್ಟಡವು, ಅದರಲ್ಲಿ ಪ್ರದರ್ಶಿತಗೊಂಡ ವಸ್ತುಗಳು ಮಾನವನ ಮೇಧಾಶಕ್ತಿಯ ಜೀವಂತ ಸಾಕ್ಷಿಗಳಾಗಿವೆ. ಪಕ್ಷಿಗಳು ನಿರಾತಂಕವಾಗಿ ಆಗಸದಲ್ಲಿ ಹಾರಾಡುವದನ್ನು ಕಂಡ ಮಾನವ ತಾನೂ ಆಸೆ ತಾಳಿರಲು ಸಾಕು. ನಾನು ಸಣ್ಣವಳಿದ್ದಾಗ ಹಾರಾಡುವ ಆಸೆಯಾಗುತ್ತಿತ್ತು. ಆಕಾಶದಲ್ಲಿ ಪಕ್ಷಿಗಳು ಹಾರಾಡುವುದನ್ನು ಕಂಡು, ಹಂಬಲಿಸುತ್ತ

ಮನುಷ್ಯನಿಗೂ ರೆಕ್ಕೆಗಳಿದ್ದಿದ್ದರೆ? ಎಂದುಕೊಳ್ಳುತ್ತಿದ್ದೆ. ಸರಿ; ಮಲಗಿದೆನೆಂದರೆ ಆಯಿತು, ಹಾರಿದ್ದೂ ಹಾರಿದ್ದೆ. ಎರಡು ರೆಕ್ಕೆಗಳು ಎರಡು ಭುಜಗಳಿಗೆ ಬಂದಿರುತ್ತಿದ್ದವು. ಅತ್ಯಂತ ಮೇಲೆ ಹಾರುತ್ತಿದ್ದೆ. ಕೆಳಗೆ ಸುಂದರ ವನಪ್ರದೇಶ, ಬೆಟ್ಟಗುಡ್ಡ, ನದಿ–ಸಮುದ್ರ ತೋರಿಬರುತ್ತಿದ್ದವು. ಒಮ್ಮೊಮ್ಮೆ 'ಬಿದ್ದರೆ ?' ಎಂದು ಭಯಪಟ್ಟು, ಕಿರುಚಿದಾಗ, ಯಾರಾದರೂ ಎಬ್ಬಿಸಿ 'ಏಕವ್ವಾ ಕನವರಿಸಿದೆ' ಎನ್ನುತ್ತಿದ್ದರು. ಆಗ ನಾಚಿ ನೀರಾಗುತ್ತಿದ್ದೆ. ಮಿಡಲ್ ಸ್ಕೂಲಿನಲ್ಲಿ ಓದುವಾಗ ಈ ಬಗ್ಗೆ ಒಂದು ಕನಸಿನ ಅನುಭವ ಸಹ ಬರೆದಿದ್ದೆ. ಕನಸಿನಲ್ಲಿ ಯಾಕಷ್ಟು ಹಾರಾಡುತ್ತೇನೆ ಎಂದು ನನಗೇ ಸೋಜಿಗವಾಗುತ್ತಿತ್ತು. ಭಾರತದಿಂದ ಅಮೆರಿಕಾಕ್ಕೆ ಬರುವಾಗ ಅಟ್ಲಾಂಟಿಕ್ ಸಮುದ್ರದ ಮೇಲೆ ವಿಮಾನ ಹಾರಾಡುವಾಗ ಬಾಲ್ಯದ ಒಂದು ಕನಸಿನ ಪಡಿಯಚ್ಚು ಎನಿಸಿತು.

ಅಂತೂ ಪಕ್ಷಿಗಳು ಹಾರಾಡುವುದನ್ನು ನೋಡಿ ಮನುಷ್ಯನಿಗೆ ಆಸೆಯಾಗಿರುವುದು ನಿಜ. ಇಕೇರಸ್ ಮತ್ತು ಡಯೋಡಲಸ್ ಎಂಬ ಪೌರಾಣಿಕ ಹಾರಾಡುವ ದೇವತೆಗಳನ್ನು ಕಲ್ಪಿಸಿಕೊಂಡು ಮನುಷ್ಯ ತೃಪ್ತಿ ಪಟ್ಟ. ಭಾರತೀಯ ಪೌರಾಣಿಕ ಕೃತಿಗಳಲ್ಲಂತೂ ಸಾಮಾನ್ಯವಾಗಿ ಎಲ್ಲ ದೇವತೆಗಳು ಹಾರಾಡುವವರೇ! ರಾವಣನ ಬಳಿ ಪುಷ್ಪಕ ವಿಮಾನವಿತ್ತು ಎಂಬುದನ್ನು ಕೇಳಿದರೆ ಅಂಥದೊಂದನ್ನು ದರ್ಶಿಸದೆ ವಾಲ್ಮೀಕಿ ಬರೆಯುವುದಾದರೂ ಹೇಗೆ? ಎನ್ನುವ ಸಂದೇಹ ಬರದಿರದು. ಅಂತೂ ಗತವೈಭವವನ್ನು ಹೇಳಿಕೊಳ್ಳುವುದರಲ್ಲೇ ನಾವು ಹೆಮ್ಮೆ ಪಟ್ಟುಕೊಳ್ಳಬೇಕೇ ವಿನಾ, ಅದಕ್ಕಿಂತ ಹೆಚ್ಚು ನಮ್ಮವರು ಮುಂದರಿಯಲಿಲ್ಲ.

ಬಲೂನ್‌ಗಳ ಸಹಾಯದಿಂದ ಹಾರಾಡಲು ಕೆಲವರು ಯತ್ನಿಸಿದರು. 1773 ರಲ್ಲಿ ಸರ್ ಜಾರ್ಜ್ ಕೇಲೆ ಎಂಬುವವ ಸ್ಪಷ್ಟರೂಪವನ್ನು ಹಾರಾಟಕ್ಕೆ ಕೊಡಲೆತ್ನಿಸಿದ. ಆಟೋ ಲಿಲಿಯನ್‌ತಾಲ್ ಎಂಬ ಇನ್ನೋರ್ವ ವಿಜ್ಞಾನಿಯೂ ಯತ್ನಿಸಿದ. ಆದರೆ ಗಗನ ವಾಹನಗಳ ಯಶಸ್ವಿ ಪ್ರಯತ್ನವಾಗಿದ್ದು ರೈಟ್ ಸಹೋದರರಿಂದ. ಆರ್‌ವಿಲ್‌ರೈಟ್ ಮತ್ತು ವಿಲ್‌ಬರ್‌ರೈಟ್ ಸಹೋದರರು ಡಿಸೆಂಬರ್ 17,1903 ರಂದು ಮೊದಲಬಾರಿ ಹಾರುವುದರಲ್ಲಿ ಯಶಸ್ವಿಯಾದರು. 1904–ಮತ್ತು 1905 ರಲ್ಲಿ ಇನ್ನೂ ಸುಧಾರಿತ ರೂಪದ ವಿಮಾನಗಳನ್ನು ಕಂಡುಹಿಡಿದರು, ಅವರು ಸಂಶೋಧಿಸಿದ ಮತ್ತು ಹಾರಿಸಿದ ವಿಮಾನಗಳ ಮಾದರಿಗಳನ್ನು ಈ ಮ್ಯೂಸಿಯಮ್‌ನಲ್ಲಿ ಕಾಣಬಹುದು.

ಅಂದು ಉಗಮಗೊಂಡ ಗಗನವಾಹನಗಳ ಯುಗದಿಂದ ಇಂದು ಮಾನವ ಅತ್ಯಂತ ಸುಧಾರಿತ ರೂಪದ ಯಂತ್ರಗಳನ್ನು ಕಂಡುಹಿಡಿದಿದ್ದಾನೆ. ಅನೇಕ ಗ್ರಹಗಳಿಗೆ

ಯಾನ ಮಾಡಿ ಬಂದಿದ್ದಾನೆ. ಚಂದ್ರ ಮುಂತಾದ ಗ್ರಹಗಳ ಮೇಲೆ ಪಾದವಿಟ್ಟು, ತಮ್ಮ ನಾಡಿನ ಧ್ವಜನೆಟ್ಟು, ಅಲ್ಲಿಂದ ಅಲ್ಲಿಯ ಕಲ್ಲು ಮಣ್ಣುಗಳ ಸಂಗ್ರಹವನ್ನು ತಂದಿದ್ದಾನೆ. ಅಮೆರಿಕಾದ ಗಗನಯಾತ್ರಿಗಳು ಹೋಗಿ ಬಂದ ವಾಹನಗಳು, ಅವರು ಉಪಯೋಗಿಸಿದ ಸಾಮಾನುಗಳು–ಮುಂತಾದವುಗಳ ಪ್ರದರ್ಶನ ಇಲ್ಲಿದೆ. ಅಲ್ಲಿಂದ ಅವರು ತೆಗೆದಿರುವ ಪೃಥ್ವಿಯ ಮತ್ತು ಇತರ ಗ್ರಹಗಳ ಭಾವಚಿತ್ರಗಳು ಬಹಳ ಸುಂದರವಾಗಿವೆ. ಅಂತರ್‌ಗ್ರಹ ಪ್ರಯೋಗಶಾಲೆ, ಅದರ ಒಳಗೆ ಗಗನಯಾತ್ರಿಗಳಿಗೆ ಮಾಡಲಾಗಿದ್ದ ವ್ಯವಸ್ಥೆ–ಅಡಿಗೆ ಮಾಡಿಕೊಳ್ಳಲು, ಸ್ನಾನಕ್ಕೆ, ಮಲಗಲು, ಎಲ್ಲವನ್ನೂ ಗಮನಿಸಬಹುದು.

ಅಪೊಲೋ ಯಾತ್ರಿಗಳು ಹೋಗಿದ್ದ ಗಗನ ನೌಕೆಯೂ ಪ್ರದರ್ಶಿಸಲ್ಪಟ್ಟಿದೆ. ಅಲ್ಲಿ ಅವರು ನಿಂತುದು, ಓಡಾಡಿದುದು ಎಲ್ಲ ಪ್ರತಿರೂಪವಾಗಿ ಪ್ರದರ್ಶಿಸಲ್ಪಟ್ಟಿದೆ. ಗಗನ ಯಾತ್ರಿಗಳು ಬಳಸಿದ ವಸ್ತುಗಳನ್ನೆಲ್ಲ ಕಾಯ್ದಿರಿಸಲಾಗಿದೆ. ಅಲ್ಲಿಂದ ಅವರು ತಂದ ಚಂದ್ರನ ಮಣ್ಣು, ಕಲ್ಲುಗಳನ್ನೂ ಪ್ರದರ್ಶಿಸಲಾಗಿದೆ. ಅಲ್ಲಿ ನಿಂತು ಅವರು ಮಾಡಿದ ಸಂಭಾಷಣೆಯ ಧ್ವನಿಮುದ್ರಿತ ಟೇಪನ್ನು ನಾವು ಸ್ವಿಚ್ ಒತ್ತಿ ಕೇಳಿಕೊಳ್ಳಬಹುದು. ಇಲ್ಲಿಯ ಇನ್ನೊಂದು ಆಕರ್ಷಣೆ ಮ್ಯೂಸಿಯುವಮ್ ಥಿಯೇಟರ್. ಅಲ್ಲಿ ಸತತವಾಗಿ ಸಾಕ್ಷ್ಯ ಚಿತ್ರ ತೋರಿಸುವರು. ನಮಗೆ ಎರಡು ಚಿತ್ರಗಳನ್ನು ನೋಡಲು ಅವಕಾಶ ಸಿಕ್ಕಿತು. ಒಂದು Living Planet ಮತ್ತು ಇನ್ನೊಂದು To Flyರ ಮೊದಲನೆಯದರಲ್ಲಿ ಭೂಮಿಯ ಉತ್ಪತ್ತಿ ; ಅದು ಸೂರ್ಯನಿಂದ ಸಿಡಿದುದು ; ನಂತ. ತಣ್ಣಗಾದುದು ; ಸಮುದ್ರ, ನದಿ, ಬೆಟ್ಟ–ಗುಡ್ಡಗಳ ನಿರ್ಮಾಣ ; ನಂತರ ಸಸ್ಯ, ಜೀವಗಳು ಮೆಲ್ಲನೆ ಕಾಣಿಸಿಕೊಂಡುದು ; ಅಸಂಖ್ಯಾತ ಗಿಡಮರಗಳ ಉತ್ಪತ್ತಿ, ಜೀವಜಾಲದ ಪ್ರಸರಣ, ಎಲ್ಲ ಪ್ರದರ್ಶಿಸಲ್ಪಟ್ಟು, ಅತ್ಯಂತ ಪುಟ್ಟದಾದರೂ ನಾವು ವಾಸಿಸುವ ಜೀವಂತಗ್ರಹ ಭೂಮಿ ಎಷ್ಟು ಮಹತ್ವಪೂರ್ಣದ್ದು ಎಂಬುದನ್ನು ಮನಗಾಣಿಸಲಾಗಿದೆ. ಈ ಚಿತ್ರ ತೀರಾ ಉದ್ಬೋಧಕ ಮತ್ತು ರಂಜಕ. ಸುಂದರ ವನಪ್ರದೇಶ, ಅನೇಕ ಕಾಡು ಮೃಗಗಳ ಜೀವನ, ಎಸ್ಕಿಮೋ ನಾಡಿನಲ್ಲಿ ಗಡುತರ ಜೀವನ, ಮಾನವ ಇತಿಹಾಸದಲ್ಲಿ ಬೆಳೆದು ಬಂದ ಅನಾಗರಿಕ ಸಂಸ್ಕೃತಿಗಳು, ನಾಗರಿಕ ಸಂಸ್ಕೃತಿಗಳು, ಧರ್ಮಪಂಥ ಆಚಾರ ವಿಚಾರಗಳು–ಮುಂತಾದ ಎಲ್ಲವುಗಳ ಪ್ರದರ್ಶನವಿದೆ.

ಇನ್ನೂ ಮಾನವ ಕಾಲಿಡಲಾರದ ದುರ್ಗಮ ಅರಣ್ಯ, ಹಿಮಪರ್ವತ, ಜಾರು ಕಣಿವೆಗಳು, ಸುಂದರ ಸರೋವರ ಮುಂತಾದವನ್ನು ತೋರಿಸಲಾಗುತ್ತದೆ. ಭಾರತದಿಂದ ಕೇರಳದ ಮೌನಕಣಿವೆ, ತೆಂಗಿನ ತೋಟ, ಸಮುದ್ರ ತೀರ ಮುಂತಾದವನ್ನು ಆಯ್ದುಕೊಳ್ಳಲಾಗಿದೆ. ಆದರೆ ಭಾರತದ ಧರ್ಮ ಸಂಸ್ಕೃತಿ ಬಗ್ಗೆ ಮಾತನಾಡುತ್ತ

ತಾಜ್ ಮಹಲ್ ತೋರಿಸಿ, ನಂತರ ಕಾಶಿಯ ಅತ್ಯಂತ ಕೊಳಕಾದ ಗಂಗಾತೀರದ ಪ್ರದೇಶವನ್ನು, ಮೂಢ ಜನರು ನೀರಲ್ಲಿ ಮುಳುಗು ಹಾಕುವುದನ್ನು, ಅಜ್ಞಾನದ ಪ್ರತೀಕವಾಗಿರುವ ದಡ್ಡ ಕಳೆಯ ಓರ್ವಸಾಧು ನದೀ ತೀರದಲ್ಲಿ ಕುಳಿತಿರುವುದನ್ನು, ಓರ್ವ ಮೂಢ ಪೂಜಾರಿ ಪೂಜೆ ಮಾಡಿಸುವುದನ್ನು–ಹಿಂದೂ ಧರ್ಮವೆಂದು ತೋರಿಸಲಾಗಿದೆ. ಅದನ್ನು ನೋಡುತ್ತಾ ಮನಸ್ಸು ತುಂಬಾ ನೊಂದಿತು. ಮಧುರೆ ಮೀನಾಕ್ಷಿಯ ಸುಂದರ ದೇವಲಯವನ್ನೋ ಕನ್ಯಾಕುಮಾರಿಯ ಸ್ಮಾರಕ ಮಂದಿರವನ್ನೋ ತೋರಿಸದೆ ಹಿಂದೂ ಸಮಾಜದ ಕುರೂಪವನ್ನೇ ಜಗತ್ಪ್ರಸಿದ್ಧ ಮಾಡುವ ಈ ಚಿತ್ರ ಕಂಡಾಗ ಬೇಸರವಾಯಿತು.

ಇಂಥ ಸುಂದರ ಜೀವಂತ ಪೃಥ್ವಿಯನ್ನು ವೈಜ್ಞಾನಿಕ ಮಾನವ; ಯಂತ್ರಯುಗಗಳು ಹಾಳು ಮಾಡುವ ಬಗ್ಗೆ, ಕಲಂಕಿತ ಮಾಡುತ್ತಿರುವ ಬಗ್ಗೆ ಮನನೀಯವಾಗಿ ಚಿತ್ರಿಸಲಾಗಿದೆ. ಇನ್ನೊಂದು ಚಿತ್ರ To Fly ಇನ್ನೂ ಚೆನ್ನಾಗಿದೆ. ಹಾರಾಟದ ಕಲ್ಪನೆ ಮನುಷ್ಯನಲ್ಲಿ ಸುಳಿದುದು, ಗಾಳಿಪಟದ ಕಲ್ಪನೆಯಿಂದ ಬಲೂನ್‌ಗಳವರೆಗೆ ವಿವಿಧ ರೀತಿಯಲ್ಲಿ ಹಾರಾಡಲು ಯತ್ನಿಸಿದುದು. ನಂತರ ರೈಟ್ ಸಹೋದರರ ಯತ್ನ, ಯಶಸ್ಸು. ವಿಮಾನಗಳು ಸತತವಾಗಿ ಸುಧಾರಣೆಗೊಂಡುದು, ಅತ್ಯಂತ ವೇಗದ ವಿಮಾನಗಳು ಬಳಕೆಗೆ ಬರುತ್ತಿರುವುದು. ಮನುಷ್ಯರು ಕೆಲವು ಸಲಕರಣೆಗಳ ಮುಖಾಂತರ ಒಬ್ಬೊಬ್ಬರೇ ಎತ್ತರದಲ್ಲೆಲ್ಲ. ಹಾರುವುದು, ಬೇರೆ ಗ್ರಹಗಳನ್ನು ಸಂದರ್ಶಿಸಿದುದು, ಚಂದ್ರಲೋಕದಲ್ಲಿ ಇಳಿದು ಯಾತ್ರಿಗಳು ಕೆಲಸ ಮಾಡುವುದು ಈ ಎಲ್ಲ ಜೀವಂತವಾಗಿ ಚಿತ್ರಿಸಲ್ಪಟ್ಟವೆ. ಈ ಸಂಗ್ರಹಾಲಯಗಳಲ್ಲಿ ಘನೀಭೂತವಾಗಿ ಸಿಗುವ ಜ್ಞಾನ ತೀರ ಅದ್ಭುತ. ಹೊಸದೊಂದು ಲೋಕವನ್ನು ಪ್ರವೇಶಿಸಿದಂತೆ ಆಗುತ್ತದಿಲ್ಲಿ. ವಾಷಿಂಗ್ಟನ್‌ಗೆ ಬಂದಮೇಲೆ ಇದೊಂದನ್ನು ನೋಡಲೇಬೇಕು.

ಇನ್ನೂ ಅನೇಕ ಮ್ಯುಸಿಯಮ್‌ಗಳಿವೆ. ಎಲ್ಲವನ್ನೂ ವಿವರವಾಗಿ ನೋಡಲು ಸಾಕಷ್ಟು ವೇಳೆ ಬೇಕು. ನಂತರ ನೋಡೋಣವೆಂದು ಅಷ್ಟರಲ್ಲಿ ನ್ಯೂಯಾರ್ಕ್ ಕಾರ್ಯಕ್ರಮ ನಿಶ್ಚಿತವಾಗಲು ಇತ್ತ ಬಂದೆವು. ವಾಷಿಂಗ್ಟನ್‌ನಿಂದ ಸುಮಾರು 350 ಮೈಲಿ, ಏಳು ತಾಸಿನ ಪ್ರಯಾಣ. ಡಾ|| ಕೋರಿಯವರ ಕಾರಿನಲ್ಲಿ ಹೊರಟೆವು. ಅವರು, ಅವರ ಶ್ರೀಮತಿ ಕಾಂತಾ ಅವರು ಮತ್ತು ನಾನು, ಕುಮುದಾ. ಅಮೆರಿಕಾದ ರಸ್ತೆಗಳು ತುಂಬಾ ಸುಂದರ, ಸ್ವಚ್ಛ ಕಾರುಗಳೂ ತೂಕವಾಗಿರುತ್ತದೆ. ರಸ್ತೆಯಲ್ಲಿ ಒಂದು ಕೊರಕಲು, ಗುಂಡಿ, ಕಲ್ಲು ಇರದು. ಇನ್ನು ದಾರಿಯಲ್ಲಿ ಮನುಷ್ಯರೂ ಅಡ್ಡ ಬರರು ; ಪ್ರಾಣಿಗಳಂತೂ ಇಲ್ಲವೇ ಇಲ್ಲ. ಹೆದ್ದಾರಿಗಳಲ್ಲಿ ಹೋಗಲು, ಬರಲು ಸ್ವತಂತ್ರವಾಗಿ ಮೂರು ದಾರಿಗಳು. ಎಷ್ಟು ವೇಗವಾಗಿ ಹೋದರೂ ಗೊತ್ತೇ ಆಗದು.

ಅಲ್ಲದೆ ಇಲ್ಲಿ 40 ಮೈಲಿಗಿಂತ ಕಡಿಮೆ ವೇಗದಲ್ಲಿ ಸಂಚರಿಸಕೂಡದು ; ಐವತ್ತೈದಕ್ಕೆ ಮೀರಲೂ ಕೂಡದು. ಅಲ್ಲಲ್ಲೇ ವೇಗಮಿತಿ 55 ಮೈಲಿ. ನಿಮ್ಮ ವೇಗವನ್ನು ರಡಾರ್‌ಗಳು ಚೆಕ್‌ಮಾಡುತ್ತಿವೆ ಎಂಬ ಸೂಚನೆ ಇರುತ್ತದೆ. 55ಕ್ಕೆ ಮೀರಿ ಗಾಡಿ ಚಲಿಸಿದರೆ ಸ್ವಲ್ಪ ಹೊತ್ತಿನಲ್ಲೇ ಪೋಲಿಸ್‌ಕಾರು ಹಾಜರಾಗುತ್ತದೆ. ಕೆಲವು ಜಾಗಗಳಲ್ಲಿ ರಡಾರ್‌ಗಳೊಡನೆ ಪೋಲೀಸರು ಇರುತ್ತಾರೆ. ತಕ್ಷಣ ಒಂದು ಟಿಕೆಟ್ ಕೊಟ್ಟು ದಂಡಕಟ್ಟುತ್ತಾರೆ. ಹೆದ್ದಾರಿಗಳಲ್ಲಿ ಪೋಲೀಸ್ ಗಸ್ತು ಸದಾ ಇರುತ್ತದೆ. ಒಂದು ಉದ್ದೇಶ ವೇಗಮಿತಿ ಗಮನಿಸಲು, ಇನ್ನೊಂದು ಉದ್ದೇಶ ಜನಕ್ಕೆ ಸಹಾಯ ಮಾಡಲು. ಕಾರು ಕೆಟ್ಟರೆ ಅಥವಾ ಅಪಘಾತವಾದರೆ ಬೇಗನೇ ಹಾಜರಾಗುತ್ತಾರೆ. ತೀವ್ರವಾದ ಸಹಾಯ ನೀಡುತ್ತಾರೆ. ದಾರಿಯುದ್ದಕ್ಕೂ ಟೆಲಿಫೋನ್ ಸೌಕರ್ಯ, ಮೋಟೆಲ್-ಕಾರು ನಿಲ್ಲಿಸಿಕೊಂಡು ವಸತಿಮಾಡುವ ತಾಣ, ಹೋಟೆಲ್-ಕಾರಿಗೆ ಜಾಗವಿಲ್ಲ ಕೇವಲ ಮನುಷ್ಯರ ವಸತಿ, ಮತ್ತು ರೆಸ್ಟೊರಾಂಟ್‌ಗಳ ಸೌಕರ್ಯ ಅತ್ಯದ್ಭುತವಾಗಿದೆ. ಹೆದ್ದಾರಿಯಲ್ಲಿ ಸಾಗುವಾಗ ನಾವು ಅನೇಕ ರಾಜ್ಯಗಳ ಮೂಲಕ ಹಾಯ್ದು ಹೋಗುತ್ತೇವೆ. ಒಂದೊಂದು ರಾಜ್ಯ ಪ್ರವೇಶಿಸಬೇಕಾದರೂ ರಸ್ತೆಸಾರಿಗೆ ತೆರಿಗೆ ಕೊಡಬೇಕು. ಕಾರಿನಲ್ಲಿ ಅಡ್ಡಾಡುವವರು ಸಿರಿವಂತರಾದ ಕಾರಣ, ರಸ್ತೆಯ ಸಂರಕ್ಷಣೆಗೆ ತೆರಿಗೆ ಕಟ್ಟಲೇಬೇಕೆಂಬುದು ಸರ್ಕಾರದ ಧೋರಣೆ. ಆ ಹಣದಿಂದ ರಸ್ತೆಗಳನ್ನು ಸುವ್ಯವಸ್ಥಿತವಾಗಿ ಇಟ್ಟಿರುವರು.

ತೆರಿಗೆ ಕಟ್ಟಲು ತಡವಾಗದು. ಕಾರಿನಲ್ಲಿ ಹಾಯ್ದುಹೋಗುವಾಗಲೇ ಪಕ್ಕದಲ್ಲಿ ಕಿಟಕಿಯಲ್ಲಿ ಹಣ ಕೊಟ್ಟರೆ ಮುಂದೆ ಅಡ್ಡ ಇರುವ ಗೇಟು ತೆರೆಯುತ್ತೆ. ಯಾರಬಳಿ ಚಿಲ್ಲರೆಯುಂಟೋ ಅವರು ಇನ್ನೂ ತ್ವರಿತವಾಗಿ ಯಂತ್ರವಿರುವ ದಾರಿಯಲ್ಲಿ ಸಾಗಬಹುದು. ಹಣವನ್ನು ಯಂತ್ರದ ಬಾಯಿಗೆ ಎಸೆದರೆ ಅದು ಧನ್ಯವಾದ ಹೇಳಿ, ಟಿಕೆಟ್ ನೀಡಿ, ಅಡ್ಡ ಇಟ್ಟ ತಡೆಯನ್ನು ತೆಗೆಯುತ್ತದೆ. ಇಂಥ ಎಷ್ಟೋ ಗಡಿಗಳನ್ನು ದಾಟ ಮುಂದೆ ಸಾಗುತ್ತೇವೆ.

ನ್ಯೂಯಾರ್ಕ್ ಒಳಗೆ ಪ್ರವೇಶಿಸಬೇಕಾದರೆ ಸೇತುವೆ ಬರುತ್ತದೆ. ಈ ಸೇತುವೆ ಸಮುದ್ರದ ಮೇಲೆ ಹಾಯುತ್ತದೆ. ಸಮುದ್ರದ ಕೆಳಗೆ ಒಂದು ಉದ್ದವಾದ ಸುರಂಗ ಸಹ ಇದೆ. ಸೇತುವೆ ಕೆಳಗಿನ ಯಾವ ಆಸರೆ ಇಲ್ಲದೆ ಕಟ್ಟಲ್ಪಟ್ಟ ಸಸ್ಪೆನ್‌ಷರ್ ಬ್ರಿಡ್ಜ್, ಟನಲ್ ನೋಡಿದರೆ ಸಮುದ್ರದ ಕೆಳಗೆ ಈ ವೈಜ್ಞಾನಿಕ ಸಾಧನೆಯ ಬುದ್ಧಿಶಕ್ತಿಗೆ ತಲೆ ತೂಗುವಂತಾಗುತ್ತದೆ.

ರಸ್ತೆಸಾರಿಗೆ ತೆರಿಗೆ ಪಡೆದುಕೊಂಡರೂ ಚಿಂತೆಯಿಲ್ಲ ; ತಕ್ಕಂತಹ ಅನುಕೂಲ ಒದಗಿಸಿಕೊಡುವುದರಿಂದ ಜನರು ಬೇಸರಪಡುವುದಿಲ್ಲ. ಹಿಮಪಾತವಾಗುತ್ತಿದ್ದಂತೆಯೇ

ರಸ್ತೆಗಳು ಸಂಚಾರಕ್ಕೆ ಅಯೋಗ್ಯವಾಗುತ್ತವೆ. ತುಂಬಾ ಅಪಾಯಕಾರಿ ಸಹ. ಆಗ ತಕ್ಷಣವೇ ಕಾರ್ಪೊರೇಷನ್ ಲಾರಿಗಳು ಚಕಚಕನೇ ಧಾವಿಸಿ ಕಾರ್ಯೋನ್ಮುಖವಾಗುತ್ತವೆ. ದಟ್ಟವಾಗಿ ಹಿಮಬಿದ್ದಿದ್ದರೆ ಅಗಲವಾದ ಹಲಗೆಯಾಕಾರದ ಕಬ್ಬಿಣದ ವಸ್ತುವನ್ನು ಲಾರಿಗಳಿಗೆ ಕಟ್ಟಿ, ಹಿಮವನ್ನು ಬದಿಗೆ ಸರಿಸುವರು. ಆದರೆ ಹಸಿ ಹಸಿಯಾದ ಹೂವಿನಂತಹ ಹಿಮಕ್ಕಿಂತಲೂ ಮಂಜುಗಟ್ಟಿದ ಹಿಮ ತುಂಬಾ ಅಪಾಯಕಾರಿ. ಗಾಜಿನಂತಹ ಜಾರುವಿಕೆ ಹೊಂದಿದ್ದು, ಕಾರುಗಳು ಜಾರುಬಂಡೆಯಾಟ ಆಡುತ್ತವೆ. ಅಂಥದನ್ನು ಕರಗಿಸಲು ಮರಳು ಮತ್ತು ವಿಶಿಷ್ಟರೀತಿಯ ಉಪ್ಪನ್ನು ಬೆರಸಿ ಟ್ರಕ್ಕಿನ ಮೂಲಕ ಚೆಲ್ಲುತ್ತಾ ಹೋಗುತ್ತಾರೆ ಆಗ ಹಿಮದ ಪರದೆ ಕರಗುತ್ತ ಹೋಗುತ್ತದೆ. ಶೀತಕಾಲದಲ್ಲಿ ಹವೆ ತಂಪಾದಾಗ ಸಿಹಿನೀರು ಮಾತ್ರ ಗಡ್ಡೆಗಟ್ಟುತ್ತದೆ. ಉಪ್ಪಿನಂಶದ ಸಮುದ್ರದ ನೀರು ಗಡ್ಡೆಗಟ್ಟದು ಎಂಬ ಈ ವಿಚಾರದ ಆಧಾರದ ಮೇಲೆ ಲವಣದ ಬಳಕೆ ಜಾರಿಗೆ ಬಂದಿತಂತೆ. ಈ ಮರಳು-ಲವಣಗಳ ಮಿಶ್ರಣವನ್ನು ಹೆದ್ದಾರಿಗಳಲ್ಲಿ, ಮುಖ್ಯರಸ್ತೆಗಳಲ್ಲಿ ಚೆಲ್ಲಲು ಮುನಿಸಿಪಾಲಿಟಿಗಳು ಕೋಟ್ಯಾಂತರ ಡಾಲರ್ ಖರ್ಚು ಮಾಡಬೇಕಾಗುತ್ತದೆ. ರಸ್ತೆಗಳು ಹಿಮಕಾಲದಲ್ಲಿ ಈ ಹಿಮಪಾತ, ಅದನ್ನು ಕರಗಿಸಲು ಚೆಲ್ಲುವ ಲವಣಗಳಿಂದಾಗಿ ತೂತಾಗುತ್ತವಂತೆ ; ನಂತರ ಅಷ್ಟೇ ಪ್ರಮಾಣದ ಉಷ್ಣತೆಯಿಂದಾಗಿ ಬೇಸಿಗೆಯಲ್ಲಿ ಹಿಗ್ಗಿ, ಸೀಳಿಬಿಡುತ್ತವಂತೆ. ಇಷ್ಟೆಲ್ಲ ವೈಪರೀತ್ಯಗಳಿದ್ದರೂ ರಸ್ತೆಗಳನ್ನು ಸುವ್ಯವಸ್ಥೆಯಿಂದ ರಕ್ಷಿಸುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ.

ಎಷ್ಟುದೂರ ಪ್ರಯಾಣ ಮಾಡಿದರೂ ಆಯಾಸವೇ ಇರದು. ಕಾರುಗಳೂ ಕುಣಿದಾಡದೆ ಸಾಗುತ್ತವೆ. ರಸ್ತೆಗಳೂ ಚೆನ್ನಾಗಿರುತ್ತವೆ. ಸುಮಾರು ಏಳು ತಾಸು ಪ್ರಯಾಣ ಮಾಡಿಕೊಂಡು ಹೋದರೂ ನಾನು ಇಳಿದ ತಕ್ಷಣವೇ ಕಾರ್ಯಕ್ರಮಕ್ಕೆ ಸಿದ್ಧವಾದೆ. ನಮ್ಮಲ್ಲಿ ಒಂದು-ಎರಡು ತಾಸು ಕಾರಿನಲ್ಲಿ ಪ್ರಯಾಣ ಮಾಡಿದರೂ ಸ್ವಲ್ಪ ವಿಶ್ರಾಂತಿ ಬೇಕೆನಿಸುತ್ತದೆ. ಕಾರುಗಳು ಡಕಡಕ ಎನ್ನುತ್ತವೆ. ರಸ್ತೆಗಳಂತೂ ತೀರಾ ಅದ್ಭುತ. ಇಲ್ಲಿ ಪ್ರೈವೇಟ್ ಮಾಲಿಕತ್ವದ ಕೈಗಾರಿಕೆಗಳೇ ಅಧಿಕವಾಗಿದ್ದು, ತೀರಾ ಸ್ಪರ್ಧೆ ಇದ್ದು ದಿನದಿನಕ್ಕೂ ಉತ್ಕೃಷ್ಟ ಸಾಮಾನು ವ್ಯಾಪಾರರಂಗಕ್ಕೆ ಬರುತ್ತವೆ. ಕೊಂಚ ಸತ್ವ ಕಡಿಮೆಯಾದರೂ ಬುದ್ಧಿವಂತ ಗ್ರಾಹಕರು ಕಂಪೆನಿಯ ಅವನತಿಗೆ ಕಾರಣರಾಗುತ್ತಾರೆ. ಬೆಲೆಯನ್ನು ಕಡಿಮೆ ಇಟ್ಟು, ಉತ್ಕೃಷ್ಟ ಸಾಮಾನು ಒದಗಿಸಲು ಕಂಪೆನಿಗಳವರು ಸತತವಾಗಿ ಶ್ರಮಪಡುತ್ತಾರೆ.

ಈ ದೇಶದಲ್ಲಿ ಗ್ರಾಹಕರ ಸಾಮೂಹಿಕ ಸಂಘ ಒಂದಿದ್ದು, ಇದು ನಿಸ್ವಾರ್ಥವಾಗಿ ಕೆಲಸಮಾಡುವ ಸಂಸ್ಥೆ. ಯಾವುದೇ ವಸ್ತು ಮಾರ್ಕೆಟ್ಟಿಗೆ ಬರುತ್ತಿದ್ದಂತೆಯೇ ಈ ಸಂಸ್ಥೆ ಅವುಗಳ ಗುಣಮಟ್ಟ ಅಳೆದು, ಯಾವುದು ಉತ್ತಮವೆಂದು ನಿರ್ಧರಿಸುತ್ತದೆ.

ಒಂದು ವಸ್ತುವಿಗೆ ಒಂದು ಡಾಲರ್ ಜಾಸ್ತಿಕೊಟ್ಟರೂ, ಆ ಒಂದು ಡಾಲರ್ ಹೆಚ್ಚಾಗಿ ಕೊಟ್ಟದ್ದರಿಂದ ಏನಾದರೂ ಉಪಯೋಗವಾಯಿತೇ ಎಂಬ ಬಗ್ಗೆ ಇದು ನಿರ್ಧಾರ ಕೈಗೊಳ್ಳುತ್ತದೆ. ಬುದ್ಧಿವಂತ ಗ್ರಾಹಕರು ಈ ಸಂಸ್ಥೆಯ ಸಲಹೆ, ಸಹಕಾರದೊಡನೆ ಸಾಮಾನು ಕೊಳ್ಳುತ್ತಾರೆ. ಇನ್ನು ಕೆಲವರು ಅತ್ಯಧಿಕವಾಗಿ ಪ್ರಚಾರವಾಗಿರುವ ಜಾಹಿರಾತು ಪ್ರಧಾನ ಕಂಪೆನಿಯ ಸಾಮಾನು ಕೊಳ್ಳುತ್ತಾರೆ.

ಹೀಗಾಗಿ ಕೈಗಾರಿಕಾ ಉದ್ಯಮಗಳು ಸದಾಕಾಲ ಮೈಯೆಲ್ಲ ಕಣ್ಣಾಗಿರಬೇಕಾಗುತ್ತದೆ. ನಮ್ಮಲ್ಲಿ, ನಮ್ಮ ಗ್ರಾಹಕರು ಬುದ್ಧಿವಂತರಿದ್ದರೂ ತುಂಬಾ ನಿಸ್ಸಹಾಯಕರು. ಏಕೆಂದರೆ ಕಾರು ಮುಂತಾದ ಉದ್ಯಮ ಕೆಲವು ಶ್ರೀಮಂತ ಕಂಪೆನಿಗಳ ಸೊತ್ತಾಗಿದ್ದು, ಅವರು ಉತ್ಪಾದಿಸುವ ತಗಡಿನ ಡಬ್ಬಿಯನ್ನಾದರೂ ನಾವು ಕೊಳ್ಳಲೇಬೇಕು. ಅವರು, ಇನ್ನಾರೂ ಸ್ಪರ್ಧಿಗಿಳಿಯದಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಿರುತ್ತಾರೆ. ಈ ದೇಶದಲ್ಲಿ ಕಾರು ಜೀವನಾವಶ್ಯಕತೆ. ಯಾರೂ ಕಾಯಬೇಕಾಗಿಲ್ಲ. ದಿನಕ್ಕೆ ಅನೇಕ ಕಾರುಗಳು ಉತ್ಪಾದನೆಯಾಗುತ್ತವೆ. ಕಡಿಮೆಬಿದ್ದರೆ ಬೇರೆ ದೇಶದಿಂದ ಆಮದಾದವು ಇದ್ದೇ ಇರುತ್ತವೆ.

ನಾನು ಭಾರತದಲ್ಲಿದ್ದಾಗ Be Indian and buy Indian ಎಂಬ ವಾಕ್ಯದ ಬಗ್ಗೆ ಒತ್ತಿ ಹೇಳುತ್ತಿದ್ದೆ. ಈಗ ಮಾತ್ರ ಮೊದಲ ಅರ್ಧಭಾಗ Be Indian ಎಂಬುದನ್ನು ಹೇಳಿದರೂ Buy Indian ಎಂದು ಹೇಳಲು ಸಂಕೋಚವಾಗುತ್ತಿದೆ. ಏಕೆಂದರೆ ಕೊಳ್ಳುವ ಗ್ರಾಹಕರ ದೇಶ, ಸಮಾಜಗಳ ಭಕ್ತಿಯನ್ನು ಉದ್ಯಮದಾರರು ದುರುಪಯೋಗ ಮಾಡಿಕೊಳ್ಳುತ್ತಾರೆ. ಇಂಥದೊಂದು ಅಭಿಮಾನದಿಂದ ನಾವು ಕೊಂಡ ಒಂದು ರೆಕಾರ್ಡರ್ ಒಂದೇ ತಿಂಗಳಲ್ಲಿ ವಿಕಾರವಾಗಿ ಕೂಗುತ್ತಿದೆ. ಮುಂದುವರಿದ ರಾಷ್ಟ್ರಗಳಿಂದ ಉತ್ಕೃಷ್ಟ ವಸ್ತುಗಳು ಬಂದು ಸ್ಪರ್ಧಿಸಲು ಅಥವಾ ಇನ್ನು ಕೆಲವು ಕಂಪೆನಿಗಳು ಸ್ಥಾಪಿಸಲ್ಪಟ್ಟು ಉತ್ತಮಮಟ್ಟದ ವಸ್ತುಗಳನ್ನು ಕೊಡಲು ಅವಕಾಶವೇ ಇಲ್ಲದ್ದರಿಂದ ಗ್ರಾಹಕರು ತುಂಬಾ ಕಷ್ಟ ಅನುಭವಿಸಬೇಕಾಗುತ್ತೆ.

ಅಮೆರಿಕಾದೇಶವು ಸಹ ಇತ್ತೀಚಿಗೆ ವಿದೇಶೀಯ ಹಲವಾರು ಸಾಮಾನುಗಳನ್ನು ನಿಷೇಧಿಸುವ ಆಲೋಚನೆ ತಾಳುತ್ತಿದೆಯಂತೆ. ಕಾರಣವೆಂದರೆ ಜಪಾನಿನ ಸಾಮಾನುಗಳು ಎಲ್ಲರ ಮನೆಗಳನ್ನು ಅಲಂಕರಿಸುತ್ತಿವೆ. ಯೂ. ಎಸ್. ಎ. ಯಲ್ಲಿ ತಯಾರಾದ ಟೇಪ್‌ರೆಕಾರ್ಡರ್, ಕ್ಯಾಲಕ್ಯುಲೇಟರ್‌ಗಿಂತ ಜಪಾನಿನಲ್ಲಿ ತಯಾರಾದವು ಉತ್ತಮ ಗುಣಮಟ್ಟದಿಂದ ಕೂಡಿದವು. ಸೋವಿಯೆಂದು ಇಲ್ಲಿಯವರೂ ಅವನ್ನೇ ಕೇಳುತ್ತಾರೆ. ಜರ್ಮನಿಯ ಕಾರುಗಳಿಗೆ ಇಲ್ಲಿ ವಿಪರೀತ ಬೇಡಿಕೆ. ಅಮೆರಿಕಾದ ಜೀವನಮಟ್ಟ

ಜಾಸ್ತಿಯಿದ್ದು, ಇಲ್ಲಿ ಮನುಷ್ಯ ಕೆಲಸದ ಬೆಲೆ ತೀರಾ ಏರಿರುವುದರಿಂದ ಜಪಾನ್, ಭಾರತಗಳು ಒದಗಿಸುವ ಬೆಲೆಯಲ್ಲಿ ಅಮೆರಿಕದ ಉದ್ಯಮಿಗಳು ಪೂರೈಸಲಾರರು.

ನ್ಯೂಯಾರ್ಕ್ ನಗರವನ್ನು ತಲ್ಪಿದಾಗ ಐದು ಗಂಟೆಯಾಗಿ ಐದು ನಿಮಿಷ. ಅರ್ಧಗಂಟೆಯಲ್ಲಿ ಸಿದ್ಧರಾಗಿ ಹೊರಟೆವು. ಕ್ವೀನ್ಸ್ ಬರೋ ಕಮ್ಯುನಿಟಿ ಕಾಲೇಜಿನ ಭವ್ಯ ಸಭಾಂಗಣದಲ್ಲಿ ಕಾರ್ಯಕ್ರಮ. ಕನ್ನಡ ಕೂಟದವರು "ಕನ್ನಡ ರಂಗಭೂಮಿಯ ದಿನಾಚರಣೆ" ಎಂಬ ಕಾರ್ಯಕ್ರಮದ ಅಂಗವಾಗಿ ಮುಖ್ಯ ಅತಿಥಿಯನ್ನಾಗಿ ನಮ್ಮನ್ನು ಆಹ್ವಾನಿಸಿದ್ದರು. ಸಾಂಸ್ಕೃತಿಕ ಅನೇಕ ಕಾರ್ಯಕ್ರಮಗಳೂ ಇದ್ದವು. ಪ್ರಾರ್ಥನೆ, ಭಾವಗೀತಾ ಗಾಯನ, ಭರತನಾಟ್ಯ ಪ್ರದರ್ಶನ, ಶಾಕುಂತಲಾ ದೃಶ್ಯರೂಪಕ ಇದ್ದವು. ಶ್ರೀ ಶಾಂತಾ ಶ್ರೀನಿವಾಸಮೂರ್ತಿಯವರಿಂದ ಭಾವಗೀತೆ ಮತ್ತು ವಚನ ಗಾಯನಗಳಿದ್ದವು. "ಮೀನಾ ಮದ್ವೆ" ಎಂಬ ನಗೆನಾಟಕ ಪ್ರದರ್ಶನವಾಯಿತು. ಅಮೆರಿಕಾದಲ್ಲೇ ಹುಟ್ಟಿಬೆಳೆದ ಅನೇಕ ಕನ್ನಡಿಗರ ಮಕ್ಕಳು ಕನ್ನಡ ಕಲಿತು ನಾಟಕದಲ್ಲಿ ಭಾಗವಹಿಸಿದ್ದು ಸಂತೋಷವನ್ನುಂಟುಮಾಡಿತು. ಆದರೆ ಈ ನಾಟಕದಲ್ಲಿ ಇಂಟರ್‌ವ್ಯೂಗೆ ಕನ್ಯೆಯನ್ನು ಕರೆದೊಯ್ಯುವುದು, ಅವಳನ್ನು ಅಪಮಾನಿಸುವುದು, ವಿಧವೆ ಮುದುಕಿಯು ಅಡ್ಡಬಂದಾಗ ಅಪಶಕುನವೆಂದು ಮೂಗೆಳೆಯುವುದು, ವರನ ತಾಯಿತಂದೆಯರ ವರ್ತನೆ — ಇಷ್ಟು ದೂರದೇಶದಲ್ಲಿ ಭಾರತೀಯ ಸಂಪ್ರದಾಯದ ಕುರೂಪದ ಭಾಗವನ್ನು ಎತ್ತಿ ತೋರಿಸಿದಂತಾಯಿತಲ್ಲ ಎಂದು ನನಗೆ ಕಸಿವಿಸಿಯಾಯಿತು. ಆದರೆ ಭಾರತೀಯರ ಹೊರತಾಗಿ ಅಮೆರಿಕನ್ನರಾರೂ ಬಂದಿರದಿದ್ದುದು ಸಮಾಧಾನವನ್ನುಂಟುಮಾಡಿತು.

ಕನ್ನಡಕೂಟದ ಅಧ್ಯಕ್ಷರಾದ ಡಾ. ಹೆಚ್. ಕೆ. ಚಂದ್ರಶೇಖರ್ ಅತ್ಯಂತ ಸರಳ ಸ್ವಭಾವದ, ನಗುಮೊಗದ ಕನ್ನಡಭಿಮಾನದ ವ್ಯಕ್ತಿ. ಹೃತ್ಪೂರ್ವಕವಾಗಿ ಬರಮಾಡಿಕೊಂಡು ಕನ್ನಡ ಕೂಟದ ಕಾರ್ಯಕಾರೀ ಸಮಿತಿಯವರನ್ನು ಪರಿಚಯ ಮಾಡಿಕೊಟ್ಟರು. ವೇದಿಕೆಯು ಅತ್ಯಂತ ಸುಂದರವಾಗಿ ನಿರ್ಮಾಣವಾಗಿತ್ತು. ಸಭಾಂಗಣವು ವಿಶಾಲವಾಗಿ ಸುಂದರವಾದ ಆಸನಗಳಿಂದ ಅಲಂಕೃತವಾಗಿತ್ತು.

ಅಧ್ಯಕ್ಷರಾದ ಚಂದ್ರಶೇಖರ್ ಸ್ವಾಗತ ಭಾಷಣವನ್ನು ಮಾಡಿದರು. ಉಪಾಧ್ಯಕ್ಷರಾದ ಎಂ. ಎಲ್. ನಾಗರಾಜ ಅವರು ನಮ್ಮ ಪರಿಚಯವನ್ನು ಸವಿಸ್ತಾರವಾಗಿ ಮಾಡಿಕೊಟ್ಟರು. ಕನ್ನಡ ಕೂಟದ ಕಾರ್ಯಕ್ರಮವೇ ಆಗಿದ್ದು, ಕನ್ನಡಿಗರ ಗುಂಪೇ ಅಲ್ಲಿ ಕೂಡಿದ್ದರೂ ನಾನು ಇಂಗ್ಲೀಷಿನಲ್ಲೇ ಭಾಷಣಮಾಡಿದೆ. ಇಂಗ್ಲೀಷ್ ಭಾಷಣದ ನಂತರ ಕನ್ನಡದಲ್ಲಿ ಮಾತನಾಡೋಣ ಎಂದುಕೊಂಡೆ; ಸಮಯ ಸಾಕಾಗಲಿಲ್ಲ.

ಇಂಗ್ಲೀಷಿನಲ್ಲೇ ನಾನು ಮಾತನಾಡಲು ಇಷ್ಟಪಟ್ಟದ್ದೇಕೆಂದರೆ, ಅಲ್ಲಿಯ ಕುಟುಂಬದ ಹೆಚ್ಚಿನ ಮಕ್ಕಳಿಗೆ ಕನ್ನಡ ಬರದು. ಕೇವಲ ಕೆಲವು ತಾಯಿತಂದೆಗಳು ಮಾತ್ರ ಒತ್ತಾಯಿಸಿ ಕನ್ನಡವನ್ನು ಮನೆಯಲ್ಲಿ ಮಾತನಾಡಲು ಕಲಿಸುತ್ತಾರೆ. ಒಂದು ಕನ್ನಡ ತರಗತಿ ಸಹ ತೆಗೆದಿದ್ದಾರೆ. ಈ ಮಕ್ಕಳಿಗೆ ಭಾಷೆ, ಸಂಸ್ಕೃತಿ, ಧರ್ಮಗಳ ಬಗ್ಗೆ ಅಭಿಮಾನ ಮೂಡಿಸಲೋಸುಗ ಆಂಗ್ಲಭಾಷೆಯಲ್ಲೇ ಮಾತನಾಡಿದೆ. ಕನ್ನಡ ಭಾಷೆಯ ಇತಿಹಾಸ, ಸೌಂದರ್ಯ, ಸತ್ವ, ತತ್ತ್ವಜ್ಞಾನ, ಅನೇಕ ವೀರರು, ಕವಿಗಳು, ಮಹಾತ್ಮರು ಆಗಿಹೋದ ಪರಂಪರೆಯ ಕುರಿತು ಮಾತನಾಡಿದೆ ಭಾರತೀಯ ಭಾಷಾ ಪರಂಪರೆಯು ಎರಡು ಪ್ರಮುಖ ಭಾಷಾವಾಹಿನಿಗಳಿಂದ ಕೂಡಿದ್ದು, ಒಂದು ಸಂಸ್ಕೃತ ಜನ್ಯ ಭಾಷಾಗುಚ್ಛ, ಇನ್ನೊಂದು ದ್ರಾವಿಡ ಸಂಸ್ಕೃತಿ ಜನ್ಯ ಭಾಷೆಗಳ ಸಮೂಹ. ಕನ್ನಡವು ಪ್ರಮುಖ ದ್ರಾವಿಡ ಭಾಷೆಗಳಲ್ಲೊಂದು ಎಂದು ಹೇಳಿದೆ (ತಮಾಷೆ ಎಂದರೆ ಸ್ನಾತಕೋತ್ತರ ಪದವೀಧರರಾದ ಓರ್ವ ಸ್ತ್ರೀಯು ನಂತರ ಬಂದು, ಇದು ಗೊತ್ತಿರಲಿಲ್ಲ ಕನ್ನಡ, ಸಂಸ್ಕೃತ ಭಾಷೆಯಿಂದ ಹುಟ್ಟಿದೆ ಎಂದುಕೊಂಡಿದ್ದೆ ಎಂದರು. ನನಗೆ ನಿಜಕ್ಕೂ ಆಘಾತವಾಯಿತು) ಭಾರತವು ಒಂದು ಬೃಹತ್ ಧರ್ಮ-ಸಂಸ್ಕೃತಿಗಳ ನಾಡಾಗಿದ್ದು, ಅಲ್ಲಿಂದ ಬರುವ ಎಲ್ಲರ ಹಿಂದೆ ಒಂದು ವಿಶೇಷ ಪರಂಪರೆ ಇದೆ. ಎಲ್ಲಿ ಹೋದರೂ ಅದನ್ನು ಮರೆಯಬಾರದು. ಹಣವು ಒಂದು ಸಾಧನೆಯೇ ವಿನಾ, ಅದೇ ಸಿದ್ಧಿ ಅಲ್ಲ. ಮನುಷ್ಯನು ಹಣವನ್ನು ತನಗಾಗಿ ನಿರ್ಮಾಣಮಾಡಿದ. ಆದರೆ ಇಂದು ಅದಕ್ಕಾಗಿ ಬಾಳಲಾರಂಭಿಸಿದ್ದಾನೆ. ಅದಕ್ಕೆ ಎಷ್ಟು ಬೇಕೋ ಅಷ್ಟೇ ಮಹತ್ವವನ್ನು ನೀಡಬೇಕು. ಸಂಸ್ಕೃತಿ, ಭಾಷೆ, ಧರ್ಮಗಳು ಸಹ ಅವಶ್ಯಕ ಅನ್ನಾಂಗಗಳೇ. ನಾಗರಿಕತೆಯ ತುತ್ತತುದಿಯನ್ನು ಮನುಷ್ಯ ಏರಿದರೂ ಸಂಸ್ಕೃತಿ, ಧರ್ಮಗಳ ಸಂಪರ್ಕಬಿಟ್ಟರೆ ಅವನ ಆಂತರಿಕ ಬೆಳವಣಿಗೆ ಕುಂಠಿತವಾಗುವುದು. ಮಕ್ಕಳಿಗೆ ತಮ್ಮ ಭಾಷೆ-ಧರ್ಮಗಳ ಸೂಕ್ತಪರಿಚಯ ಮಾಡಿಕೊಡುವುದು ಒಳ್ಳೆಯದು ಎಂದು ಹೇಳಿದೆ. ಜೀವನದ ಮೂರು ಮೂಲಭೂತ ಪ್ರಶ್ನೆಗಳಿವು, 'ನಾನು ಯಾರು ? ಎಲ್ಲಿಂದ ಬಂದೆ? ಎಲ್ಲಿಗೆ ಹೋಗಬೇಕು' ಈ ಮೂರರ ಮೇಲೆಯೇ ಭಾರತೀಯರ ಆತ್ಮವಿದ್ಯೆ ನಿಂತಿದೆ. ತನ್ನ ಆಂತರಿಕ ಸತ್ವ-ಕೊರತೆಗಳನ್ನು ಅರಿಯುವುದು, ನಾಡು-ನುಡಿಗಳ ಮಹತ್ವವನ್ನರಿಯುವುದು, ಕೇವಲ ಶಾರೀರಿಕ ತೃಪ್ತಿಗಿಂತಲೂ ಮಿಗಿಲಾದ ಬೌದ್ಧಿಕ, ಅಧ್ಯಾತ್ಮಿಕ ಆನಂದ ಪಡೆಯಲು ಯತ್ನಿಸುವುದು ಮಾನವನ ಜೀವನ ವಿಧಾನದಲ್ಲಿ ಅಳವಡಬೇಕು.

ಉದ್ವಿಗ್ನತೆ, ಒತ್ತಡಗಳ ಈ ಬದುಕಿನಲ್ಲಿ ಸಾಹಿತ್ಯಾಧ್ಯಯನ, ಧ್ಯಾನಾಭ್ಯಾಸ ತುಂಬಾ ಆವಶ್ಯಕ. ಅವು ಮನಸ್ಸಿಗೆ ಅಮೃತ ಸೇಚನೆ ಮಾಡುವವು. "ಬುದ್ಧಿವಂತರಾದವರು ಕಾವ್ಯ, ಶಾಸ್ತ್ರ, ಪ್ರೌಢ ಹಾಸ್ಯಗಳಲ್ಲಿ ಸಮಯವನ್ನು ಕಳೆಯುತ್ತಾರೆ.

ಮೂರ್ಖರಾದವರು ವ್ಯಸನ, ನಿದ್ರೆ ಇಲ್ಲವೇ ಕಲಹಗಳಲ್ಲಿ ಕಾಲಹರಣ ಮಾಡುತ್ತಾರೆ" ಎಂಬ ಸುಭಾಷಿತೋಕ್ತಿಯನ್ನು ನುಡಿದು ಸಾಹಿತ್ಯಾಧ್ಯಯನದ ಮಹತ್ವವನ್ನು ಹೇಳಿದೆ. 'ಮಾನವನ ದೇಹ, ಸೃಷ್ಟಿಗಳು ದೇವನ ಅತ್ಯದ್ಭುತ ಕೊಡುಗೆ. ಅದಕ್ಕೆಯೇ ಕೂಡಲ ಸಂಗಮ ದೇವನ ಒಲಿಸಲು ಬಂದ ಪ್ರಸಾದಕಾಯ ಎಂದು ದೇಹವನ್ನು ಕುರಿತು, ಮರ್ತ್ಯಲೋಕವೆಂಬುದಿದು ಕರ್ತಾರನ ಕಮ್ಮಟ ಎಂದು ಲೋಕವನ್ನು ಕುರಿತು ವಿಶ್ವಗುರು ಬಸವಣ್ಣನವರು ಹೇಳುತ್ತಾರೆ-ಜೀವನವನ್ನು, ಜೀವಿತವನ್ನು, ನಿಸರ್ಗವನ್ನು ದೇವನನ್ನೊಲಿಸಲು ಉತ್ತಮ ಸಾಧನೆಗಳನ್ನಾಗಿ ಮಾಡಿಕೊಳ್ಳಬೇಕು' ಎಂದು ಉದಾಹರಣೆ, ದೃಷ್ಟಾಂತ ಕಥೆಗಳ ಮೂಲಕ ವಿವರಿಸಿದೆ.

ನಲವತ್ತೈದು ನಿಮಿಷಗಳ ಕಾಲ ಮಾಡಿದ ಭಾಷಣವನ್ನು ಸಭಿಕರು ಉತ್ಸುಕತೆ, ಆನಂದಗಳಿಂದ ಸ್ವಾಗತಿಸಿ ಮೆಚ್ಚಿಕೊಂಡರು. ತಾವು ಇಂಥ ವೈಚಾರಿಕ ಪ್ರಭಾವಯುಕ್ತ ಭಾಷಣವನ್ನು ಕೇಳಿಯೇ ಇರಲಿಲ್ಲ ಎಂದು ಉದ್ಗರಿಸಿದರು.

ಅಂತೂ ಅನೇಕ ಕನ್ನಡ ಕುಟುಂಬಗಳು ತಮ್ಮ ಮಾತೃಭಾಷೆ, ದೇಶ ಸಂಸ್ಕೃತಿಗಳ ಅಭಿಮಾನ ಉಳಿಸಿಕೊಂಡಿರುವುದು ನಿಜಕ್ಕೂ ಅಭಿಮಾನ ಪಡುವಂತಹುದು. ಈ ಹೊತ್ತು ಬೆಂಗಳೂರಿನಲ್ಲೇ ಬೆಳೆಯುವ ಅನೇಕ ಶ್ರೀಮಂತರ, ಪ್ರಥಮದರ್ಜೆ ಅಧಿಕಾರಿಗಳ ಮಕ್ಕಳು ನಮಗೆ ಕನ್ನಡವನ್ನು ಮಾತನಾಡಲಿಕ್ಕೇ ಬರುವುದಿಲ್ಲ, ಓದುವುದಂತೂ ಸಾಧ್ಯವೇ ಇಲ್ಲ ಎನ್ನುವಾಗ ಹನ್ನೆರಡು ಸಾವಿರ ಮೈಲಿಗಳಾಚೆ ಇರುವ ಕನ್ನಡಿಗರು, ಭಾರತೀಯರು ತಮ್ಮ ಭಾಷೆ-ಸಂಸ್ಕೃತಿಗಳನ್ನುಳಿಸಿಕೊಳ್ಳಲು ಹೆಣಗುವುದು ಸೋಜಿಗವಲ್ಲವೆ ?

ಕೆಲವರನ್ನು ಬಿಟ್ಟರೆ ಬಾಕಿ ಬಹಳಷ್ಟು ಜನಕ್ಕೆ ವಿಪರೀತ ಅಭಿಮಾನವಿದೆ. ಆ ನಾಡಿನಲ್ಲೇ ಇದ್ದಾಗ ತಾವು ಹೇಗಿದ್ದರೂ ಹುಟ್ಟು ಹಿಂದುಗಳು, ಹುಟ್ಟು ಲಿಂಗಾಯತರು, ಹುಟ್ಟು ಕನ್ನಡಿಗರು-ಎಂದು ಆಯಾ ಧರ್ಮಸಂಸ್ಕೃತಿ ಭಾಷೆಗಳನ್ನು ತಿಳಿದುಕೊಳ್ಳಲು ಯತ್ನಿಸದವರೂ ಈಗ ಇಲ್ಲಿಗೆ ಬಂದಾನಂತರ ಪಾಶ್ಚಿಮಾತ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಾಗದೆ, ತಮ್ಮ ಧರ್ಮಸಂಸ್ಕೃತಿ ಏನಿವೆ ಎಂದು ತಿಳಿಯಲು ಆಸಕ್ತಿ ತಾಳಿದ್ದಾರೆ. ಕನ್ನಡ ತರಗತಿಗಳನ್ನು ಮಿತಪರಿಸರದಲ್ಲೇ ನಡೆಸುತ್ತಿದ್ದಾರೆ. ಕ್ರೈಸ್ತ ಕಾನ್ವೆಂಟನಲ್ಲಿ ದೂರದ ಪ್ರದೇಶವೊಂದರಲ್ಲಿ ಬಿಟ್ಟಿದ್ದ ಓರ್ವ ಹುಡುಗನನ್ನು ತಂದು ನಮ್ಮ ಶಾಲೆಯಲ್ಲಿ ಸೇರಿಸಿದ ಓರ್ವ ತಂದೆ ಉದ್ಗರಿಸುತ್ತಿದ್ದರು, 'ಇಂಗ್ಲಿಷ್ ಮಾಧ್ಯಮದಲ್ಲಿ ಓದಿದರೂ, ಮಾತನಾಡುವ ಭಾಷೆ ಇಲ್ಲಿ ಕನ್ನಡವಾದ್ದರಿಂದ ಇನ್ನು ನನ್ನ ಮಗ ಕನ್ನಡವನ್ನು ಕಲಿತುಬಿಡುತ್ತಾನೆ' ಎಂದು. ಕನ್ನಡ ಕಲಿಯುವುದು

ಒಂದು ಅಪರಾಧ ಎಂಬ ಭಾವ ಆ ತಂದೆಯಲ್ಲಿದ್ದಿತು. ಆದರೆ ಮಾತೃದೇಶ, ಮಾತೃಧರ್ಮ, ಭಾಷಾಭಿಮಾನ ಎಂದರೇನು ಎಂಬುದನ್ನು ಇಲ್ಲಿಗೆ ಬಂದ ಅನೇಕರು ಮನಗಾಣುತ್ತಿದ್ದಾರೆ. ಈ ದೇಶಗಳ ಜನ ನಾಸ್ತಿಕರು ಎಂದು ಬಹುಪಾಲು ಭಾರತೀಯರು ನಂಬಿದ್ದಾರೆ. ಪ್ರೆಸಿಡೆಂಟ್ ರೇಗನ್‌ರಿಂದ ಹಿಡಿದು, ಯಾರೇ ಇರಲಿ ಏನೇ ಮಾತನಾಡಲಿ 'In the name of God' ಎಂದು ದೇವರ ಹೆಸರನ್ನು ತೆಗೆದುಕೊಳ್ಳದಿರರು. ರಾಷ್ಟ್ರೀಯ ಸುಪ್ರಸಿದ್ಧ ಹೇಳಿಕೆ ಸ್ಮಾರಕಗಳಲ್ಲಿ ದೇವರ ಸ್ಮರಣೆ ಮಾಡದಿರರು. ಇದು ನಮ್ಮ ಜನರ ಕಣ್ಣನ್ನು ತೆರೆಸುತ್ತದೆ.

ನ್ಯೂಯಾರ್ಕ್ ಸಂದರ್ಶನದೊಡನೆ ನಾನು ಆ ಬಾರಿ ನೋಡಿದ್ದು U. N. O. ಸಂಸ್ಥೆಯನ್ನು. ಯುನೈಟೆಡ್ ನೇಶನ್ಸ್ ಆರ್ಗನೈಸೇಷನ್ ಬಗ್ಗೆ ಇತಿಹಾಸ ಪುಸ್ತಕಗಳಲ್ಲಿ ಓದಿದ್ದೆವು. ವಿಶ್ವದ ಹಿತಕ್ಕಾಗಿ ಈ ಸಂಸ್ಥೆ ಹೇಗೆ ಶ್ರಮಿಸುತ್ತದೆ ಎಂಬುದನ್ನು ಕೇಳಿದ್ದೆವು. ಯಾವುದೇ ದೇಶ, ಭಾಷೆ, ಜನಾಂಗ, ಧರ್ಮಗಳ ಮಿತವಲಯವನ್ನು ಮೀರಿ ಜಗತ್ತಿನ ಜನರ ಹಿತವನ್ನು ಸಂರಕ್ಷಿಸಲೋಸುಗ 1945ರಲ್ಲಿ ಈ ಸಂಸ್ಥೆ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ರೂಪುಗೊಂಡಿತು. ಪ್ರಾರಂಭದ ದಿನದಂದು 51 ರಾಷ್ಟ್ರಗಳು ಸೇರಿ ಸಹಿ ಹಾಕಿದವು. ಇಂದು ನೂರು ರಾಷ್ಟ್ರಗಳು ಸೇರಿವೆ. ಈ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಉದ್ದೇಶ ಮುಂದಿನ ದಿನಗಳಲ್ಲಿ ಯುದ್ಧಗಳ ಭೀತಿಯಿಂದ ಜನತೆಯನ್ನು ರಕ್ಷಿಸುವುದು; ಶಾಂತಿ, ನ್ಯಾಯ ಮತ್ತು ಪ್ರಗತಿಗಾಗಿ ಹೋರಾಡುವುದು. ಸಂಸ್ಥೆಯು ಎಲ್ಲರ ಸಮಾನತೆಯನ್ನು ಒಪ್ಪುತ್ತದೆ; ವಿವಾದಗಳನ್ನು ಯುದ್ಧ ಮುಖಾಂತರವಲ್ಲದೆ ಶಾಂತಿಯಿಂದಲೇ ಬಗೆಹರಿಸಿಕೊಳ್ಳಲು ಸಹಾಯಮಾಡುತ್ತದೆ. ಈ ಸದಸ್ಯ ರಾಷ್ಟ್ರಗಳು ಶಾಂತಿಪಾಲನೆಗೆ ಮಹತ್ವ ನೀಡಬೇಕು, ಆಕ್ರಮಣಕಾರೀ ಧೋರಣೆ ಬೆಳೆಸಿಕೊಳ್ಳಬಾರದು, ಬೇರಿತರ ದೇಶಗಳ ಆಂತರಿಕ ವ್ಯವಹಾರದಲ್ಲಿ ಕೈಹಾಕಬಾರದು; ಪರಸ್ಪರ ಸೌಹಾರ್ದತೆಯಿಂದ ಬಾಳಲು ಮಿತ್ರ ರಾಷ್ಟ್ರಗಳನ್ನು ಪ್ರೋತ್ಸಾಹಿಸಬೇಕು. ಈ ಎಲ್ಲಕ್ಕಿಂತ ಮಿಗಿಲಾದುದೆಂದರೆ ಮಾನವ ಜಗತ್ತನ್ನು ಎದುರಿಸುವ ಬಡತನ, ನಿರಕ್ಷರತೆ, ಅನಾರೋಗ್ಯ, ಕ್ರೌರ್ಯ-ಶೋಷಣೆಗಳ ವಿರುದ್ಧ ಸಾಮೂಹಿಕ ಹೋರಾಟ ನಡೆಸುವದು. ಈ ಅನಿಷ್ಟಗಳು ಕೇವಲ ಒಂದು ದೇಶ, ಧರ್ಮ, ಸಮಾಜಗಳ ಪೀಡೆಗಳಲ್ಲ ಮಾನವ ಜಗತ್ತಿನ ಪೀಡೆಗಳು ಎಂದರಿತು ಸುಸಂಘಟಿತವಾಗಿ ಎದುರಿಸುವುದು.

ಯು. ಎನ್. ಓ. ಸಂಸ್ಥೆ ಯಾವುದೇ ರಾಜಕೀಯ ಶಕ್ತಿಯುಳ್ಳ ಸಂಸ್ಥೆಯಲ್ಲ. ಕೇವಲ ನೈತಿಕ ಶಕ್ತಿಯುಳ್ಳ ಸಂಸ್ಥೆ. ಮನೆಯಲ್ಲೊಂದು ತಿಳುವಳಿಕೆಕೊಡುವ (ಕಿಟಕಿಟ ಮಾಡುವುದಲ್ಲ) ಮಕ್ಕಳು ಕಾದಾಡುವಾಗ ಬುದ್ಧಿಹೇಳುವ ಅಜ್ಜಿ ಇದ್ದಂತೆ.

ಹೋರಾಟದ ಉದ್ವಿಗ್ನತೆಯಲ್ಲಿದ್ದಾಗ ಈ ಅಜ್ಜಿಯ ಮಾತನ್ನು ಯಾರೂ ಕೇಳದಿದ್ದರೂ ನಂತರ ರಾಜಿಯಾಗುವ ಪರಿಸ್ಥಿತಿ ಬಂದಾಗ ಇದರ ಮೊರೆಹೊಕ್ಕು, ಸಂಧಾನಕ್ಕೆ ಕಳಿಸುವ ಅನೇಕ ಪ್ರಸಂಗಗಳನ್ನು ನಾವೇ ನೋಡಿದ್ದೇವೆ ವೃತ್ತಪತ್ರಿಕೆಗಳಲ್ಲಿ. ಅಂತೂ ಬಡವ ರಾಷ್ಟ್ರಗಳೇ ಇರಲಿ, ಶ್ರೀಮಂತ ರಾಷ್ಟ್ರಗಳೇ ಇರಲಿ, ದೊಡ್ಡವೇ ಇರಲಿ, ಸಣ್ಣವೇ ಇರವೂ ಭಾಗಲಿ, ಎಲ್ಲವಹಿಸಿ ತಂತಮ್ಮ ಧ್ವನಿಯನ್ನು ಸಭೆಯ ಮುಂದಿಡಲು ಒಂದು ಸೂಕ್ತ ವೇದಿಕೆ ಈ ಸಂಸ್ಥೆ. ಅನುಭವ ಮಂಟಪದಲ್ಲಿ ಎಲ್ಲರೂ ಸಮಾನ ಭಾಗಿಗಳಾಗಿ ತಮ್ಮ ಸುಖದುಃಖಗಳನ್ನು ಹಂಚಿಕೊಂಡಂತೆ, ಜ್ಞಾನ-ಮಾರ್ಗದರ್ಶನ ಪಡೆದಂತೆ ಇಲ್ಲಿ ರಾಷ್ಟ್ರಗಳು ಮಾರ್ಗದರ್ಶನ ಪಡೆಯುತ್ತವೆ. ಈಗಿನ ಸೆಕ್ರೆಟರಿ ಕುರ್ಟ್ ವಾಲ್ಡ್‌ಹೀಮ್ ಹೇಳುವಂತೆ, 'ಈ ಸಂಸ್ಥೆಯು ಶಾಂತಿಯ ಒಂದು ಅಸ್ತ್ರ; ಬಳಸಿಕೊಳ್ಳುವುದು ಸದಸ್ಯರಾಷ್ಟ್ರಗಳ ಕೈಲಿದೆ.'

ಯೂ. ಎನ್. ಓ.ದ ಆರು ಮುಖ್ಯ ಅಂಗಗಳೆಂದರೆ: 1. ಜನರಲ್ ಅಸೆಂಬ್ಲಿ 2. ಸೆಕ್ಯುರಿಟಿ ಕೌನ್ಸಿಲ್ 3. ಎಕನಾಮಿಕ್ ಮತ್ತು ಸೋಷಿಯಲ್ ಕೌನ್ಸಿಲ್ 4. ಟ್ರಸ್ಟಿಷಿಪ್ ಕೌನ್ಸಿಲ್ 5. ಸೆಕ್ರಟೇರಿಯಟ್ 6. ಅಂತರರಾಷ್ಟ್ರೀಯ ನ್ಯಾಯಾಲಯ. ನ್ಯಾಯಾಲಯ ಮಾತ್ರ ಹೇಗ್ ಮತ್ತು ನೆದರ್‌ಲ್ಯಾಂಡ್‌ಗಳಲ್ಲಿದೆ. ಬಾಕಿ ಎಲ್ಲ ಉಪಸಂಸ್ಥೆಗಳು ನ್ಯೂಯಾರ್ಕಿನಲ್ಲೇ ಇವೆ.

ಸಂಸ್ಥೆಯ ಬೃಹತ್ ಕಟ್ಟಡದ ಒಳಗೇ ಬೇರೆ ಬೇರೆ ಉಪಾಂಗಗಳಿಗೆ ಸಂಬಂಧಿಸಿದ ಭವನಗಳಿವೆ. ಜನರಲ್ ಅಸೆಂಬ್ಲಿಯ ಸಭಾಂಗಣ ಅತ್ಯಂತ ಬೃಹತ್ತಾದ ಆಲಯವಾಗಿದ್ದು 2000 ಆಸನಗಳನ್ನು ಹೊಂದಿದೆ. ಎಪ್ಪತ್ತೈದು ಅಡಿ ಎತ್ತರದ ಕೇಂದ್ರ ಗುಮ್ಮಟದ ಕೆಳಗೆ ಸದಸ್ಯರಾಷ್ಟ್ರಗಳ ಪ್ರತಿನಿಧಿಗಳಿಗೆ ಆಸನಗಳಿವೆ. ಮಧ್ಯದಲ್ಲಿ ವೇದಿಕೆಯಿದ್ದು ಅದರ ಮೇಲೆ ಮೂರು ಉನ್ನತಾಸನಗಳಿವೆ. ಅಸೆಂಬ್ಲಿಯ ಪ್ರೆಸಿಡೆಂಟು, ಸೆಕ್ರೆಟರಿ ಜನರಲ್, ಅಂಡರ್ ಸೆಕ್ರೆಟರಿ ಜನರಲ್‌ರವರಿಗೆ ಈ ಮೂರು ಆಸನಗಳು. ಸಭಾಂಗಣದಲ್ಲಿ ಸಲಹೆಗಾರರು, ಆಮಂತ್ರಿತ ಅಧಿಕಾರಿಗಳು, ಪತ್ರಿಕಾ ವರದಿಗಾರರು, ಸಂದರ್ಶಕರಿಗೂ ಅನೇಕ ಆಸನಗಳಿವೆ. ಸಭಾಂಗಣ ತುಂಬಾ ಸುಂದರವಾಗಿದೆ. ಸಾಂಕೇತಿಕವಾದ ಸುಂದರ ಚಿತ್ರಗಳು, ಪುತ್ಥಳಿಗಳು ಸಭೆಯನ್ನು ಅಲಂಕರಿಸಿವೆ. ವಿದ್ಯುತ್ ವ್ಯವಸ್ಥೆಯಂತೂ ಅದ್ಭುತ. ಅರೇಬಿಕ್, ಚೈನೀಸ್, ಇಂಗ್ಲಿಷ್, ಫ್ರೆಂಚ್, ರಶಿಯನ್ ಮತ್ತು ಸ್ಪಾನಿಷ್ ಭಾಷೆಗಳು ಇಲ್ಲಿ ಬಳಸಲ್ಪಡುವ ಭಾಷೆಗಳು. ಇಷ್ಟು ಭಾಷೆಗಳಲ್ಲಿ ಮಾತನಾಡಲು ಅವಕಾಶವುಂಟು. ಪ್ರತಿಯೊಂದು ಆಸನದ ಪಕ್ಕ ಕಿವಿಯಫೋನ್ ಇರುತ್ತದೆ. ಅದನ್ನು ಕಿವಿಗಿರಿಸಿಕೊಂಡು ತಮಗೆ ಬೇಕಾದ ಭಾಷೆಯ ಬಟನ್ ಒತ್ತಿದರೆ, ಆ ಭಾಷೆಯಲ್ಲಿ ತರ್ಜುಮೆಯಾಗಿ ಮಾತುಗಳು

ಕೇಳಿಬರುತ್ತವೆ· ಈ ಈಯರ್ ಫೋನ್‌ಗಳು ತರ್ಜುಮೆಯ ಅಂಗಳಕ್ಕೆ ಸೇರಿಸಲ್ಪಟ್ಟಿರುತ್ತವೆ. ಅಲ್ಲಿ ಕುಳಿತಿರುವ ತರ್ಜುಮೆಕಾರರು ತೀವ್ರವಾಗಿ ವಿವಿಧ ಭಾಷೆಗಳಿಗೆ ತರ್ಜುಮೆ ಮಾಡಿ ಹೇಳುತ್ತಾರೆ. ಅಂತೂ ಈ ವಿಶ್ವರಾಷ್ಟ್ರಸಂಸ್ಥೆ ಒಂದು ಮಾನವೀಯ, ನೈತಿಕ ವಿವೇಕ (Conscience) ಶಕ್ತಿಯಂತೆ ಕಾರ್ಯಮಾಡುತ್ತಿದೆ. ಶ್ರೀಸಾಮಾನ್ಯದ ಒಂದು ಧ್ವನಿಯನ್ನು ಎತ್ತಿಹಿಡಿಯುತ್ತದೆ. ಅಮೆರಿಕಾದೇಶ ಒಂದು ರೀತಿಯಿಂದ ಅತ್ಯಂತ ಉದಾರವಾದ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ರಾಷ್ಟ್ರ. ಸ್ವತಃ ತಾವೇ ಇನ್ನೊಂದು ದೇಶದಿಂದ ವಲಸೆ ಬಂದ ಜನರಾದ್ದರಿಂದ ಬೇರೆ ವಲಸೆಗಾರರನ್ನೂ ಚೆನ್ನಾಗಿ ಸ್ವಾಗತಿಸುತ್ತಾರೆ. ಲೋಕದ ಕಷ್ಟಸುಖ ಅರಿಯಲು ಯತ್ನಿಸುತ್ತಾರೆ. ವಿಶ್ವರಾಷ್ಟ್ರಸಂಸ್ಥೆ ಇರುವ ಜಾಗ ಅಂತರರಾಷ್ಟ್ರೀಯ ಸ್ವಾಮ್ಯಕ್ಕೆ ಕೊಡಲ್ಪಟ್ಟಿದ್ದು, ಇದು ಈ ದೇಶದ ದಾನ ಹದಿನೆಂಟು ಎಕರೆಯಷ್ಟಿದೆ, ಈ ಸಂಸ್ಥೆಗೆ ಸ್ವತಂತ್ರವಾದ ಸೈನ್ಯದಳವಿದ್ದು 20,000 ಸೈನಿಕರಿದ್ದಾರೆ. ಅನ್ಯರ ಸಹಾಯಕ್ಕೆ ಸಂಕಷ್ಟಗಳಲ್ಲಿ ಸಾಗುವುದು ಇದರ ಗುರಿ. ಆರೋಗ್ಯ ಸಂಸ್ಥೆಯು ವಿಶ್ವದ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದರೆ, ಆಹಾರ ಮತ್ತು ವ್ಯವಸಾಯ ಅಂಗವು ಅನ್ನಾಭಾವ ನೀಗುವುದರ ಕಡೆಗೆ ದೃಷ್ಟಿ ಹರಿಸಿದೆ. ಕೆಲವೊಂದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಿಶ್ವಸಂಸ್ಥೆ ನೇರವಾಗಿ ಕಾರ್ಯೋನ್ಮುಖವಾಗಿದೆ. ಅಂಥ ಮಾನವೀಯ ಆದರ್ಶದೊಡನೆ ಕಳುಹಲ್ಪಟ್ಟ ಅನೇಕ ದವಸಧಾನ್ಯ, ಬಟ್ಟೆ-ಬರೆ, ಔಷಧಿ-ಸಲಕರಣೆ ಸಾರ್ಥಕವಾಗದೆ ಮೋಸವಾಗುತ್ತಿದೆ ಭಾರತದಲ್ಲಿ ಎಂಬುದೊಂದು ಕೊರಗು. ನಮ್ಮಲ್ಲಿನ ಕೆಲವು ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಯಾವುದಾದರೂ ಸಾಲದು ; ಅವರ ಹೃದಯದಲ್ಲಿ ದಯೆ, ಕರುಣೆ, ಮಾನವೀಯತೆಗಳ ಸೆಲೆ ಬತ್ತಿಹೋಗಿದೆ. ಅವರಿಗೆ ಬೇಕಾದುದೊಂದೇ ತಮ್ಮ ಸಂಪತ್ತಿನ ವೃದ್ಧಿ ಹೀಗಾಗಿ ಭಾರತದ ಕುಂಠಿತ ಪ್ರಗತಿಯ ಬಗ್ಗೆ ಅನೇಕರಿಗೆ ಆತಂಕ, ಜಿಗುಪ್ಸೆ.

ವಿಶ್ವಸಂಸ್ಥೆ ನೋಡಿದಾಗ ಮನಸ್ಸಿಗೆ ತುಂಬಾ ಸಂತೋಷವಾಯಿತು. ಇಂದು ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಲದಿಂದ ವಿಶ್ವವು ಸಣ್ಣದಾಗಿದೆ. ಮಾನವ ಸಮಾಜ ಒಂದು ಕುಟುಂಬದಂತಾಗಿದೆ. ಎಲ್ಲರ ಸುಖದುಃಖ ವಿಚಾರಿಸುವ ಒಂದು ಸಂಸ್ಥೆ ಬೇಕು, ಒಂದು ಭಾಗದ ಅಭಿವೃದ್ಧಿ ಹಾನಿ ಇನ್ನೊಂದು ಭಾಗದ ಮೇಲೆ ಪರಿಣಾಮ ಬೀರದಿರದು. ಆದ್ದರಿಂದ ಎಲ್ಲರ, ಎಲ್ಲಾ ಬೆಳವಣಿಗೆಯಾಗಬೇಕು ಎಂಬ ಕನಸುಳ್ಳ ಒಂದು ಸಂಸ್ಥೆ ಬೇಕು. ಆ ಅವಶ್ಯಕತೆಯನ್ನು ವಿಶ್ವಸಂಸ್ಥೆ ಪೂರೈಸುತ್ತಿದೆ.

(ಸಶೇಷ). ★

PARABLE

Mataji

ROBBER AND SEARCH FOR WEALTH

Dear Children,

This time I would like to tell you the parable of the scholar and the robber. A scholar of great repute once travelled many miles to participate in a competition. He beat all the other competitors by lengths and won the prize, a heard of gold coins.

His route back home was a trickly and trecherous one· His path took him through a forest where lurked many dangers But the biggest danger of all was a robber who had been following him in order to releive him of his prize money.

The scholar came to rest at and old travellers' inn, in the forest. The sleeping accommodation was in dormitories and the robber who had the bed next to the scholar patientely waited till all the other inmates went to sleep before started his search for the scholar's gold.

When at last everyone was asleep, the robber thoroughly went through the scholar's belongings but was unlucky. Thinking that the gold had been hidden in some one else's belongings. The robber painstakingly searched everyone·s possessions but in vain the gold was no where to be found.

Finally, as the first streaks of dawn lit the sky, the robber hopped down on his bed in sheer fruotration and tried to sleep

only to be woken immediately by the scholar. When he testily asked the scholar what he wanted the man asked the robber to get up because he wished to pack up leave. The astonished robber asked what his getting up had to do with the scholar's packing.

"You see", replied the scholar,
"I have hidden my gold under your pillow".

Just as the robber went to great lengths to search everyone's possessions and every nook and corner for the wealth, but forgot to look under his own pillow : So too, man in his search for God goes to umpteen number of places, visits shrines in hidden corners of the world, but forget to look into himself.

ಪವನನಪ್ಪಿದ ಪರಿಮಳಕ್ಕೆ ಎಡೆಯುಂಟೆ ಅಯ್ಯಾ ?
ಜ್ಯೋತಿಯಪ್ಪಿದ ತಿಮಿರಕ್ಕೆ ಠಾವುಂಟೆ ಅಯ್ಯಾ ?
ಭ್ರಮರವಪ್ಪಿದ ಕೀಟಕ್ಕೆ ಗುಣವುಂಟೆ ಅಯ್ಯಾ ?
ಬೆಂಕಿ ಮುಟ್ಟಿದ ಕರ್ಪುರಕ್ಕೆ ರೂಪವುಂಟೆ ಅಯ್ಯಾ ?
ಗುರು ಮುಟ್ಟಿದ ಶಿಷ್ಯಂಗೆ ಪೂರ್ವಾಶ್ರಯವುಂಟೆ ಅಯ್ಯಾ ?
ಸಚ್ಚಿದಾನಂದನಪ್ಪಿದ ಭಕ್ತಂಗೆ ಭವವುಂಟೆ ಅಯ್ಯಾ ?
ಮಾನವರೆಲ್ಲಾ ಕೈಬಿಟ್ಟಾಗ, ತವಕರುಣೆ ಬಪ್ಪುದಯ್ಯಾ
ಮೋಡವಿಲ್ಲದೆ ಸುಳಿವ ಮಿಂಚಿನಂತೆ, ಸ್ವಾರ್ಥವಿಲ್ಲದ ಸಹಾಯದಂತೆ ;
ಮರಣದಲ್ಲಿಪ್ಪವಗೆ ಮರುಜೀವಣಿಯಂತೆ ;
ಉಸಿರು ನಿಂತವಗೆ ಆಮ್ಲಜನಕದಂತೆ
ಒರೆದೊರೆದು ಎಮ್ಮ ನೆರೆ ಸಲಹುವೆಯಯ್ಯಾ ಸಚ್ಚಿದಾನಂದಾ !

— ಮಾತಾಜಿ

Sing dear children a sweet song

Sister Umadevi

Sing dear children a sweet song
Sing O children a sweet song
With your sweet voice and merry note
Hail our dear Mataji, a Happy-birthday
Stand still to receive her with a Good-day.

She few across the blue bed of water
Treading the silver blossoms of nature
Americans reverntially escorted her
Gave their scientific mind and heart to her

O my brethren, how happily thou art drinking
The nector of Mataji's divine knowledge !
How lucky thou to hail her Happy birthday
And take a genuine pledge on that day !

Oh ! we have no chances to attend
Nor services on 13th of March to bend
But the eternal summer enters the world's-sill
And rough winds do shake the dear buds of April

Wherever you go, follow the rays of reverence
Feeding Americans on Lord Basavanna's philosophical fragrance
Thou hast become famous and revered as Vivekananda
Most near and dear to Lord Sacchidananda

We watch the clock ever for you
Like winter our hearts squeeze for you
Since thou art away, the birds are mute
Or if they sing, they sing with so dull a cheer

Pack O clouds, away, and welcome a bright day
Sweet air blow soft, give Mataji, a Good day.
Wings from planes, I seek to carry her hither
Merry notes from Basava Bharati's birds, I borrow further

O western wind, send home our diamond
Wake little boys to give your musical shrill abound
Hail our dear dear Mataji, Happy birthday
Pray Lord Paramananda to shower flowers of grace on
that day

ತತ್ವಜ್ಞಾನಿಗಳಂತೆ ಬಹಳಷ್ಟು ಜನ ಮಾತನಾಡುತ್ತಾರೆ. ಆದರೆ ಸ್ವತಃ ಮೂರ್ಖರಂತೆ ವರ್ತಿಸುತ್ತಾರೆ.

--ಚೀನಾ ಗಾದೆ

ನಗೆ-ಹನಿ

ದಿನನಿತ್ಯ ಒಬ್ಬ ವಿದ್ಯಾರ್ಥಿ ನಿತ್ಯ ಭವಿಷ್ಯ ನೋಡುವುದು ಪರಿಪಾಠವಾಗಿತ್ತು. ಒಂದು ದಿನ ಭವಿಷ್ಯದಲ್ಲಿ 'ತಾಯಿಯ ಆಗಮನ' ಎಂದಿತ್ತು. ಇದೀಗ ಕೆಲದಿನಗಳ ಹಿಂದೆ ಊರಿಂದ ಬಂದಿದ್ದ ಆ ವಿದ್ಯಾರ್ಥಿ ತಮ್ಮ ತಾಯಿ ಮನೆ ಬಿಟ್ಟು ಬರುವವರಲ್ಲಿ ಅದೇಗೆ ಅವರು ಬರಲು ಸಾಧ್ಯ ಎಂಬ ಎಣಿಕೆಯಲ್ಲಿ ಇದ್ದ ಅದೇ ದಿನ ಸಾಯಂಕಾಲ ಅವನ ಗಂಟಲು ಊದಿಕೊಂಡು (ಗದುಗಟ್ಟು) ಸ್ವಲ್ಪ ಸ್ವಲ್ಪವಾಗಿ ಜ್ವರ ಬರತೊಡಗಿತು. ಅಲ್ಲಿಯೇ ಇದ್ದ ಒಬ್ಬರು ಅಜ್ಜಿಗೆ ತೋರಲಾಗಿ ಅವರು ಹೇಳಿದರು 'ತಾಯಿ ಬಂದಿದ್ದಾಳಪ್ಪ' ಎಂದು.

"ಬಸವ ಭಾರತಿ" ವಿದ್ಯಾಲಯ

ಪಾಲಕರಿಗೆ ಸೂಚನೆ

"**ಬಸವ ಭಾರತಿ**" ವಿದ್ಯಾಲಯವು ತನ್ನ ಐದು ಆರು ಮತ್ತು ಎಂಟನೆಯ ತರಗತಿಯೊಡನೆ ಪ್ರಾರಂಭವಾಗಿದೆ. ಆಂಗ್ಲ ಮತ್ತು ಕನ್ನಡ ಮಾಧ್ಯಮಗಳೆರಡರಲ್ಲೂ ಶಿಕ್ಷಣವು ಲಭ್ಯವಿದೆ. **ಬಸವ ಭಾರತಿ ವಿದ್ಯಾಲಯು** ವಸತಿ ಸಹಿತ (Residential) ಶಾಲೆ ಇದ್ದು ಇಲ್ಲಿ ಮಕ್ಕಳಿಗೆ ಶುಚಿಯಾದ ವಾತಾವರಣ, ಪ್ರಶಾಂತ ಪರಿಸರ, ರುಚಿಯಾದ ಊಟ, ಉತ್ತಮ ರೀತಿಯ ಶಿಕ್ಷಣವನ್ನು ಕೊಡಲಾಗುತ್ತಿದೆ. ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಮುಂತಾಗಿ ಸರ್ವತೋಮುಖ ಬೆಳವಣಿಗೆಗೆ ಅವಕಾಶ ನೀಡಲಾಗುತ್ತಿದೆ.

೧೯೭೯-೮೦-೮೧ನೇ ಸಾಲಿಗೆ ಐದು ಆರು ಮತ್ತು ಎಂಟನೆಯ ತರಗತಿಯು ಆರಂಭವಾಗಿದ್ದು, ೧೯೮೧-೮೨ರ ಸಾಲಿಗೆ ೭ ಮತ್ತು ೯ನೇ ತರಗತಿಗಳು ಆರಂಭವಾಗಲಿವೆ. ಈ ಎಲ್ಲ ತರಗತಿಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡೂ ಇದ್ದು, ಪ್ರವೇಶಾವಕಾಶ ಲಭ್ಯವಾಗಿರುತ್ತವೆ. ಆದ್ದರಿಂದ ೧೯೮೧ ಮೇ ೨ರಿಂದು ತೆರೆಯಲ್ಪಡುವ ಐದು, ಆರು, ಏಳು ಎಂಟು ಮತ್ತು ಒಂಭತ್ತನೆಯ ತರಗತಿಗಳಿಗೆ (ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ) ಮಕ್ಕಳನ್ನು ಸೇರಿಸಬಯಸುವ ಪಾಲಕರು ಏಪ್ರಿಲ್ ೩೦ ರೊಳಗೆ ೫ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿಕೊಳ್ಳಬೇಕು. ಮೇ ೮ನೆಯ ತಾರೀಖಿನೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಆರಿಸಿ, ಸಂದರ್ಶನಕ್ಕೆ ಕರೆದು ಪರೀಕ್ಷೆಗೆ ಒಳಪಡಿಸಲಾಗುವುದು.

ಪ್ರಾಥಮಿಕ ಒಂದರಿಂದ ನಾಲ್ಕರವರೆಗೆ ಕನ್ನಡ ಮಾಧ್ಯಮದಲ್ಲಿ ಓದಿಸಿದ್ದು ವಿಶೇಷ ಕಾರಣಗಳಿಗಾಗಿ ಆಂಗ್ಲ ಮಾಧ್ಯಮ ಬಯಸಿದರೆ ೫ನೇಯ ತರಗತಿಯಿಂದ ೭ನೇ ತರಗತಿಗಳಿಗೆ ವಿಶೇಷ ತರಬೇತಿ ನೀಡಿ, ೮ನೇಯ ತರಗತಿಗಳಿಗೆ ಆಂಗ್ಲ ಮಾಧ್ಯಮವನ್ನು ನೀಡಲಾಗುವುದು ಅಂಥ ಪಾಲಕರು ಅರ್ಜಿ ಪತ್ರದಲ್ಲಿ ತಮ್ಮ ಇಚ್ಛೆಯನ್ನು ತಿಳಿಸಬೇಕು.

ಶಿಕ್ಷಕರ ಕಾಯಕಕ್ಕೆ ಅರ್ಜಿ

ಬೆಂಗಳೂರು ದಕ್ಷಿಣ ತಾಲ್ಲೋಕು, ಕುಂಬಳಗೋಡು, ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ "ಶ್ರೀ ಬಸವಭಾರತಿ ವಿದ್ಯಾಲಯದಲ್ಲಿ'' (Residential school)

ಶಿಕ್ಷಕರಾಗಿ ಕಾಯಕ ಮಾಡಲು ಅವಕಾಶಗಳಿವೆ. ಆಸಕ್ತಿ ಇದ್ದ ಸ್ತ್ರೀ-ಪುರುಷರು ಅರ್ಜಿ ಸಲ್ಲಿಸಬಹುದು.

ಇಂಗ್ಲಿಷ್, ಕನ್ನಡ, ಹಿಂದಿ, ಗಣಿತ, ವಿಜ್ಞಾನ, ಸಮಾಜಶಾಸ್ತ್ರ ಕಲಿಸಲು ಬಿ.ಎ.,ಬಿ.ಎಡ್, ಮತ್ತು ಬಿ. ಎಸ್‌ಸಿ.,ಬಿ.ಎಡ್, ಪಾಸಾದವರು ೧೯೮೧ ಮಾರ್ಚ್ ೨೫ ರೊಳಗಾಗಿ ಅರ್ಜಿ ಸಲ್ಲಿಸಬೇಕು.

ನಿಯಮಗಳು

1) ಜಾತಿಯ ನಿರ್ಬಂಧವಿಲ್ಲ. ಹರಿಜನ-ಗಿರಿಜನರಿಗೆ ಮೀಸಲು ಸ್ಥಾನವುಂಟು.
2) ಶಿಕ್ಷಕರು ಶಾಲೆಯ ಕ್ಯಾಂಪಸದಲ್ಲಿಯೇ ಇರಬೇಕು. ವಿವಾಹಿತರು ಹೊರಗೆ ಇದ್ದು ಶಾಲೆಗೆ ಬಂದು ಹೋಗಬೇಕು.
3) ಮಕ್ಕಳ ಬೆಳವಣಿಗೆಯಲ್ಲಿ ಆಸಕ್ತಿ-ಕಳಕಳಿ ಇರಬೇಕು.
4) ಬೀಡಿ-ಸಿಗರೇಟ್, ಕುಡಿತ ಮುಂತಾದ ಯಾವುದೇ ದುಶ್ಚಟವಿರಬಾರದು.
5) ಧರ್ಮದಲ್ಲಿ ಆಸಕ್ತಿ ಇರುವ ಸಾಧಕ-ಸಾಧಕಿಯರಿಗೆ ವಿಶೇಷ ಸದವಕಾಶವುಂಟು.

ಅಡ್ಮಿನಿಸ್ಟ್ರೇಟರ್ ಬೇಕಾಗಿದ್ದಾರೆ

ವಿಶ್ವಕಲ್ಯಾಣ ಮಿಷನ್ ಹಾಗೂ ವಿಶ್ವಕಲ್ಯಾಣ ಮಿಷನ್ ವಿದ್ಯಾ ಸಂಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳಲು ನುರಿತ, ಅನುಭವ ಪಡೆದು ನಿವೃತ್ತ ಅಧಿಕಾರಿಯೊಬ್ಬರು ಬೇಕಾಗಿದೆ. ವಿದ್ಯಾರ್ಹತೆ, ಅನುಭವ, ತಾವು ಪಡೆಯಲಿಚ್ಛಿಸುವ ವೇತನ ಹಾಗೂ ಇನ್ನಿತರ ವಿವರಗಳೊಡನೆ ಬರೆಯಿರಿ.

ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆ.
ಬಸವ ಮಂಟಪ, ಕಾರ್ಡ್‌ರೋಡ್, 2, ನೇ ಬ್ಲಾಕ್
ರಾಜಾಜಿನಗರ ಬೆಂಗಳೂರು-560 010

ದೂರವಾಣಿ :
82335

ಕಾಯಕವೇ ಕೈಲಾಸ
ದಾಸೋಹವೇ ದೇವಧಾಮ

ಉರಿಯ ಜೊತೆಗೆ ಹಾಗೆಯೂ ಇರುವಂತೆ, ಒಳ್ಳೆಯ ಕಾರ್ಯದ ಜೊತೆಗೆ ಕೆಟ್ಟದ್ದೂ ಇರುತ್ತದೆ. ನಾವು ಮಾಡುವ ಕಾರ್ಯದಲ್ಲಿ ಕೆಟ್ಟದ್ದು ಕಡಿಮೆಯಾಗಿ, ಒಳ್ಳೆಯದು ಸೀಮಾತೀತವಾಗಬೇಕು.

—ವಿವೇಕಾನಂದ

ವಿಶ್ವಜ್ಯೋತಿ

ಜಿ. ಮಹಾದೇವಸ್ವಾಮಿ, ಎಂ.ಎ.,

ಬಸವಣ್ಣನವರು 'ಭುವನದ ಭಾಗ್ಯ' ಎಂಬುದು ಈಗಾಗಲೇ ಸಿದ್ಧಾಂತವಾಗಿರುವುದು ಮಾತೆಯವರೋ 'ಬಸವಣ್ಣನವರ ಭಾಗ್ಯ' ಅವರ ಕಣ್ಣು, ಕೈ, ಹೃದಯ ಆಗಿರುವರೆಂಬುದು ಅವರ ಭಾಷಣವನ್ನು ಚಿತ್ತವಿಟ್ಟು ಆಲೈಸಿದವರಿಗೂ, ಅವರ ಗ್ರಂಥಗಳನ್ನು ಓದಿದವರಿಗೂ ಹೊಳೆಯದಿರ-ವುದಿಲ್ಲ ಅಣ್ಣನವರ ವಿಚಾರಗಳನ್ನು ಅಪಾರಕಳಕಳಿಯಿಂದ ಇಷ್ಟು ನಿರ್ಭಯವಾಗಿ ಮಂಡಿಸುವವರು ಅಪರೂಪ ಎಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ........ ಹೀಗೆಂದು ಹೇಳಿದವರು ಕನ್ನಡದ ಸುಪ್ರಸಿದ್ಧ ಸಾಹಿತಿ ಹೆಚ್. ದೇವೀರಪ್ಪನವರು. ಅದು ನಿಜಕ್ಕೂ ಅಕ್ಷರಶಃ ಸತ್ಯ ಎನಿಸುತ್ತದೆ. ಭಕ್ತನಿಲ್ಲದೆ ಭಗವಂತನಿಲ್ಲ. ಭಗವಂತನಿಗೆ ಪೂಜ್ಯತೆ ದೊರಕಿರುವುದು ಭಕ್ತನಿಂದಲೇ. ಅದನ್ನು ಪೂಜ್ಯ ಮಾತಾಜಿಯವರ ಜೀವನದಲ್ಲಿ ಹಾಸುಹೊಕ್ಕಾಗಿ ನಾವು ಕಾಣಬಹುದಾಗಿದೆ.

ಪೂಜ್ಯ ಮಾತಾಜಿಯವರ ಬಗ್ಗೆ ತಿಳಿದುದು ನಾನು ಅಲ್ಪ. ಆ ಅಲ್ಪವನ್ನೆ ಬಿತ್ತರಿಸುವ ಸಾಮರ್ಥ್ಯವಾದರೂ ಇದೆಯೇ ? ಸೂರ್ಯನಿಂದ ಹಗಲು ಎಂದು ಪರಿಚಯಿಸುವ ಅಗತ್ಯವಾದರೂ ಏನು ? ಹಾಗಾಗಿದೆ ನನ್ನ ಸ್ಥಿತಿ. ಆದರೂ, ಏನಾದರೂ ಬರೆಯಲೇಬೇಕೆಂಬ ಉತ್ಕಟತೆ ಬಹಳವಾಗಿದೆ. ಪೂಜ್ಯ ಮಾತಾಜಿಯವರು 13-3-81 ರಂದು 36ನೇ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ಈ ಶುಭ ಸಂದರ್ಭದಲ್ಲಿ ಆ ದಿವ್ಯ ಅಡಿಗೆ ಅರ್ಪಿಸುವ ನುಡಿ ನಮನದ ನಮ್ರುಪ್ರಯತ್ನ ಈ ಲೇಖನ.

ಪೂಜ್ಯ ಮಾತಾಜಿಯವರ ಜನನ 13 ಮಾರ್ಚ್ 1946 ರಂದು. ಅವರ ತಂದೆ ಬಸಪ್ಪ, ತಾಯಿ ಗಂಗಮ್ಮ. ಹುಟ್ಟಿದ್ದು ಚಿತ್ರದುರ್ಗ. ತೊಟ್ಟಿಲಲ್ಲಿಟ್ಟು ತೂಗಿದ ಹೆಸರು ರತ್ನಮ್ಮ.

ಹದಿನಾಲ್ಕು ವರ್ಷಕ್ಕೆ ತಂದೆಯ ಅಗಲಿಕೆ. ಧೃತಿಗೆಡದೆ ಶಾಲಾ ಕಾಲೇಜುಗಳ ಓದುವಿಕೆಗೆ ಹಿರಿಯರ ಬೆಂಬಲ. ಆಗಲೇ ಹುಟ್ಟಿತು ಪರಮಾತ್ಮನನ್ನು ಕಾಣುವ ಹಂಬಲ.

ಆದಕ್ಕಾಗಿ ಅವರು ಮನೆ ಬಿಟ್ಟಾಗ ಅವರಿಗೆ ಹತ್ತೊಂಬತ್ತು ವರ್ಷ. ಅವರು ಅರಸಿ ಹೊರಟರು ಯೋಗ ರಹಸ್ಯ.

ಚಿನ್ಮೂಲಾದ್ರಿಯ ಚಿತ್ಕಳೆಯಾಗಿ ಜನಿಸಿ, ವಿಜ್ಞಾನ-ತತ್ವಜ್ಞಾನಗಳ ಸ್ನಾತಕೋತ್ತರ ಪದವೀಧರೆಯಾಗಿ ಬಸವ ಧರ್ಮದ ವೀರ ಚೇತನವಾದ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ ಕರಕಮಲ ಸಂಜಾತರಾಗಿ, ಭಕ್ತಿ, ಜ್ಞಾನ, ವಿರಕ್ತಿಗಳ ಸಂಗಮವಾಗಿ, ಜಗನ್ಮಾತಾ ಅಕ್ಕಮಹಾದೇವಿಯ ಸಾಕ್ಷಾತ್ಕಾರದ ಮೂಲಕ ವಿಶೇಷ ಅನುಗ್ರಹ ಪಡೆದು, ಮಹಿಳಾ ಜಗದ್ಗುರು ಪೀಠವನ್ನಲಂಕರಿಸಿ, ವಿಶ್ವದ ಪ್ರಪ್ರಥಮ ಸ್ತ್ರೀ ಜಗದ್ಗುರುವಾಗಿ ಧಾರ್ಮಿಕ ಇತಿಹಾಸದಲ್ಲಿ ವಿನೂತನ ವಿಚಾರ ಕ್ರಾಂತಿಯನ್ನೆ ಮಾಡಿ ಅಭಿನವ ಅಕ್ಕನಾಗಿ ವಿಜೃಂಭಿಸಿದ್ದಾರೆ.

ಮಾತಾಜಿಯವರದು ಧಾರ್ಮಿಕ ರಂಗದಲ್ಲಿ ವ್ಯಷ್ಟಿವಾದವಲ್ಲ. ಸಮಷ್ಟಿವಾದ. ತಾನೂ ಬಾಳಬೇಕು ಇತರರೂ ಬಾಳಬೇಕು. live and let live ಎಂಬುದು ಅವರ ಮಣಿಹ. ಧರ್ಮದ ಹತ್ತಿರ ಜನ ಬರದಾಗ ಜನರ ಹತ್ತಿರವೇ ಧರ್ಮವನ್ನು ಕೊಂಡೊಯ್ಯಬೇಕೆಂಬುದು ಅವರ ಮಹೋದ್ದೇಶ. ಇದೆಲ್ಲ ಅವರ ಭ್ರಾಂತಿ ಎಂದು ನಾನು ಒಮ್ಮೊಮ್ಮೆ ಅಂದುಕೊಂಡಿದ್ದುಂಟು. ಯಾರನ್ನು ಯಾರು ? ಉದ್ಧರಿಸಲಿಕ್ಕೆ ಸಾಧ್ಯ ? ಯಾವನೇ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ತಾನೇ ಇತರರನ್ನು ನೋಡಿ ಕಲಿತು ಹಿರಿದಾಗಿಸಿಕೊಳ್ಳಬೇಕು ಎಂಬುದು ನನ್ನ ತಿಳುವಳಿಕೆಯಾಗಿತ್ತು. ಅದರಲ್ಲೂ ಈ ವಿಷಯಾಸಕ್ತಿಯಲ್ಲಿಯೇ ಮುಳುಗಿ ಹೋಗಿರುವ ಪ್ರಪಂಚದಲ್ಲಿ ನಾನು ಧರ್ಮ ಪ್ರಚಾರ ಮಾಡಿ ಜನರನ್ನು ಮೇಲಕ್ಕೆತ್ತುತ್ತೇನೆ ಎನ್ನುವುದು ಬರೀ ಕಲ್ಪನೆ ಎಂದುಕೊಂಡಿದ್ದೆ. ಆದರೆ ಅವರು ಪ್ರವಚನ ಮಾಡುವ ಸ್ಥಳದಲ್ಲೆಲ್ಲಾ ಕಿಕ್ಕಿರಿಯುವ ಜನಸಮೂಹ, ಹಲವಾರು ಜನರ ಕಷ್ಟ ಕಾರ್ಪಣ್ಯಗಳ ಪರಿಹಾರ, ದುಶ್ಚಟಗಳನ್ನು ಬಿಟ್ಟಿರುವಿಕೆ, ಅವರಿಂದ ಬರುವ ಪತ್ರಗಳು, ಮಾತಾಜಿಯವರಿಗೆ ಜನರು ತಮ್ಮ ಹೃದಯಮಂದಿರದಲ್ಲಿ ಕೊಟ್ಟ ಸ್ಥಾನ ಇವೆಲ್ಲವನ್ನು ನೋಡಿದಾಗ ನನ್ನ ಕಲ್ಪನೆಯನ್ನು ಸುಳ್ಳಾಗಿಸಿವೆ. ಕೆಲವು ಜನರಾದರೂ ಅವರ ನಡತೆಯನ್ನು ತಿದ್ದಿಕೊಳ್ಳಲು ಒಳ್ಳೆಯ ರೀತಿಯಲ್ಲಿ ಬಾಳಲು ಕಲಿತಿದ್ದಾರೆ ಎಂಬುದು ನನ್ನ ಅನುಭವಕ್ಕೆ ಬಂದಮಾತು. ಅವರು ಎಲ್ಲಿ ಪ್ರವಚನ ಮಾಡಲಿ ವೇದಿಕೆಯ ಮೇಲೆ ಕುಳಿತರೆಂದರೆ ಎಲ್ಲ ಜನರೂ ನಿಶ್ಶಬ್ದ. ಅವರ ಗಮನವೆಲ್ಲ ಮೌನ ಧ್ಯಾನದಲ್ಲಿ ಮಾತಾಜಿಯವರ ಕಡೆಗಿದ್ದು ಅವರ ವಾಣಿಯನ್ನು ತಮ್ಮ ಹೃದಯ ಬಟ್ಟಲಲ್ಲಿ ಇಂಬಿಟ್ಟುಕೊಳ್ಳುವಲ್ಲಿ ಉತ್ಸುಕರಾಗಿರುತ್ತಾರೆ. ಮಾತಾಜಿ ಓಂಕಾರದ ಝೇಂಕಾರದ ನಿನಾದದೊಡನೆ ಪ್ರಾರಂಭಿಸಿ ಕಸ್ತೂರಿ ಕನ್ನಡದ ಕಂಪನ್ನು ಅದರಲ್ಲಿ ಹುದುಗಿರುವ ವಚನ ಸಾಹಿತ್ಯ ಸೌರಭವನ್ನು ವಿಶ್ವಧರ್ಮ

ಸಂದೇಶವನ್ನು ಮಾರುತನತೆರದಿ ಪ್ರಸರಿಸುತ್ತಾರೆ. ಕನ್ನಡ ನುಡಿ ಅವರ ಕಂಠದಲ್ಲಿ ಓತಪ್ರೋತವಾಗಿ ಪ್ರವಹಿಸುತ್ತಿದ್ದರೆ ಅವರ ವಾಣಿಯಲ್ಲಿ ಮಂಗಳ ಮಧುರ ವೀಣಾನಾದದಂತೆ ಅಮರ ಸಂದೇಶಗಳು ಜನತೆಯ ಹೃದಯ ಬಟ್ಟಲಲ್ಲಿ ತುಂಬುತ್ತಾ ತಾಯಿ ಶಾರದೆಯ ಪ್ರಖರತೆಯ ವೈಭವ ವಿಲಾಸದಂತೆ ಕಂಡುಬರುತ್ತದೆ. ದೈವೀದತ್ತ ಪ್ರತಿಭೆ, ಅಸಾಮಾನ್ಯ ಪಾಂಡಿತ್ಯ, ದಿವ್ಯ ಮಧುರವಾಣಿ, ಪ್ರಶಾಂತ ಚಿತ್ತಗಳ ಸಾಕಾರವಾದ ಮಾತಾಜಿ ತಮ್ಮ ವಾಣಿಯ ಅಮೃತದಲ್ಲಿ ಜನತೆಯನ್ನು ಮೀಯಿಸಿ ಮಂತ್ರಮುಗ್ಧರನ್ನಾಗಿ ಮಾಡಿದ್ದಾರೆ. ಪ್ರವಚನವೆಂದರೆ ಬೇಸರದ ಬುಗ್ಗೆಯಲ್ಲ. 'ಪರಮಾನಂದದ ಪ್ರಶಾಂತ ಮಂದಿರ' ಎಂಬ ಭಾವ ಬೆಳೆಸಿ ಪ್ರಚಂಡ ರೀತಿಯಲ್ಲಿ ಧರ್ಮದ ಕಡೆ ಜನರನ್ನು ಆಕರ್ಷಿಸಿ, ಮುದಗೊಳಿಸಿ ಚೇತನಿಸಿದ್ದಾರೆ. ಮೈಸೂರು, ಮಂಗಳೂರು, ಬಳ್ಳಾರಿ, ದಾವಣಗೆರೆಯಲ್ಲಿ ಅವರು ಮಾಡಿದ ಪ್ರವಚನಗಳು ಯಶಸ್ಸಿನ ಕಿರೀಟವನ್ನೇ ತೊಡಿಸಿವೆ.

ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯ ಸಂಸ್ಥಾಪಕರಾಗಿ ಅವರು ಹಮ್ಮಿಕೊಂಡ ಯೋಜನೆಗಳು ಹಲವಾರು.

1. ವಿಶ್ವಧರ್ಮ ಪ್ರವಚನ ಕಾರ್ಯಕ್ರಮವನ್ನು ನಾಡಿನಾದ್ಯಂತ ಅಲ್ಲಲ್ಲಿ ಏರ್ಪಡಿಸುವುದು.
2. ಸುವಿಧಾನ ಸುಗ್ರಂಥಮಾಲೆಯ ಮೂಲಕ ಧರ್ಮ ಗ್ರಂಥಗಳ ಪ್ರಕಟಣೆ. ಈಗಾಗಲೆ ಐವತ್ತೈದಕ್ಕೂ ಮೀರಿದ ಪುಸ್ತಕಗಳ ಪ್ರಕಟಣೆಯಾಗಿದೆ.
3. ಧರ್ಮಬೋಧಕರ ತರಬೇತಿಗಾಗಿ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ.
4. ಯೋಗಾಸನ ತರಬೇತಿ.
5. ಆಗಾಗ್ಗೆ ವಿಚಾರಗೋಷ್ಠಿ, ಅನುಭವಗೋಷ್ಠಿಗಳನ್ನು ಏರ್ಪಡಿಸುವುದು.
6. ದಿವ್ಯಾನುಭವ ಶಿಬಿರ, ಶಿವಾನುಭವ ಪ್ರವಾಸ ಏರ್ಪಡಿಸುವುದು.
7. ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆಯ ಮೂಲಕ ವಸತಿ ಸಹಿತ ಪ್ರೈಮರಿ, ಪ್ರೌಢಶಾಲೆಗಳನ್ನು ತೆರೆದಿದ್ದು.
8. ಇತ್ತೀಚೆಗೆ ಬಸವ ಪರಿಷತ್ ಸ್ಥಾಪನೆ.

ಇವೆಲ್ಲವೂ ಪೂಜ್ಯ ಮಾತಾಜಿಯವರು ಕೈಗೊಂಡ ಸಾಧನಾ ರಂಗಗಳು.

ಸನ್ಯಾಸಿನಿಯಾಗಿ ಸಿದ್ಧಿ ಪಡೆದಂತೆ, ಸಾಹಿತಿಯಾಗಿ ಪರಮೋನ್ನತಿ ಪಡೆದಿದ್ದಾರೆ ಮಾತಾಜಿ. ವೇದಾಂತ ಸಾಹಿತ್ಯಕ್ಕೆ ನಿಜಗುಣರಿದ್ದಂತೆ, ಶಿವಾದ್ವೈತ ಸಾಹಿತ್ಯಕ್ಕೆ

ಮಾಯಿದೇವರಿದ್ದಂತೆ, ಶರಣ ಸಾಹಿತ್ಯಕ್ಕೆ ಮಾತಾಜಿ. ಅವರ ಮಾತು ಮಾತಿನಲ್ಲಿ ಮಹಾಜ್ಯೋತಿ. ಕಲಿತವರ ಬಗೆ ಬೇರೆಯಿರಬಹುದು. ಆದರೆ ಜನಸಾಮಾನ್ಯರ ಸಂಖ್ಯೆ ಲಕ್ಷ ಲಕ್ಷ. ಅವರಿಗೆಲ್ಲ ಭರವಸೆಯ ಬೆಳಕು ಮಾತಾಜಿ ಎನ್ನುತ್ತಾರೆ ಗೊ. ರು. ಚನ್ನಬಸಪ್ಪನವರು.

ಪೂಜ್ಯ ಮಾತಾಜಿಯವರಿಂದ ಇದುವರೆಗೆ ಅತಿಸಣ್ಣ ಕೃತಿಗಳಿಂದ ಹಿಡಿದ. ಬೃಹತ್ ಕೃತಿಗಳವರೆಗೆ ಸುಮಾರು ನಲವತ್ತು ಗ್ರಂಥಗಳನ್ನು ರಚಿಸಿದ್ದು ಪ್ರಕಟಗೊಂಡಿವೆ. ಕಲ್ಯಾಣಕಿರಣ ಮಾಸಪತ್ರಿಕೆ ಅವರ ಸಂಪಾದಕೀಯತ್ವದಲ್ಲಿ ನಡೆಸುವ ಧರ್ಮ ಪ್ರಚಾರದ ಮಹಾ ಮಣಿಹ ಹೊತ್ತಿದೆ. ಹೀಗೆ ಮಾತಾಜಿ ಕವಯಿತ್ರಿಯಾಗಿ, ಕಾದಂಬರಿಕಾರ್ತಿಯರಾಗಿ, ವಚನಕಾರ್ತಿಯಾಗಿ, ಸಂಪಾದಕರಾಗಿ ಅವರು ಮಾಡುತ್ತಿರುವ ಕೆಲಸ ಸರ್ವ ಮಾನ್ಯ.

ವಿರಹತರಂಗ ಕೃತಿಯ ಪೂರ್ವಾರ್ಧದಲ್ಲಿ ಸಂಸಾರ ಸಾಗರದ ಹೊಡೆತದಿಂದ ಪಾರುಮಾಡು ಎಂಬ ಬೇಡಿಕೆ ಸಾಧಕತನದಲ್ಲಿದ್ದರೆ, ಉತ್ತರಾರ್ಧದಲ್ಲಿ ವಿಷಯಾಪೇಕ್ಷೆಯ ಗಾಳಿಯನ್ನು ತೊರೆದು ಶಿವಾಪೇಕ್ಷೆಯ ನೀರನ್ನು ತುಂಬು ಎಂಬ ಪ್ರಾರ್ಥನೆ ವ್ಯಕ್ತವಾಗಿದೆ. ದೈವಾನುಗ್ರಹಕ್ಕಾಗಿ ಹಂಬಲಿಸುವ ವಿರಾಗಿಣಿಯ ಹಂಬಲವಿದೆ. ಸಮರ್ಪಣ ಭಾವವಿದೆ.

ದೇವ ತವಹಸ್ತಕೆ ನನ್ನ ಬಾಳಿನ ಸೂತ್ರ ಕೊಟ್ಟಿಹೆ
ನಿನ್ನ ಮನವು ತಣಿವನಕ ಎನ್ನ ನೀ ಜಗದಲಿರಿಸು ||

ಎಂಬ ಕಳಕಳಿ ದೇವನಲ್ಲಿ ಬೆರೆತಿದೆ.

ಒಂದೆ ಒಡಲಿನ ಎರಡು ಕುಡಿಗಳವ್ವಾ ನಾವು
ಅಂದು ನೀನು ಇಂದು ನಾನು ಚೆನ್ನ- ಸಚ್ಚಿದಾನಂದ ಪತ್ನಿಯರು
ಶರಣ ಕಣ್ಮಣಿಯಾಗಿ ಬೆಳಗಿಸಿದೆ ಅಕ್ಕಮಹಾದೇವಿ ಅಂದು
ಧರಣಿಯಲಿರ್ಪ ಮಾನವರ ವಿಶ್ವ ಬಂಧುವಾಗಿಹೆ ಮಾತೆಮಹಾದೇವಿ ಇಂದು

ಅಂತೆಯೇ ಮಾತಾಜಿ ಜನಮನದಲ್ಲಿ ಅಭಿನವ ಅಕ್ಕನೇ ಆಗಿದ್ದಾರೆ.

ಬಸವ ತತ್ವದರ್ಶನ ಮಾತಾಜಿಯವರ ಸಂಶೋಧನ ಗ್ರಂಥವೇ ಹೌದು ! ಬಸವ ತತ್ವವನ್ನು ದರ್ಶನ ಮಾಡಿಸುವಲ್ಲಿ ತಮ್ಮ ವಚನಗಳ ಸೇರ್ಪಡಿಕೆಯೊಂದಿಗೆ ಅವರ ಅನುಭಾವದ ದರ್ಶನವೂ ಎರಕಗೊಂಡು ಬಂದಿದೆ. ಇದೊಂದು ಅಮೂಲ್ಯ ಕೃತಿ.

ಭಾಷೆ ಸುಂದರ, ಶೈಲಿ ನಿರರ್ಗಳ, ವೈವಿಧ್ಯಪೂರ್ಣ ನಿರೂಪಣೆಯ ಸೊಗಸು ಇವೆಲ್ಲವೂ ಮಾತಾಜಿಯವರ ಹಿರಿಮೆಗರಿಮೆಯನ್ನು ಅಲೌಕಿಕ ಶಕ್ತಿಯನ್ನು ಪರಿಚಯಿಸುತ್ತದೆ. ಅವರ ವಚನಗಳೆಲ್ಲವು 'ಸಚ್ಚಿದಾನಂದ' ಎಂಬ ಅಂಕಿತದಲ್ಲಿ ಬರೆಯಲ್ಪಟ್ಟಿವೆ.

ವಿಶ್ವವಿಭೂತಿ ಬಸವಣ್ಣ ಇದು ಸುಮಾರು 90 ಪುಟಗಳ ಗ್ರಂಥ. ಇದರಲ್ಲಿ ಬಸವಣ್ಣನವರ ಐವತ್ತೈದು ಲಕ್ಷಣಗಳನ್ನು ಗುರುತಿಸಲಾಗಿದ್ದು, ಆ ಲಕ್ಷಣಗಳ ಕಿರು ಪರಿಚಯವಿದೆ. ಜಗತ್ತಿನ ಯಾವ ಪ್ರವಾದಿಗೂ ಇಷ್ಟು ಲಕ್ಷಣ ಕಂಡುಬರುವುದಿಲ್ಲ ಎಂಬುವುದಕ್ಕೆ ಈ ಗ್ರಂಥ ದಿಕ್ಸೂಚಿಯಾಗಿದೆ.

ವಿಶ್ವಗುರು ಬಸವಣ್ಣ ಎಂಬ ಕೃತಿ ಸರಳ ಮತ್ತು ನೇರವಾದ ಶೈಲಿಯಲ್ಲಿ ಬಹುಮುಖ ವ್ಯಕ್ತಿತ್ವದ ಬಸವಣ್ಣನವರ ಜೀವನ, ಸಾಧನೆ, ಸಂದೇಶಗಳನ್ನು ಈ ಹೊತ್ತಗೆಯಲ್ಲಿ ಪಡಿಮೂಡಿಸಿದ್ದಾರೆ. ಕರಿಯನ್ನು ಕನ್ನಡಿಯಲ್ಲಿ ಅಡಗಿಸಿದಂತೆ.

ಕನ್ನಡ ಸಾಮಾಜಿಕ ಕಾದಂಬರಿ ಲೋಕದಲ್ಲಿ "ಹೆಪ್ಪಿಟ್ಟ ಹಾಲು" ಒಂದು ಆರೋಗ್ಯಕರವಾದ ದಿಟ್ಟತನದ ಪ್ರಯೋಗ. ಮಿಲನ, ಪತನ, ಉತ್ಥಾನ, ಎಂಬ ಮೂರು ಭಾಗಗಳಲ್ಲಿ ಹೆಪ್ಪಿಟ್ಟಹಾಲು ಹೆಪ್ಪುಗಟ್ಟಿದೆ. ನಿರೂಪಣೆಯಲ್ಲಿ ನಾವೀನ್ಯತೆ ಭಾಷೆಯಲ್ಲಿ ಸಹಜ ಸರಳತೆ ಎದ್ದುಕಾಣುತ್ತದೆ. ಆದರ ವಿವರಣೆಯಲ್ಲಿ ಗಾಂಭೀರ್ಯ ತುಂಬಿ ತುಳುಕುವುದನ್ನು ನಾವು ಕಾಣಬಹುದು. ಇದೊಂದು ಸಾಮಾಜಿಕ ಮನೋವೈಜ್ಞಾನಿಕ ಕಾದಂಬರಿಯಾಗಿದ್ದು, ರಾಜ್ಯಪ್ರಶಸ್ತಿಯನ್ನು ಪಡೆದುಕೊಂಡಿದೆ.

'ತರಂಗಿಣಿ' ಎಂದಾಗಲೇ ನಮಗೆ ಏನೋ ಒಂದು ರೀತಿಯ ಅಮಿತಾನಂದ ವುಂಟಾಗಿ ಪಾರಲೌಕಿಕ ದರ್ಶನವನ್ನು ಪಡೆದ ಅನುಭವ ನಮಗಾಗುತ್ತದೆ. ಉಡುತಡಿಯಲ್ಲಿ ಉಗಮವಾಗಿ, ನಡೆ-ನುಡಿಗಳಲ್ಲಿ ಶುಚಿತ್ವಗೊಂಡು ಪರತತ್ವವನ್ನು ಮೈಗೂಡಿಸಿಕೊಂಡು ಕಲ್ಯಾಣದ ಶರಣರ ಬಳಗದೊಡನೆ ಸಂಗಮವಾಗಿ, ಜಗದೆಲ್ಲೆಡೆಯಲ್ಲಿ ಓತಪ್ರೋತವಾಗಿ ತುಂಬಿದ ಪರಮಾತ್ಮನೊಡನೆ ಕದಳಿಯಲ್ಲಿ ಸಮಾಗಮವಾದ ದೈವೀ ತರಂಗಿಣಿ ಅಕ್ಕಮಹಾದೇವಿಯನ್ನು ಕುರಿತಾದ ಬೃಹತ್ ಕಾದಂಬರಿ. ಇದು ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ. ತರಂಗಿಣಿಯನ್ನು ಓದಿ ಎಷ್ಟೋಜನ ತಮ್ಮ ಜೀವನದಲ್ಲಿ ಪರಿವರ್ತಿತರಾದವರು ಉಂಟು, ಪತ್ರ ಬರೆದವರುಂಟು. ಮನೋಜ್ಞ ಶೈಲಿ, ಹೃದಯಸ್ಪರ್ಶಿ ಘಟನೆಗಳು, ವೀರ ವೀರಾಗಿಣಿಯ ಬದುಕನ್ನು ಬಗೆದು ನೋಡುವ ಅಪೂರ್ವ ಪ್ರಯತ್ನವನ್ನು ಇದರಲ್ಲಿ ಕಾಣಬಹುದಾಗಿದೆ.

ಅವರ ಪ್ರತಿಯೊಂದು ಪುಸ್ತಕವೂ ಕಡಿಮೆ ಎಂದರೆ ಮೂರು-ನಾಲ್ಕು ಮುದ್ರಣಗಳನ್ನು ಕಂಡಿದೆ ಎಂದರೆ ಆಶ್ಚರ್ಯವಾಗಬಹುದು. ಅಷ್ಟೊಂದು ಬೇಡಿಕೆಯಿದೆ ಸಾಹಿತ್ಯ ಬನದಲ್ಲಿ ಅವರ ಪುಸ್ತಕಗಳಿಗೆ.

‘ಬಸವ ತತ್ವದ ಹಾಲು ಹುಲಿಗಲ್ಲದೆ, ಹೊಲದ ಹುಲ್ಲೆಗೆ ಉಣಿಸಬಾರದು’ ಎಂಬ ಮಾತಿದೆ. ಅದನ್ನು ಚೆನ್ನಾಗಿ ಅರಿತವರು ಮಾತಾಜಿ. ಬಸವ ಸಾಹಿತ್ಯ ಸಕಲ ಸಾಹಿತ್ಯದ ಓಂಕಾರ. ಜೀವನಾನುಭವದ ಸಾಕಾರ. ಅದರಲ್ಲಿ ಏನುಂಟು ಏನಿಲ್ಲ! ಆದ್ದರಿಂದಲೇ ಮಾತಾಜಿಯವರಿಗೆ ಬಸವಧರ್ಮದ ಬಗ್ಗೆ ಅಖಂಡ ವಿಶ್ವಾಸ; ಅನಂತ ಶ್ರದ್ಧೆ. ಬಸವ ತತ್ವ ಜೀವದುಸಿರು, ಆ ಧರ್ಮದ ಬಗ್ಗೆ ಜಗ್ಗದ ಕುಗ್ಗದ ವೀರನಿಷ್ಠೆ. ಬಸವ ತತ್ವದ ನಾದಬ್ರಹ್ಮವ ನುಡಿಯುತ್ತಿರುವ ಅನುಭವ ಜ್ಯೋತಿ ಮಾತಾಜಿಯವರು. ಅವರ ಜೇನನುಡಿ, ಝೇಂಕಾರದ ಧ್ವನಿ ಕೇಳಿ ಭಾವಪರವಶರಾದವರ ಸಂಖ್ಯೆ ಲಕ್ಷ ಲಕ್ಷ. ಅವರ ಮಾತು ಗೀತೆಗಳನ್ನು ಸವಿದಷ್ಟೂ ಸವಿಯಬೇಕೆನಿಸುತ್ತದೆ. ಆ ಸೋಜಿಗದ ಸವಿ ನುಡಿಯ ಬಸವ ಸಾಗರದಲ್ಲಿ ಓಲಾಡದ ಶ್ರೋತೃಗಳಿಲ್ಲ. ಅವರ ನಗೆಮಾತಿನ ಮಾನಸ ಸರೋವರದಲ್ಲಿ ಮೀಯದ ಸಭಿಕರಿಲ್ಲ.

ಹಿಂದೊಮ್ಮೆ ಮಾತಾಜಿ 1976ರಲ್ಲಿ ಇಂಗ್ಲೆಂಡಿಗೆ ಪ್ರವಾಸ ಹೋಗಿದ್ದರು. ಆದರೆ ಈ ಬಾರಿಯೂ ಹೋಗಿದ್ದಾರೆ. ಅಮೇರಿಕಾದ V. S. N. A. ಸಂಸ್ಥೆಯವರು ಮಾಡಿದ ಆಗ್ರಹದ ಆಹ್ವಾನದ ಒತ್ತಾಯದ ಮೇರೆಗೆ. ಮಾತಾಜಿ ಅಮೆರಿಕಾಕ್ಕೆ ಹೋಗಿದ್ದಾರೆ. ಮಾತಾಜಿ ಇಲ್ಲದೆ ಮನ ಬಿಕೋ ಎನ್ನಿಸುತ್ತದೆ. ತಾಯಿಯಿಲ್ಲದಾಗ ಅತ್ತೂ ಅತ್ತೂ ಸಾಕಾಗಿ ರಚ್ಚೆ ಹಿಡಿದು ರಚ್ಚೆ ಹಿಡಿದು ಸುಸ್ತಾಗಿ ಒಂದು ಕಡೆ ಬಿದ್ದುಕೊಳ್ಳುವ ಮಗುವಿನ ತೆರದಿ ಮನಸ್ಸು ನಿರಾಶೆಯ ನಿಟ್ಟುಸಿರನ್ನೆಳೆಯುತ್ತದೆ.

ಮಾತಾಜಿಯವರು ಇಲ್ಲಿದ್ದಾಗ ದಿನಕ್ಕೆ ಐವತ್ತುಬಾರಿಯಾದರೂ ಕರೆಯುತ್ತಿದ್ದರು. ಯಾವಾಗಲೂ ಅವರ ನುಡಿಯಸ್ಪರ್ಶ ಮಾತು ಮಾತಿಗೂ ನನ್ನನ್ನು ಎಚ್ಚರಿಸುತ್ತಿದ್ದುದುಂಟು. ಮಾತಾಜಿಯವರ ಮಾತು ಏನೋ ಒಂದು ಭರವಸೆ ನೀಡುತ್ತದೆ, ಸಾಂತ್ವನ ನೀಡುತ್ತದೆ, ಧೈರ್ಯ ಕೊಡುತ್ತದೆ, ಅಲೌಕಿಕ ತಾಯ್ತನ ತಂದುಕೊಟ್ಟಿದೆ. ನಾನು ಏನೂ ಮಾತನಾಡದ ಮೂಕನಾಗಿದ್ದರೂ ನನ್ನ ಅಂತರಂಗವೆಲ್ಲಾ ಮಾತಾಜಿಯವರೇ ತುಂಬಿಕೊಂಡಿದ್ದಾರೇನೋ ಎನ್ನಿಸುತ್ತದೆ. ನಾನು ಎಷ್ಟೇ ನಿರುತ್ಸಾಹಿಯಾಗಿರಲಿ, ಮಾತಾಜಿಯವರಿಂದ ಪತ್ರ ಬಂದಿತೆಂದರೆ ಏನೋ ಲವಲವಿಕೆ ಮತ್ತೆ ನಮ್ಮ ಕೆಲಸಗಳಲ್ಲಿ ಚುರುಕುತನದ ಆಶಾಂಕುರ ಮೂಡುತ್ತದೆ. ದಿನವೂ ಪೋಸ್ಟ್‌ಮ್ಯಾನ್ ಬರುವುದನ್ನೇ ನೋಡುತ್ತಿದ್ದು ಮಾತಾಜಿಯವರಿಂದ ಪತ್ರ ಬಂದಿತೇ ಎಂದು ಎದುರು ನೋಡುವ ಚಾತಕಪಕ್ಷಿಯ ಕಾತುರ. ಪತ್ರ ಬಂದಿಲ್ಲವೆಂದರೆ ನಿರಾಶೆಯ ಕಾರ್ಮೋಡ ಕವಿದಂತೆ ಭಾಸವಾಗುತ್ತದೆ. ಅವರ ಪತ್ರ ಬಂದಾಗಲಂತೂ ಹೇಳಲಾಗದಷ್ಟು ಸಂತೋಷ. ಅದನ್ನು ಬಿಡಿಸಿ ನೋಡುವವರಿಗೂ ವ್ಯವಧಾನವಿಲ್ಲದ ತವಕ. ಪತ್ರ ನೋಡುತ್ತಿದ್ದಂತೆಯೇ ಹೇಳಲಾಗದಂತಹ ಪುಳಕ.

ಮಾತಾಜಿಯವರು ಈಗ ಎಲ್ಲಿರಬಹುದು? ಏನು ಮಾಡುತ್ತಿರಬಹುದು ಎಂದೆಲ್ಲ ಯೋಚಿಸುತ್ತೇನೆ. ಆದರೆ ತಕ್ಷಣದ ಉತ್ತರ........ಅವರು ಎಲ್ಲಿದ್ದರೇನಂತೆ ಇಲ್ಲೇ ಇದ್ದಂತೆ....ಅವರ ಮನಸ್ಸು ಇಲ್ಲಿಯೇ ಇರುತ್ತದೆ ಎಂದು ಸಮಾಧಾನ ತಂದುಕೊಳ್ಳುತ್ತೇನೆ. ಈಗಾಗಲೇ ಹಲವಾರು ಜನ ಮಾತಾಜಿಯವರು ಯಾವಾಗ ಅಮೆರಿಕಾದಿಂದ ಬಂದರು? ಅವರ ಲೇಖನ ‘ಕಲ್ಯಾಣ ಕಿರಣ’ದಲ್ಲಿ ಬಂದಿದೆ. ನಮಗೆ ಅವರು ಬಂದದ್ದು ತಿಳಿಯಲೇ ಇಲ್ಲವಲ್ಲ. ಅವರ ದರ್ಶನಕ್ಕೆ ಯಾವಾಗ ಬರಬಹುದು ಎಂದೆಲ್ಲ ಅನೇಕರು ಪತ್ರ ಬರೆಯುವುದನ್ನು ನೋಡಿದಾಗ ಅವರಿಗೇನು ಉತ್ತರ ಹೇಳುವುದು? ಮಾತಾಜಿಯವರು ಅಮೆರಿಕಾದಲ್ಲಿದ್ದುಕೊಂಡೇ ಪತ್ರಿಕೆ ನಡೆಸುತ್ತಿದ್ದಾರೆ ಎಂದು ತಿಳಿಸಿದರೆ ಅವರಿಗೆ ಎಲ್ಲಿಲ್ಲದ ಅಚ್ಚರಿ! ಅವರು ಇಲ್ಲೇ ಇರಲಿ! ಎಲ್ಲೇ ಇರಲಿ, ಅವರದು ಬಿಡುವಿಲ್ಲದ ದುಡಿತ, ಪ್ರವಚನ ಕಾಯಕವೇ ಕೈಲಾಸ. ಅವರೊಬ್ಬ ಸಂಘಶಕ್ತಿ, ನಡೆದಾಡುವ ಜಂಗಮಕೋಶ. ಅವರ ಯೋಜನೆಗಳು ಹಲವಾರು? ಆ ಉದ್ದೇಶಗಳನ್ನು ಅಳೆಯುವವರು ಯಾರು?

ಯಾರು ಒಪ್ಪಲಿ, ಬಿಡಲಿ, ಮಾತಾಜಿಯವರು ಒಬ್ಬ ಅದಮ್ಯ ಚೇತನ. ಅವರನ್ನು ಯಾವುದೋ ಕಾಣದ ಶಕ್ತಿ ನಡೆಸುತ್ತಿರುವಂತೆ ನನಗೆ ಭಾಸವಾಗುತ್ತದೆ. ಅವರ ಸನಿಹದಲ್ಲಿದ್ದೂ ಆ ವಾತ್ಸಲ್ಯ ಕರುಣೆಯ ಜಲಧಾರೆಯಲ್ಲಿ ಮಿಂದಿದ್ದೇನೆ. ಅದರಿಂದ ಋಣಭಾರನಾಗಿ ಅದನ್ನು ತೀರಿಸುವ ಬಗೆ ಹೇಗೆ? ಎಂದು ಒಮ್ಮೊಮ್ಮೆ ಪ್ರಶ್ನಿಸಿಕೊಂಡಾಗ ನಿಟ್ಟುಸಿರು ಬಿಡುತ್ತೇನೆ, ಆನಂದದ ಕಂಬನಿ ಮಿಡಿಯುತ್ತೇನೆ.

ಬಸವ ಧರ್ಮದ ಈ ಭಾಗ್ಯನಿಧಿಗೆ ಈ ತಿಂಗಳ ಮಾರ್ಚ್ ಹದಿಮೂರರಂದು ಅವರ ಹುಟ್ಟುಹಬ್ಬ. ಅಮೆರಿಕಾದ ನಾಗರಿಕ ಬಂಧುಗಳು ನ್ಯೂಯಾರ್ಕ್ ನಗರದಲ್ಲಿಯೇ ಆಚರಿಸುವ ಸಿದ್ಧತೆಯಲ್ಲಿದ್ದಾರೆ. ಆ ಅಸೀಮ ಚೇತನವಾದ ವಾತ್ಸಲ್ಯಮಯಿ ಮಾತಾಜಿಯವರು ನೂರುವರ್ಷ ಮೀರಿ ಬಾಳಲಿ, ಬಸವಧರ್ಮ ಭಾನು ಬೆಳಗಲಿ ಎಂದು ವಿಶ್ವಗುರು ಬಸವೇಶ್ವರರಲ್ಲಿ ಪ್ರಾರ್ಥಿಸೋಣ.

ವರುಷ ಮೂವತ್ತೈದು ತುಂಬುತ್ತ ಬಂದಿರಲು
ಪರುಷಮಯ ದೈವೀ ಜೀವನವ ತಾವ್‌ಹೊಂದಿರಲು
ಚರಿಪದೀಪ್ತಿಯೊಲು ಭಕ್ತರಿಗೆ ಬೆಳಕಾಗಿರಲು
ಸಚ್ಚಿದಾನಂದ ಸತಿ ಮಾತಾಜಿ ತಮ್ಮಡಿಗೆ
ಅನುದಿನವೂ ನಾನುಡಿವೆ ಶರಣು–ಶರಣಾರ್ಥಿ.

ಕಲ್ಯಾಣ ಕಿರಣಕ್ಕೆ ಆದ ಹೊಸ ಆಜೀವ ಸದಸ್ಯರ ಬಳಗ

ಶರಣ/ಶರಣೆಯರುಗಳಾದ

೧. ಸಿ. ಸೋಮಶೇಖರ್, ಬೆಂಗಳೂರು-54
೨. ದಾನಪ್ಪ. ಘಂಟಪ್ಪ ಕುದ್ರಿಯವರು, ಹಾವೇರಿ.
೩. M/S ಸಿ. ವಿ. ಮಹಾಂತ ಟ್ರೇಡರ್, ಹಾವೇರಿ.
೪. ಜಯದೇವಪ್ಪ ಮುರಿಗೆಪ್ಪ ಹೇರೂರ್, ಹಾವೇರಿ.
೫. ಹೆಚ್. ವಿ. ಪ್ರಹ್ಲಾದ್ ಜೂನಿಯರ್ ಇಂಜಿನಿಯರ್, ಹಾವೇರಿ.
೬. ವೀರಭದ್ರಪ್ಪ ಕೋರಿಶೆಟ್ಟರು, ಗಂಗಾವತಿ.
೭. ಎಸ್. ಮಲ್ಲಿಕಾರ್ಜುನಪ್ಪ, ಮತ್ತೀಪುರ, ಕೊಳ್ಳೇಗಾಲ ತಾಲ್ಲೂಕು.
೮. ಬೋರಯ್ಯ ಅಸಿಸ್ಟೆಂಟ್ ಇಂಜಿನಿಯರ್, ಕಬಿನಿ ಕಾಲೋನಿ, ಹೆಗ್ಗಡ ದೇವನ ಕೋಟೆ ತಾಲ್ಲೂಕು.
೯. ಶಿವರಾಜ್ ಪಾಟೀಲ್, ಮಸ್ಕಿ, ಲಿಂಗಸುಗೂರು ತಾಲ್ಲೂಕು.
೧೦. ಶ್ಯಾಮರಾವ್. ಮಂದಕನಲ್ಲಿ, ಬೀದರ್ ತಾಲ್ಲೂಕು, ಮತ್ತು ಜಿಲ್ಲೆ.
೧೧. ವಿ. ವೆಂಕೋಬಣ್ಣ, ಸಿರುಗುಪ್ಪ.
೧೨. ಮುಳ್ಳೂರು ವೀರಣ್ಣಶೆಟ್ಟಿ ಅಂಡ್ ಸನ್ಸ್, ಸಿರುಗುಪ್ಪ.
೧೩. ಈಡಿಗರ ಸೀನಪ್ಪ, ಸಿರುಗುಪ್ಪ.
೧೪. ಎಂ. ಮಲ್ಲಯ್ಯಶೆಟ್ಟಿ, ಸಿರುಗುಪ್ಪ.
೧೫. ವಿ. ಕುಮಾರಸ್ವಾಮಿ, ಸಿರುಗುಪ್ಪ.
೧೬. ಅಧ್ಯಕ್ಷರು ವಿಶ್ವ ಹಿಂದೂ ಪರಿಷತ್, ಸಿರುಗುಪ್ಪ.
೧೭. ಪಿ. ಯೋಗಿರಾಜ, ಬಾಗವಾಡಿ, ಸಿರುಗುಪ್ಪ ತಾಲ್ಲೂಕು.
೧೮. ಪರವುಪ್ಪ ಅಡೆವೆಪ್ಪ ಬಿದರಿ, ಬ್ಯಾಡಗಿ.
೧೯. ಡಾ. ಕೆ. ಸರೋಜಿನಿ, ನಿಡಘಟ್ಟ, ಕಡೂರು ತಾಲೂಕು.
೨೦. ಚನ್ನೇಗೌಡರು, ಡಿ.ಸಿ.ಸಿ. ಬ್ಯಾಂಕ್ ಮ್ಯಾನೇಜರ್, ಮಂಡ್ಯ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ಧನ ಸಹಾಯ

ಶರಣ/ಶರಣೆಯರುಗಳಾದ

ಹಾವೇರಿ :

೧.	ಶಿವಲಿಂಗಪ್ಪ ಶಿವಪ್ಪ ಹೇರೂರು	೧೧೧೧-೦೦
೨.	ಶ್ರೀ ಶರಣಪ್ಪನವರು, ಹುರುಳಿಕುಪ್ಪ	೫೦೦-೦೦
೩.	ವೀರ ಸಂಗನಗೌಡ್ರು	೧೦೦೧-೦೦
೪.	ಶ್ರೀ ಶಂಕರಪ್ಪ ಎಸ್. ಕೆ. ಕಲ್ಮನಿ	೧೦೦೧-೦೦
೫.	ಲಿಂಗರಾಜು, ಬಾಳೇ ಹೊಸೂರು	೫೦೧-೦೦

ಬ್ಯಾಡಗಿ :

೬.	ಪಾರ್ವತಮ್ಮ W/o ಮೃತ್ಯುಂಜಯಪ್ಪ ಬೆಟಗೇರಿ	೫೦೧-೦೦
೭.	ಎನ್. ವಿ. ಮುಲ್ಕಿಗೌಡರು, ಬಸವೇಶ್ವರ ಅಂಡ್ ಕಂಪನಿ	೫೦೧-೦೦
೮.	ಈರಮ್ಮ W/o ಮಲ್ಲಪ್ಪ ಮಾಳಗಿ	೫೦೧-೦೦
೯.	ಸಂಗವ್ವ W/o ನಾಗನಗೌಡರು ಪಾಟೀಲ್	೫೦೧-೦೦
೧೦.	ರಾಮಕ್ಕ ಬಸವಲಿಂಗಪ್ಪ ಗೌಡ ಪಾಟೀಲ್	೫೦೧-೦೦

ಸಿರಗುಪ್ಪ :

೧೧.	ನಾಗಭೂಷಣ ಆರ್ ಆಯ್ಯಪ್ಪ (ಅಕ್ಕ ಲಿಂಗೈಕ್ಯ ಶರಣೆ ಸಾವಿತ್ರಮ್ಮನವರ ಸ್ಮರಣಾರ್ಥ)	೧೦೦೧-೦೦
೧೨.	ಬಿ. ಇ. ಹನುಮಂತಯ್ಯಶೆಟ್ಟಿ, ಮರ್ಚೆಂಟ್	೫೦೧ -೦೦
೧೩.	ಎಂ. ಮಲ್ಲಯ್ಯಶೆಟ್ಟಿ, ಮರ್ಚೆಂಟ್	೫೦೧-೦೦
೧೪.	ವಿ. ಕುಮಾರಸ್ವಾಮಿ, ವೆಂಕಟೇಶ್ವರ ರೈಸ್‌ಮಿಲ್	೧೦೦೧-೦೦
೧೫.	ಜಿ. ರಾಮಣ್ಣ	೫೦೧-೦೦
೧೬.	ವಸಂತ, ಮ್ಯಾನೇಜರ್ ಕೊಠಾರಿ ಷುಗರ್ ಫ್ಯಾಕ್ಟರಿ ವತಿಯಿಂದ	೫೦೧-೦೦

ಮೇಲಿನ ಶರಣರಲ್ಲದೆ ಇನ್ನೂ ಅನೇಕರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮ ಭಕ್ತಿ ಶಕ್ತ್ಯಾನುಸಾರ ಕೊಟ್ಟ ಕೊಡುಗೆಂಬ ಪ್ರತಿ ಅಂಶವೂ ಸಾರ್ಥಕತೆಗೆ ಸಲ್ಲುತ್ತದೆಂಬ ಭರವಸೆ ನೀಡಿ, ನಿಮ್ಮ ಕೊಡುಗೆಯನ್ನು ಅತ್ಯಂತ ಕೃತಜ್ಞತೆಯಿಂದ ವಿಶ್ವಾಸ ಪೂರ್ವಕವಾಗಿ ಸ್ವೀಕರಿಸಿ, ವಿಶ್ವಗುರು, ಮಂತ್ರ ಪುರುಷ ಬಸವೇಶ್ವರರು ಸರ್ವರಿಗೂ ಆಯುರಾರೋಗ್ಯಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹೃತ್ಪೂರ್ವಕವಾಗಿ ಹರಸುವೆವು.

ಚೇರ್ಮೆನ್
ವಿಶ್ವಕಲ್ಯಾಣ ಮಿಷನ್, ಬೆಂಗಳೂರು-೧೦

ಪೂಜ್ಯ ಮಾತಾಜಿಯವರ ಆಗಮನ

ಪೂಜ್ಯ ಮಾತಾಜಿಯವರು ಶಿವರಾತ್ರಿಯ ಕಾರ್ಯಕ್ರಮ ಹಾಗೂ ಹುಟ್ಟುಹಬ್ಬವನ್ನು ನ್ಯೂಯಾರ್ಕ್‌ನಗರದಲ್ಲಿ ಅಮೇರಿಕಾ ಸದ್ಭಕ್ತರ ಅಪೇಕ್ಷೆಯ ಮೇರೆಗೆ ಮುಗಿಸಿಕೊಂಡು ತಾಯ್ನಾಡಿಗೆ ಮರಳಲಿರುವರು. ಹಾಗೆಯೇ ಬರುವಾಗ ಲಂಡನ್ನಿನಲ್ಲಿ ಒಂದು ವಾರ ಇದ್ದು ಅಲ್ಲಿನ ಸದ್ಭಕ್ತರನ್ನು ಸಂದರ್ಶಿಸಿ ಈ ತಿಂಗಳ ಕೊನೆಯ ವಾರದಲ್ಲಿ ಅಂದರೆ ದಿನಾಂಕ 25-26 ರಂದು ಮಾತಾಜಿಯವರು ಬೆಂಗಳೂರಿಗೆ ಆಗಮಿಸುವರು. ದರ್ಶನ ಪಡೆಯಲಿಚ್ಛಿಸಿ ಪತ್ರ ಬರೆದಿರುವ ಅನೇಕ ಸದ್ಭಕ್ತರು ದಿನಾಂಕ 26ರ ನಂತರ ಬಸವ ಮಂಟಪಕ್ಕೆ ಬಂದು ಮಾತೆಯವರ ದರ್ಶನ ಪಡೆಯಬಹುದೆಂದು ತಿಳಿಸಲಾಗಿದೆ.

ಮಾತಾಜಿಯವರಿಗೆ ಸತ್ಕಾರ ಸಮಾರಂಭ

ಪೂಜ್ಯ ಮಾತಾಜಿಯವರು ಸಿರಿಯ ನಾಡಿನಿಂದ ಬಸವ ಬೀಡಿಗೆ ಆಗಮಿಸಲಿದ್ದು ಈ ಶುಭ ಸಂದರ್ಭದಲ್ಲಿ ರಾಣೇಬೆನ್ನೂರು, ದಾವಣಗೆರೆ, ಹಾವೇರಿ, ಬ್ಯಾಡಗಿ ನಾಗರೀಕರ ಅಪೇಕ್ಷೆಯ ಮೇರೆಗೆ ಹಾಗೂ ಮಾತೆ ವಾಗ್ದೇವಿಯವರ ಸತ್ಸಂಕಲ್ಪದಂತೆ ಈ ತಿಂಗಳ ದಿನಾಂಕ 29 ರಂದು ಸತ್ಕಾರ ಸಮಾರಂಭ ನಡೆಯಲು ನಿಶ್ಚಯಿಸಲಾಗಿದೆ. ಸರ್ವಜನ ಭಕ್ತರು ಈ ಸತ್ಕಾರ ಕೂಟದಲ್ಲಿ ಭಾಗವಹಿಸಿ, ಮಾತೆಯವರ ದರ್ಶನ ಪಡೆದು, ಅವರ ಅಮೇರಿಕಯಾತ್ರೆಯ ಅನುಭವಗಳನ್ನು ಅವರ ಭಾಷಣದಿಂದಲೇ ಕೇಳಿ ತಿಳಿಯುವ ಈ ಸುಯೋಗವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕರು
ವಿಶ್ವ ಕಲ್ಯಾಣ ಮಿಷನ್

KALYANA KIRANA

STATEMENT ABOUT OWNERSHIP AND OTHER PARTICULARS

FORM IV

1.	Place of Publication	:	Basava Mantapa 24, Chord Road, II Block Rajajinagar Bangalore-560 010
2.	Periodicity of Publication	:	Monthly
3.	Name and Address of the Printer	:	Radhakrishna Super Printers 14, Huvadigara Lane Chickpet Cross Bangalore-560 053
	Nationality	:	Indian
4.	Publisher		Her Holiness Jagadguru Mata Mahadevi, Viswakalyana Mission Basava Mantapa, 24, Chord Road, II Block, Rajajinagar, Bangalore-560 010
	Nationality	:	Indian
5.	Editor	:	Her Holiness Jagadguru Mata Mahadevi
	Nationality	:	Indian
6.	Name and Addresses of Individuals, who own the news paper and partner	:	Chairman Viswakalyana Mission Bangalore-560 010

I, H. H. Jagadguru Mata Mahadevi, hereby declare that the particulars given above are true to the best of my knowledge and belief.

Date 1-3-1981

H. H. Jagadguru Mathe Mahadevi
Publisher & Editor

ಕಿರಿಯ ವಯಸ್ಸಿನಲ್ಲಿ ಹಿರಿಯ ಗುರಿ



'ಸು ಜ್ಞಾ ನಿ'
ಪೂಜ್ಯ ಮಾತೆ
ವಾಗ್ದೇವಿಯವರಿಗೆ,
ಭಕ್ತರ ನಮನ

ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಪೀಠಾಧ್ಯಕ್ಷಿಣಿಯರು ಹಾಗೂ
ಬೆಂಗಳೂರು ವಿಶ್ವಕಲ್ಯಾಣ ಮಿಶನ್ ಸಂಸ್ಥೆಯ ಸಂಸ್ಥಾಪಕರೂ ಆದ
ಪರಮ ಪೂಜ್ಯ ಮಾತೆ ಮಹಾದೇವಿಯವರ
ಹಾಗೂ ಅಪೂರ್ವ ವಾಂಗ್ಮಯಿಗಳೂ, ಪ್ರತಿಭಾನ್ವಿತ ಪ್ರವಚನಕಾರರು ಆಗಿರುವ
ಪರಮ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳವರ
ಕರಕಮಲ ಸಂಜಾತರಾದ
ಪೂಜ್ಯ ಮಾತೆ ವಾಗ್ದೇವಿಯವರ
ಪಾದ ಪದ್ಮಂಗಳಲ್ಲಿ ಬ್ಯಾಡಗಿ ಹಾಗೂ ಸುತ್ತಲಿನ ಭಕ್ತ ವೃಂದವು
ತ್ರಿಕರಣಪೂರ್ವಕ ಅರ್ಪಿಸುವ

ಸನ್ಮಾನ ಪತ್ರವು

ಪೂಜ್ಯ ಮಾತೆ ವಾಗ್ದೇವಿಯವರೇ,

ಪ್ರಪಂಚದ ಇತಿಹಾಸದಲ್ಲಿ ಪ್ರಪ್ರಥಮ ಮಹಿಳಾ ಜಗದ್ಗುರುಗಳಾಗಿರುವ ಪರಮ ಪೂಜ್ಯ ಮಾತೆ **ಮಹಾದೇವಿಯವರ** ವಿಶ್ವ ಮಾನ್ಯ ಶರಣ ತತ್ವಗಳ ಪ್ರಚಾರದ

ಪ್ರತಿಭಾನ್ವಿತ ಪ್ರವಚನಕ್ಕೆ ತಾವು ಮನ ಸೋತು, ಅವರ ಅಗಾಧವಾದ ಜ್ಞಾನ ಸುಧೆಯನ್ನು ಸವಿದು ಪರಿಶುದ್ಧ ಆಚಾರ ವಿಚಾರಗಳೆಂಬ ತಮ್ಮ ಪಕ್ಕಗಳನ್ನು ಪುಷ್ಟಿಗೊಳಿಸಿಕೊಂಡು ಭಾರತೀಯ ಅಧ್ಯಾತ್ಮ ಮೇರು ಪರ್ವತದ ಉತ್ತುಂಗ ಶಿಖರಕ್ಕೆ ಹಾರುವ ತುಂಬು ಹಂಬಲದಿಂದ ಅವರನ್ನು ತಾವು ಗುರುವಾಗಿ ಸ್ವೀಕರಿಸಿ, ಪರಮ ಗುರು **ಲಿಂಗಾನಂದ ಸ್ವಾಮಿಗಳ** ಪ್ರತಿಭಾನ್ವಿತ ಮಾರ್ಗದರ್ಶನದಲ್ಲಿ, ತಮ್ಮ ಎಳೆಯ ವಯಸ್ಸಿನಲ್ಲಿಯೇ ವಿಶ್ವಧರ್ಮ ತತ್ವಗಳನ್ನು ಸಂಪೂರ್ಣವಾಗಿ ಜೀರ್ಣಿಸಿಕೊಂಡು. "**ಪೂಜ್ಯ ವಾಗ್ದೇವಿ**" ಎಂಬ ಅಧ್ಯಾತ್ಮಿಕ ನೂತನ ಅಭಿದಾನದೊಂದಿಗೆ **ಜಂಗಮ ದೀಕ್ಷೆ** ಪಡೆದು, ವಿಶ್ವಧರ್ಮ ತತ್ವ ಪ್ರಚಾರದ ಕೈಂಕರ್ಯವನ್ನು ಹೊತ್ತು ತಾವು ಹಗಲಿರಳು ಶ್ರಮಿಸುತ್ತಿರುವುದು ನಮ್ಮ ನಾಡಿನ ಭಾಗ್ಯವೆಂದೇ ಭಾವಿಸುತ್ತೇವೆ. ಈ ಮೊದಲು ವಿಶ್ವಗುರು ಬಸವಣ್ಣನ ಬೀಡಾದ ಕಲ್ಯಾಣ ನಾಡಿನ **ಔರಾದಪುರದಲ್ಲಿ** ಪ್ರಪ್ರಥಮವಾಗಿ ನಂತರ ಮರಿ ಕಲ್ಯಾಣವಾದ **ಹಾವೇರಿ** ಪಟ್ಟಣದಲ್ಲಿ ತಮ್ಮ ಅಮೋಘವಾದ **ವಿಶ್ವಮಾನ್ಯ ಶರಣತತ್ವ** ಪ್ರಚಾರದ ಪ್ರವಚನಗಳನ್ನು ಬಹು ಯಶಸ್ವಿಯಾಗಿ ನಡೆಯಿಸಿ, ಜನ ಜೀವನದ ಸುತ್ತಲು ದಟ್ಟವಾಗಿ ಅಂಧಕಾರದಂತೆ ಕವಿದು, ಅವರನ್ನು ಅಧೋಗತಿಗೆ ಎಳೆಯುವ ಅನಿಷ್ಠ ಸಂಪ್ರದಾಯಗಳ, ಮೂಢ ನಂಬಿಕೆಗಳ ಹಾಗೂ ಕಂದಾಚಾರಗಳ ವಿರುದ್ಧ ಪಾಮರ ಪಂಡಿತರನ್ನು, ಬಡವ ಬಲ್ಲಿದರನ್ನು ದಿಟ್ಟತನದಿಂದ ಬಡಿದು ಎಚ್ಚರಿಸಿ, ಮನುಕುಲೋದ್ಧಾರಕ್ಕಾಗಿ ಅಗತ್ಯವಿರುವ **ವಿಶ್ವಧರ್ಮ** ತತ್ವಾಮೃತವನ್ನು ಜನತೆಯ ಮೈಮನ ದುಂಬುವಂತೆ ಉಣಬಡಿಸಿ, ಅವರಿಗೆ ನಿತ್ಯ ಸತ್ಯ ಶುದ್ಧ ಸುಖ ಜೀವನವನ್ನು ಹಾಸು ಹೊಕ್ಕಾಗಿ ಕರುಣಿಸಿದ ಮಹಾ ಕೀರ್ತಿಯ ಶಿಖರವನ್ನು ತಾವು ಏರಿ ಮನುಕುಲದ ಮನಸೆಳೆಯುವಂತೆ ವಿಜಯ ಪತಾಕೆಯನ್ನು ಹಾರಿಸಿದ ತಮ್ಮನ್ನು ನಾವು ನಿತ್ಯ ನೆನೆಯಲು ಹರುಷ ಪುಲಕಿತರಾಗಿದ್ದೇವೆ.

ತಮ್ಮ ಅಮರವಾಣಿಯ ಸುಧೆಯನ್ನು ಸವಿಯುವ ಹಿರಿಯಾಶೆಯ ಹಂಬಲದಿಂದ ಇಲ್ಲಿಯ ಜನತೆಯು ತಮ್ಮಲ್ಲಿ ನಿವೇದಿಸಿಕೊಂಡ ಅವರ ದೀನ ಕರೆಗೆ ತಾವು ಕರುಣೆಯಿಂದ ಮನ್ನಣೆ ನೀಡಿ **ರಾಷ್ಟ್ರೀಯ ಮಟ್ಟದ ಮೆಣಸಿನ ಕಾಯಿಯ ವ್ಯಾಪಾರಿ ಕೇಂದ್ರವಾದ** ಈ ನಗರದಲ್ಲಿ ಕಳೆದ ೪೭ ದಿವಸಗಳಿಂದ ಅವ್ಯಾಹತವಾಗಿ ತಾವು ನಡೆಸಿದ **ವಿಶ್ವಧರ್ಮ** ತತ್ವ ಪ್ರಚಾರ ಸುಧೆಯಿಂದ ಇಲ್ಲಿಯ ಜನ ಜೀವನದ ಕೊಳೆಯ ಘಾಟವನ್ನು ಶಮನ ಗೊಳಿಸಿದ ತಮ್ಮ ಕಷ್ಟದ ಹೊರೆಯ ಮಹದುಪಕಾರಕ್ಕೆ ನಾವು ಚಿರಋಣಿಯಾಗಿದ್ದೇವೆ. ಎಂದು ತಿಳಿಸಲು ಅಭಿಮಾನಪಡುತ್ತೇವೆ. ಅಲ್ಪಮಟ್ಟಿಗಾದರೂ ಈ ಅಮೋಘವಾದ ಜ್ಞಾನ ಸುಧೆಯ ಋಣ ವಿಮೋಚನೆಗಾಗಿ "**ಸುಜ್ಞಾನಿ**" ಎಂಬ ಬಿರುದಾಂಕಿತದಿಂದ ತಾವು ಜನಕೋಟಿಯ ಸ್ಮೃತಿಪಟಲದಲ್ಲಿ ನಿರಂತರವಾಗಿ

(೬೪ನೇ ಪುಟವನ್ನು ನೋಡಿ)

ಚಿಂತನ

—ಜಗದ್ಗುರು ಮಾತೆ ಮಹಾದೇವಿ

ವಿದೇಶಗಳಲ್ಲಿರುವ ಭಾರತೀಯರು ಭಾರತಕ್ಕೆ ಬರಬಾರದೇಕೆ ?

ನಮ್ಮ ದೇಶದ ವಿದ್ಯಾವಂತರನೇಕರು ವಿದೇಶಗಳ ವಿವಿಧ ಕ್ಷೇತ್ರಗಳಲ್ಲಿ ಕಾರ್ಯೋನ್ಮುಖರಾಗಿರುವರಷ್ಟೆ. ಅವರುಗಳು ವಿದೇಶಗಳ ಸೌಕರ್ಯಕ್ಕೆ ಮಾರು ಹೋಗಿ ಅಲ್ಲೇ ನೆಲಸಿ ಬಿಡುವರು. ವಾಪಸ್ಸು ಮಾತೃಭೂಮಿಗೆ ಮರಳಿ ಬಂದು ಸೇವೆ ಮಾಡರು. ಒಬ್ಬೊಬ್ಬ ಡಾಕ್ಟರನ್ನು, ಇಂಜಿನಿಯರನ್ನು ತಯಾರಿಸಲು ಸರಕಾರಕ್ಕೆ ಸಾಕಷ್ಟು ವ್ಯಯವಾಗುತ್ತದೆ. ಅವರು ಭಾರತದಲ್ಲಿ ಸಾಕಷ್ಟು ವ್ಯಯಿಸಿ ಓದಿ, ಅಲ್ಲಿಗೆ ಸೇವೆ ಮಾಡದೆ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತ, ಹಣ ಸಂಪಾದಿಸುತ್ತಾರೆ ಎಂದು ಬಹುಪಾಲು ಜನ ಟೀಕಿಸುತ್ತಾರೆ ಭಾರತದಲ್ಲಿ. ಸ್ವತಃ ನಾನೂ ಅದೇ ಅಭಿಪ್ರಾಯವನ್ನೇ ತಾಳಿದ್ದೆ. ಆದರೆ ಇಲ್ಲಿಗೆ ಬಂದ ನಂತರ ಹಲವರನ್ನು ಸಂದರ್ಶಿಸಿದಾಗ ಅನೇಕ ವಿಚಾರಗಳು ಸ್ಪಷ್ಟಗೊಂಡವು.

ಕೆಲವರು ಮಾತ್ರ ಈ ದೇಶ ಭಾಷೆಗಳ ವಿಪರೀತ ಮೋಹ ಬೆಳೆಸಿಕೊಳ್ಳುತ್ತಾರೆ. ಸ್ವಲ್ಪ ಕಟ್ಟುನಿಟ್ಟಿನ ಸಂಪ್ರದಾಯ ಬದ್ಧ ಸಮಾಜದಲ್ಲಿ ಭಾರತದಲ್ಲಿ ಬೆಳೆಯುವುದರಿಂದ ತಾರುಣ್ಯದ ಭರದಲ್ಲಿ ಈ ದೇಶದ ಸ್ವಚ್ಛಂದ ಜೀವನ ತುಂಬಾ ಹಿಡಿಸಿಬಿಟ್ಟು, ಸುಳಿಯಲ್ಲಿ ಸಿಕ್ಕಂತೆ ಭರ್ರನೆ ಮುಳುಗುವರು. ಅಂಥವರೂ ಸಹ ತಮ್ಮ ಮಕ್ಕಳು ಬೆಳೆದು ನಿಂತಾಗ, ಉದ್ಧಟರಾಗಿ ವರ್ತಿಸ ತೊಡಗಿದಾಗ ಭಾರತೀಯ ಸಂಸ್ಕೃತಿಯಲ್ಲಿ ಬೆಳೆಸದಿದ್ದುದಕ್ಕೆ ವಿಪರೀತ ಪಶ್ಚಾತ್ತಾಪ ಪಡುವರು. ತಡವಾದರೂ ಪರಿತಾಪ ಪಡುವರು. ಬಹುಪಾಲು ಜನ ಮಾತ್ರ ಅಷ್ಟೊಂದು ಇಲ್ಲಿಯ ಸ್ವಚ್ಛಂದತೆಗೆ ಮಾರು ಹೋಗಿಲ್ಲ. ಇನ್ನು ಕೆಲವರು ಇಲ್ಲಿ ಸುಲಭದ, ಆರಾಮದ ಬದುಕಾದ್ದರಿಂದ, ಮುಖ್ಯವಾಗಿ ಹೆಣ್ಣು ಮಕ್ಕಳು ಭಾರತಕ್ಕೆ ಮರಳಲು ಇಚ್ಛಿಸರು. ಕೆಲವರು ಹೆಚ್ಚಿನ ಕೆಲಸದಲ್ಲಿ ತಲ್ಲೀನರಾಗಿರುತ್ತಾರೆ. ಭಾರತದಲ್ಲಿ ಗಂಡಸರ ಮೇಲೆ ಬಹುಪಾಲಿನ ಹೊಣೆಗಾರಿಕೆ ಬಿಟ್ಟುಕೊಟ್ಟು ಹೆಣ್ಣು ಮಕ್ಕಳು ಗೃಹಚಟುವಟಿಕೆಗಳಲ್ಲಿ ಸೀಮಿತರಾಗಿರುತ್ತಾರೆ. (ಈಗ ಅಲ್ಲೂ ಉಭಯತರೂ ದುಡಿಯುವುದು; ಸ್ತ್ರೀಯರೇ ಖರೀದಿಸುವ ಕೆಲಸಮಾಡುವುದು ಜಾಸ್ತಿಯಾಗಿದೆ)ಆದರೆ ಇಲ್ಲಿ ಡ್ರೈವಿಂಗ್ ಕಲಿತು ಮಕ್ಕಳನ್ನು

ಶಾಲೆ-ಕಾಲೇಜುಗಳಿಗೆ ಬಿಟ್ಟು ಬರುವುದರಿಂದ ಹಿಡಿದು ಬಹುಪಾಲು ಖರೀದಿ ಕೆಲಸ ಸಹ ಸ್ತ್ರೀಯರೇ ನಿರ್ವಹಿಸುವರು. ಹೀಗಾಗಿ ನೌಕರಿ ಮಾಡುವ ಗೃಹಿಣಿಯರೇ ಅಲ್ಲದೆ, ನೌಕರಿ ಮಾಡದವರೂ ಸಹ ಕಾರ್ಯನಿರತರಾಗಿಯೇ ಇರುತ್ತಾರೆ. ಬಿಡುವಿಲ್ಲದ ಚಟವಟಿಕೆಯಿಂದ ಕೂಡಿದ್ದರೂ ಬದುಕು ಶ್ರಮದಾಯಕವಲ್ಲ. ಯಂತ್ರಗಳ ಸಹಾಯದಿಂದ ತ್ವರಿತವಾಗಿ ಎಲ್ಲ ಕೆಲಸಗಳನ್ನು ನಿರ್ವಹಿಸಬಲ್ಲರು. ಬಟ್ಟೆ ತೊಳೆಯುವ ಯಂತ್ರಗಳಿಲ್ಲಿದ್ದು, ಉತ್ಕೃಷ್ಟ ಅಡಿಗೆಯ ಸಲಕರಣೆಗಳಿದ್ದು, ಆಡುತ್ತ ಆಡುತ್ತ ಹೆಂಗಳೆಯರು ಕೆಲಸ ಮಾಡಿಕೊಳ್ಳುವರು. ಭಾರತದಲ್ಲಿ ಮೇಲ್ವರ್ಗದ ಮನೆಯವರಲ್ಲಿ ಪ್ರತಿನಿತ್ಯ ಕಸಗೂಡಿಸಿ, ನೀರು ಚಿಮುಕಿಸುವುದು ದಿನದ ಮೊದಲ ಕರ್ತವ್ಯ. ಒಂದು ದಿನ ಕಸ ಗುಡಿಸಿರದಿದ್ದರೆ, ನೀರು ಸಿಂಪಡಿಸಿ ರಂಗವಲ್ಲಿ ಹಾಕಿರದಿದ್ದರೆ ಮನೆಯೊಳಗೆ ಮನೆಯೊಡತಿ ಇಲ್ಲವೆಂದೋ, ಇದ್ದರೂ ಇದ್ದವಳು ಸೋಮಾರಿ ಇರಬೇಕೆಂದು ನಿರ್ಧರಿಸುವೆವು. ಇಲ್ಲಿ ನಿತ್ಯ ಗುಡಿಸುವ ಸಮಸ್ಯೆಯೇ ಇಲ್ಲ. ನೆಲಕ್ಕೆಲ್ಲ ಕಾರ್ಪೆಟ್ಟು ಅವರಿಗೆ ವಾರಕ್ಕೊಮ್ಮೆ ವ್ಯಾಕ್ಯೂಮ್ ಕ್ಲೀನಿಂಗ್, ಜೀವನದಲ್ಲಿ ಒಗೆತವನ್ನು ಕಾರ್ಪೆಟ್ಸ್ ಕಂಡರಿಯವು. ಹೀಗೆ ಜೀವನದ ವಿಧಾನವೆ ಬೇರೆ. ತಯಾರಾದ ಪದಾರ್ಥಗಳು ಸಿಗುವುದರಿಂದ ಕೇರುವ, ತೂರುವ, ದವಸ ಧಾನ್ಯ ಸ್ವಚ್ಛಗೊಳಿಸುವ ಪ್ರಶ್ನೆಯೇ ಇಲ್ಲ. ಇಲ್ಲಿಯ ಜೀವನಕ್ಕೆ ಹೊಂದಿಕೊಂಡ ಹೆಣ್ಣು ಮಕ್ಕಳು ಅಲ್ಲಿಯ ಬದುಕಿನ ಬಗೆ ಹೊಂದಿಕೊಳ್ಳುವುದು ಕಷ್ಟ.

ಇಷ್ಟಾದರೂ ಅನೇಕ ತಾಯಿತಂದೆಯರು ಭಾರತಕ್ಕೆ ಮರಳಲು ಕಾತುರರಾಗಿರುತ್ತಾರೆ. ಮಕ್ಕಳು ಬೆಳೆದಂತೆಲ್ಲ ಅವರ ಚಿಂತೆ ವೃದ್ಧಿಯಾಗುತ್ತದೆ. ಭಾರತೀಯರ ಮಕ್ಕಳು ಮಾತಾಪಿತೃಗಳ ಪ್ರೇಮದ ಕವಚದಲ್ಲಿಯೇ ಇಲ್ಲಿ ಹೆಚ್ಚಾಗಿ ಬೆಳೆಯುವುದರಿಂದ, ಅಷ್ಟೊಂದು ಹೊರಗಿನ ವಾತಾವರಣದ ಪ್ರಭಾವಕ್ಕೆ ಬಲಿಯಾಗದಿದ್ದರೂ ತಾಯಿತಂದೆಗಳಿಗೆ ಅವ್ಯಕ್ತ ಭೀತಿ. ಅತ್ಯಂತ ಸಣ್ಣ ವಯಸ್ಸಿನಲ್ಲೇ ಅಮೆರಿಕಾದ ಬಾಲಕ ಬಾಲಕಿಯರು ಅನೇಕ ದುಶ್ಚಟಗಳಿಗೆ, ಧೂಮ್ರಪಾನ, ಮಾದಕ ಪೇಯಸೇವನೆ, ಮತ್ತು ಬರಿಸುವ ಅಫೀಮು ಸೇವನೆ, ಉನ್ಮತ್ತಗೊಳಿಸುವ ಔಷಧಿಗಳ ಸೇವನೆ ಮುಂತಾದ್ದಕ್ಕೆ ಬಲಿಯಾಗುವುದರಿಂದ ತಮ್ಮ ಮಕ್ಕಳೂ ಇಲ್ಲಿ ಎಲ್ಲಿ ಈಡಾಗುವರೋ ಎಂದು ತಾಯಿತಂದೆ ತುಂಬಾ ಚಿಂತಿಸುವುದನ್ನು ಕಾಣುತ್ತೇವೆ. ಭಾರತೀಯರ ಆಚಾರ ವಿಚಾರಗಳಿಗೆ ಹೊರತಾಗಿ ಮಕ್ಕಳು ಬಾಳುವರಲ್ಲ ಎಂದು ಮಕ್ಕಳಿಗಾಗಿ ಭಾರತಕ್ಕೆ ಬಂದು ಬಿಡಬೇಕು ಎಂದುಕೊಳ್ಳುತ್ತಾರೆ. ಆದರೆ ಬರಲಾರದೆ ಒದ್ದಾಡುತ್ತಾರೆ. ಕಾರಣಗಳು ಹಲವಾರು.

1. "ಇಂಗ್ಲೆಂಡು ಅಮೆರಿಕಾದಂತಹ ದೇಶಗಳಿಗೆ ಬಂದ ಮೇಲೆ ಇಲ್ಲಿಯ ಪ್ರಾಮಾಣಿಕತೆ, ಸರಳತೆ ನೋಡಿ, ಭಾರತಕ್ಕೆ ಬಂದು ಅಪ್ರಮಾಣಿಕರಾಗಿ ಬದುಕಲು ಕಷ್ಟವಾಗುತ್ತೆ. ಯಾವುದೊಂದು ಕೆಲಸವಾಗಬೇಕಾದರೂ ಇಲ್ಲಿ ಒಂದು ಅರ್ಜಿಕೊಟ್ಟರೆ ಸಾಕು. ಅಲ್ಲಿ ಹಣ, ವ್ಯಕ್ತಿಪ್ರಭಾವದ ಕೈವಾಡ ವಿಪರೀತ. ಅಂಥದನ್ನು ಮಾಡಲು ಅಸಹ್ಯವಾಗುತ್ತದೆ. ಇಲ್ಲಿ ಎಂಥವನಿಗೂ ಒಂದು ಮನೆಕೊಳ್ಳಲು ಸಾಧ್ಯ. ನಂತರ ಕಂತಿನ ಮೇಲೆ ಹಣ ತುಂಬಬಹುದು. ಆದರೆ ಅಲ್ಲಿ ಒಂದು ಸೈಟುಕೊಳ್ಳಲೇ ಪರದಾಡ ಬೇಕು. ಎಷ್ಟೋ ಜನ ಅರ್ಜಿ ಹಾಕಿಕೊಂಡಿದ್ದೇವೆ. ಲಂಚ ಕೊಡಲಾರದ್ದಕ್ಕಾಗಿ ಇನ್ನೂ ಸೈಟಿನ ವಿತರಣೆಯಾಗಿಲ್ಲ. ನಮಗೆ ಲಂಚ ಕೊಡಲು ಮನಸ್ಸಿಲ್ಲ" ಎಂದು ನೊಂದು ನುಡಿದರು ಒಬ್ಬರು.

2. "ಮಾತೃದೇಶಕ್ಕೆ ಮರಳಿಬಿಡಬೇಕು. ನಮ್ಮ ಸೇವೆ-ಶಕ್ತಿ ಅಲ್ಲಿಗೆ ಉಪ ಯೋಗವಾಗಬೇಕು ಎಂದುಕೊಂಡು ಒಂದು ನೌಕರಿ ದೊರಕಿಸಿಕೊಳ್ಳಲು ಬರುತ್ತೇವೆ. ನಮ್ಮ ಯೋಗ್ಯತೆಗೆ ತಕ್ಕ ನೌಕರಿ ದೊರೆಯದು. ಅದಕ್ಕೂ ಹಣ, ಅವರಿವರ ಪ್ರಭಾವ, ರಾಜಕೀಯ ಒತ್ತಡಬೇಕು. ಇಂಥದನ್ನು ಬಳಸಿಕೊಳ್ಳಲು ಅಸಹ್ಯವಾಗು ತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ದೊರೆಯುವಷ್ಟು ಸೌಲಭ್ಯ ಸಿಗದಿದ್ದರಷ್ಟೆ, ಕೊಂಚ ಮಟ್ಟಿನ ಸೌಕರ್ಯ ಮಾಡಿಕೊಟ್ಟರೂ ನಮ್ಮ ಸೇವೆ ಸಲ್ಲಿಸಲು ನಾವು ಉತ್ಸುಕರು. ಇಲ್ಲಿ ನಮಗೆ ಹಣ ಇದೆ, ಒಳ್ಳೆಯ ನೌಕರಿ ಇದೆ. ಆದರೂ ಬಂಧುಬಳಗ, ಸಂಸ್ಕೃತಿ-ಧರ್ಮಗಳಿಂದ ದೂರವಿರುವ ಕೊರತೆ ಇದೆ. ಸ್ವಲ್ಪೇ ಸೌಕರ್ಯ ಸಿಕ್ಕರೂ ಸಾಕು ಅಲ್ಲಿ ನಾವು ಹೆಚ್ಚು ಸುಖಿಗಳಾಗುತ್ತೇವೆ". ಎಂದರು ಮತ್ತೊಬ್ಬರು.

3. ಇಲ್ಲಿ ಒಂದು ದೃಷ್ಟಿಯಿಂದ ಮಾನಸಿಕ ಒತ್ತಡವಿದ್ದರೂ ಇನ್ನೊಂದು ದೃಷ್ಟಿಯಿಂದ ಇಲ್ಲ. ಹಣವಿದ್ದರೆ ಸೀದಾ ಹೋಗಿ ಸಕ್ಕರೆ, ಪಡಿಪದಾರ್ಥ ಮುಂತಾದ ಜೀವನಾವಶ್ಯಕ ವಸ್ತುಗಳನ್ನೆಲ್ಲ ಕೊಳ್ಳಬಹುದು. ಅಲ್ಲಿ ಕೆಲಸ ಮಾಡಿ ದಣಿದು ಮನೆಗೆ ಬಂದರೆ ಸಕ್ಕರೆ ಇಲ್ಲ, ಸೀಮೆಎಣ್ಣೆ ಇಲ್ಲ, ರವೆ ಇಲ್ಲ ಎಂದು ಹೆಂಡತಿ ಪರದಾಡು ವುದು ಕಂಡಾಗ ಜೀವನ ಬಹಳ ಭಯಾನಕ ಎನ್ನಿಸುತ್ತದೆ. ಏಕೆಂದರೆ ಅಂಥ ಸಣ್ಣ ಸಣ್ಣ ವಸ್ತುಗಳಿಗೆ ಪರದಾಡುವ ಪ್ರಶ್ನೆ ಇಲ್ಲಿಲ್ಲ. ಇಲ್ಲ ಕಲಬೆರಕೆ ಕಳ್ಳಸಂತೆಗೆ ಆಸ್ಪದವೇ ಇಲ್ಲ. ಒಂದು ಲೋಟ ಶುದ್ಧ ಹಾಲೂ ನಮ್ಮ ದೇಶದಲ್ಲಿ ದೊರೆಯದಲ್ಲ ಎಂದು ವ್ಯಥೆಯಾಗುತ್ತದೆ. ಇಲ್ಲಿ ಒಂದು ತರಹದ ಸಾದಾಸೀದಾ ಸರಳ ಜೀವನ ಬಾಳಿ, ಅಲ್ಲಿ ಹೆಜ್ಜೆ ಹೆಜ್ಜೆಗೂ ಇಂಥ ಕಿರಿಕಿರಿ ಅನುಭವಿಸುವುದು ಕಷ್ಟಸಾಧ್ಯ" ಎಂದರು ಮತ್ತೊಬ್ಬರು.

4. "ಇನ್ನು ಮಕ್ಕಳ ಶಿಕ್ಷಣ. ಇಲ್ಲಿ ಯಾರ ಶಿಫಾರಸ್ಸು ಇಲ್ಲದೆ, ಡೊನೇಷನ್ ಅವಾಂತರವಿಲ್ಲದೆ ಪ್ರತಿಭೆ, ಅಂಕಗಳ ಮೇಲೆ ಮಕ್ಕಳು ಶಿಕ್ಷಣ ಪಡೆಯುವರು. ಆದರೆ ಅಲ್ಲಿ ಪ್ರಾಮಾಣಿಕವಾಗಿ ಉದ್ಯೋಗ ಮಾಡುವ ವ್ಯಕ್ತಿ ಸಿಕ್ಕಾಪಟ್ಟೆ ಗಳಿಸಲಾರ, ಸಿಕ್ಕಾಪಟ್ಟೆ ಹಣ ಕೊಡಲಾರ. ಧರ್ಮ-ಸಂಸ್ಕೃತಿಗಳು ಏನಾದರಾಗಲೀ ಮಕ್ಕಳು ಸೂಕ್ತ ಶಿಕ್ಷಣ ಪಡೆದರೆ ಸಾಕು ಎನ್ನಿಸುತ್ತದೆ.

5. ಹೀಗಾಗಿ ಎಷ್ಟೋ ಬಾರಿ ಹೋಗಿ, ಅಲ್ಲಿಯ ವಾತಾವರಣಕ್ಕೆ ಹೊಂದಿ ಕೊಳ್ಳಲಾರದೆ ಒಂದೆರಡು ತಿಂಗಳು ಇದ್ದು, ವಾಪಸ್ಸು ಬರುವುದೇ ಆಗುತ್ತದೆ".

ಹೀಗೆ ಬಹುಪಾಲು ಜನ ಅಭಿಪ್ರಾಯಪಟ್ಟರು. ಓರ್ವ ಗೃಹಿಣಿ ಹೇಳು ತ್ತಿದ್ದಳು. "ನಮ್ಮದು ಬೇರೊಂದು ಬಗೆಯ ಸಮಸ್ಯೆ. ಸಿಗರೇಟು ಚಟ ದಿನಗಳೆದಂತೆ ವೃದ್ಧಿಯಾಗಿ ಬಿಡಲಸಾಧ್ಯವಾಗುವಂತೆ, ಈ ದೇಶದಲ್ಲಿ ಜಾಸ್ತಿ ವರ್ಷಗಳ ಕಾಲ ಇದ್ದಷ್ಟೂ ಇಲ್ಲಿಂದ ಹೊರಡುವುದು ಕಷ್ಟಕರವಾಗುತ್ತದೆ. ಇಲ್ಲಿಯ ನಮ್ಮ ಬದುಕಿನಲ್ಲಿ ಏನೋ ಕೊರತೆ ಇದೆ ಎನ್ನಿಸುತ್ತದೆ. ಆದರೂ ಅಲ್ಲಿಗೆ ಬಂದರೆ ಎದುರಿಸಬೇಕಾದ ಕಷ್ಟ ಹಲವು. ಮನೆಗೆಲಸಕ್ಕೆ ಜನ ಸಿಗರು. ಸಿಕ್ಕರೂ ಪ್ರಾಮಾಣಿಕವಾಗಿ ಇರರು. ಇಲ್ಲಿ ಜನ ಸಿಗದಿದ್ದರೂ ಯಂತ್ರಗಳಿವೆ. ಹಣ ಜಾಸ್ತಿ ತೆತ್ತರೆ ಕೆಲಸದ ಆಳುಗಳು ಸಿಗುತ್ತಾರೆ. ಅವರು ಅತ್ಯಂತ ಶಿಸ್ತಿನಿಂದ ಕೆಲಸ ಮಾಡಿಹೋಗುತ್ತಾರೆ. ಪತಿ-ಪತ್ನಿಯರಿಬ್ಬರೂ ದುಡಿಯುತ್ತಿದ್ದರೆ ಮಕ್ಕಳನ್ನು ನೋಡಿಕೊಳ್ಳುವ ಹೆಂಗಳೆಯರ ಬಳಿ ಬಿಟ್ಟರೆ ಅವರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಬೇರೆಯವರ ಮಕ್ಕಳು ಎಂಬ ಭಾವ ತೋರದೆ ಅವ ರನ್ನು ನೋಡಿಕೊಂಡು, ಜೊತೆಗೆ ಪಾಠವನ್ನೂ ಕಲಿಸುತ್ತಾರೆ. (ನಿಜ, ಎರಡು ಮೂರು, ಅಥವಾ ನಾಲ್ಕಾರು ಮಕ್ಕಳನ್ನು ಬೇಬಿಸಿಟ್ಟರ್ಸ್ ಉದ್ಯೋಗ ಮಾಡುವ ಹೆಂಗಳೆಯರು ಇಲ್ಲಿ ನೋಡಿಕೊಳ್ಳುತ್ತಾರೆ. ಆದರಿಂದಾಗಿ ಅವರಿಗೆ ಉಪಜೀವನವಾಗು ತ್ತದೆ. ತಾಯಿತಂದೆ ನಿಶ್ಚಿಂತೆಯಾಗಿ ಮಕ್ಕಳನ್ನು ಬಿಟ್ಟು ಕೆಲಸಕ್ಕೆ ಹೋಗುತ್ತಾರೆ. ಬರುತ್ತಾ ಕರೆದುಕೊಂಡು ಬರುತ್ತಾರೆ. ಇಂಥ ಕಾಯಕವನ್ನು ನಮ್ಮಲ್ಲೂ ಕೆಲವರು ಮಾಡಿದರೆ ಅನೇಕ ಗೃಹಿಣಿಯರು, ವಿಧವೆಯರು, ವೃದ್ಧೆಯರು, ನಿಸ್ಸಹಾಯಕರು ತಮ್ಮ ಉಪಜೀವನದ ಮಾರ್ಗ ದೊರಕಿಸಿಕೊಳ್ಳಬಹುದು. ಆ ಸೌಲಭ್ಯ ಅಲ್ಲಿಲ್ಲ.

ಮತ್ತೊಬ್ಬರು ಹೇಳಿದರು, ಭಾರತದಲ್ಲಿ ಭಾರತೀಯರ ಸಂಸ್ಕೃತಿಯಲ್ಲಿ ಎಂಥ ಮಹತ್ತರ ಬದಲಾವಣೆಯಾಗಿದೆ ಎಂದರೆ ನಾವು ಇಷ್ಟೆಲ್ಲ ಒತ್ತಡಗಳ ಮಧ್ಯದಲ್ಲೂ ಮಾಂಸಾಹಾರ, ಮದ್ಯಪಾನ ಮಾಡದೆ ಲಕ್ಷಣವಾಗಿ ಸೀರೆಯುಟ್ಟು, ಜಡೆ ಹಾಕಿ ಕೊಂಡು, ಕುಂಕುಮವಿಟ್ಟು ಅಲಂಕರಿಸಿಕೊಳ್ಳುತ್ತೇವೆ, ಆದರೆ ವಾಪಸ್ಸು ಹೋಗಿ

ಅಲ್ಲಿಯವರನ್ನು ನೋಡಿದರೆ ತೀರಾ ಆಶ್ಚರ್ಯವಾಗುತ್ತದೆ. ಇಷ್ಟು ವರ್ಷ ವಿದೇಶಗಳಲ್ಲಿದ್ದೂ ಮಾಂಸಾಹಾರ ಮಾಡುವುದಿಲ್ಲ, ಮದ್ಯಪಾನ ಮಾಡುವುದಿಲ್ಲ ಎಂದರೆ ಅವರು ಆಶ್ಚರ್ಯ ಪಡುತ್ತಾರೆ. ವಿದೇಶದಲ್ಲಿರುವದೆಂದರೆ ಇದನ್ನೆಲ್ಲ ಕಲಿಯುವುದು ಮಾತ್ರ ಎಂದು ಭಾವಿಸುತ್ತಾರೆ. ಇಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಕೊಚ್ಚಿಕೊಂಡು ನಾವು ವಾಪಸ್ಸು ಹೋದಾಗ ಅಲ್ಲಿಯವರು ಬದಲಾಗಿರುವುದನ್ನು ನೋಡಿದರೆ ನಿಜಕ್ಕೂ ನಿರಾಶರಾಗುತ್ತೇವೆ.

ಭಾರತದ ಮತ್ತು ಭಾರತೀಯರ ಪರಿಸ್ಥಿತಿ ನಿಜಕ್ಕೂ ವಿಲಕ್ಷಣವಾಗಿದೆ. ಪಾಶ್ಚಿಮಾತ್ಯರ ಶ್ರಮದ ಜೀವನ, ಪ್ರಾಮಾಣಿಕತೆ, ಸಾಹಸಪ್ರಜ್ಞೆ, ವೈಜ್ಞಾನಿಕ ಪ್ರಗತಿ ಅವುಗಳನ್ನು ಅಳವಡಿಸಿಕೊಳ್ಳಲಿಲ್ಲ. ಭಾರತದ ಆಧ್ಯಾತ್ಮಿಕ ಸಂಪತ್ತನ್ನೂ ಶೋಧಿಸಿ ಅಳವಡಿಸಿಕೊಳ್ಳುತ್ತಲಿಲ್ಲ. ಪಾಶ್ಚಿಮಾತ್ಯ ಜೀವನದ ಕೆಲವು ವೈಚಿತ್ರ್ಯಗಳನ್ನು ಮಾತ್ರ ಅನುಕರಣೆ ಮಾಡುತ್ತಿರುವುದನ್ನು ಕಾಣುತ್ತೇವೆ. ಇದರಿಂದ ಸಮಾಜ-ರಾಷ್ಟ್ರಗಳು ವಿಚಿತ್ರ ಸಂದಿಗ್ಧತೆಯಲ್ಲಿ ಸಿಕ್ಕಿಬೀಳುತ್ತಲಿವೆ.

ವಿದೇಶಗಳಲ್ಲಿರುವ ವಿದ್ಯಾವಂತ, ಬುದ್ಧಿವಂತ, ಪ್ರತಿಭಾವಂತ ವೈದ್ಯರು, ಇಂಜಿನಿಯರು, ಪ್ರಾಧ್ಯಾಪಕರುಗಳನ್ನು ಆಕರ್ಷಿಸಿ, ಅವರ ಸೇವೆ ನಾಡಿನ ಜನರಿಗೆ ದೊರೆಯುವಂತೆ, ಅವರ ಆಧುನಿಕ ಜ್ಞಾನವು ಜನಸೇವೆ, ರಾಷ್ಟ್ರ ನಿರ್ಮಾಣಕಾರ್ಯಗಳಲ್ಲಿ ಸದುಪಯೋಗವಾಗುವಂತೆ ಸರ್ಕಾರವು ವಾತಾವರಣವನ್ನು ನಿರ್ಮಿಸಬೇಕು.

....

(೫ನೇ ಪುಟದಿಂದ ಮುಂದುವರಿದಿದೆ)

ಶೋಭಾಯಮಾನರಾಗಿರುವ, ಮಹಾಪದವಿಯನ್ನು ಲೋಕೋದ್ಧಾರಕ **ಬಸವಣ್ಣನು** ಕರುಣಿಸಲೆಂದು ಹಾರೈಸುವ ಸಾಹಸವನ್ನಲ್ಲದೆ, ನಾವು ಮತ್ತೇನನ್ನೂ ಮಾಡಲಾಗದ ಬಡವರೆಂದು ಭಾವಿಸಿಕೊಂಡಿದ್ದೇವೆ.

ತಮ್ಮ **ವಿಶ್ವಮಾನ್ಯ ಶರಣತತ್ವ ಪ್ರಚಾರ** ಕಾರ್ಯದಲ್ಲಿ ತಮ್ಮ ದಿವ್ಯ ವಾಣಿಯು, ಜನತೆಗೆ ಅವರ ಸತ್ಯ ಶುದ್ಧ ನೆಮ್ಮದಿ ಜೀವನದ ಸಂಜೀವಿನಿಯಾಗಿ, ಬಹುಕಾಲ ಬೆಳಗಿಬರಲೆಂದೂ **ಪತಿತೋದ್ಧಾರಕ ಬಸವಣ್ಣನು** ಸುಧೀರ್ಘವಾಗಿ ತಮಗೆ ಆಯುರಾರೋಗ್ಯ, ಕೀರ್ತಿ, ಸಂಪದ ಸಿದ್ಧಿಗಳನ್ನು ಕರುಣಿಸಲೆಂದು ಆತನನ್ನು ಪ್ರಾರ್ಥಿಸಿ, ಈ ಮಾನಪತ್ರವನ್ನು ತಮ್ಮ ಪವಿತ್ರ ಪಾದಾರವಿಂದಗಳಲ್ಲಿ ಈ ನಾಡಿನ ಭಕ್ತವೃಂದದ ಪರವಾಗಿ ಸಮರ್ಪಿಸುತ್ತೇವೆ.

ಬ್ಯಾಡಗಿ.

ತಮ್ಮ,

೧೨-೨-೮೧ **ಬ್ಯಾಡಗಿ ನಗರ ಹಾಗೂ ಸುತ್ತಲಿನ ಭಕ್ತ ಮಂಡಳಿ.**

ಶಾಲೆಗಳಿಗಾಗಿ "ಕಲ್ಯಾಣ ಕಿರಣ"

ಕರ್ನಾಟಕ ರಾಜ್ಯದ ವಿದ್ಯಾ ಇಲಾಖೆ ನಿರ್ದೇಶಕರು, (ಪಠ್ಯ ಪುಸ್ತಕ ಸಮಿತಿ) ಚಾಮರಾಜಪೇಟೆ, ಬೆಂಗಳೂರು ತಮ್ಮ ಪತ್ರ No, TBC-1/78-79 ದಿನಾಂಕ 18-5-79 ಮೂಲಕ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸಾಮಾಜಿಕ, ಅಧ್ಯಾತ್ಮಿಕ ಮಾಸಪತ್ರಿಕೆ "ಕಲ್ಯಾಣ ಕಿರಣ"ವನ್ನು ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ಶಿಕ್ಷಣ ಸಂಸ್ಥೆಗಳು ಮತ್ತು ಸರಕಾರಿ ಶಾಲೆಗಳು ತಮ್ಮ ವಾಚನಾಲಯಗಳಿಗಾಗಿ ಕಲ್ಯಾಣ ಕಿರಣ ಪತ್ರಿಕೆಗಳನ್ನು ತರಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ. ವಾರ್ಷಿಕ ಚಂದಾ ಹದಿನಾರು ರೂಪಾಯಿ ಇರುವುದು, ಪ್ರತಿ ತಿಂಗಳು ಒಂದನೆ ತಾರೀಖಿಗೆ ಬೆಂಗಳೂರಿನಿಂದ ಹೊರಡುವ 64 ಪುಟಗಳ ಈ ಮಾಸಪತ್ರಿಕೆ ಪೂಜ್ಯ ಮಾತೆ ಮಹಾದೇವಿಯವರ ಸಂಪಾದಕತ್ವದಲ್ಲಿ ಹೊರಡುತ್ತದೆ. ವಿಳಾಸ ; ಕಲ್ಯಾಣ ಕಿರಣ ಕಾರ್ಯಾಲಯ, 'ಬಸವ ಮಂಟಪ' ನಂ. 24, ಕಾರ್ಡ್ ರೋಡ್, ಎರಡನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10


ವ್ಯವಸ್ಥಾಪಕರು.

ಗ್ರಂಥಾಲಯಗಳಿಗಾಗಿ "ಕಲ್ಯಾಣ ಕಿರಣ"

ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಗ್ರಂಥಪಾಲಕರು ತಮ್ಮ ಪತ್ರ No. TA 2-3 NPS-55/11746/78-79 ದಿನಾಂಕ 21 - 2 - 79 ರ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ - ನಗರ ಕೇಂದ್ರ ಗ್ರಂಥಾಲಯಗಳಿಗೂ ಆಧ್ಯಾತ್ಮಿಕ ಪತ್ರಿಕೆ 'ಕಲ್ಯಾಣ ಕಿರಣ'ವನ್ನು ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ನಗರ ಜಿಲ್ಲಾ ಕೇಂದ್ರ ಗ್ರಂಥಾಲಯಗಳೂ ಕಲ್ಯಾಣ ಕಿರಣಕ್ಕೆ ಚಂದಾದಾರರಾಗಬೇಕೆಂದು ವಿನಂತಿಸಿಕೊಳ್ಳುತ್ತೇವೆ, ವಾರ್ಷಿಕ ಚಂದಾ ಹದಿನಾರು ರೂಪಾಯಿ ಇದ್ದು ಪ್ರತಿ ತಿಂಗಳು ಒಂದನೇ ತಾರೀಖು ಬೆಂಗಳೂರಿನಿಂದ ಹೊರಡುವ ಅರವತ್ನಾಲ್ಕು ಪುಟಗಳ ಈ ಮಾಸಿಕ ಆಧ್ಯಾತ್ಮ-ಸಾಮಾಜಿಕ ವಿಷಯಗಳಿಗೆ ಮೀಸಲಾಗಿದ್ದು, ಪೂಜ್ಯ ಮಾತೆ ಮಹಾದೇವಿಯವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದೆ. ಪತ್ರಿಕೆ ವಿಳಾಸ - 'ಕಲ್ಯಾಣ ಕಿರಣ' ಕಾರ್ಯಾಲಯ, ಬಸವ ಮಂಟಪ, ನಂ. 24, ಕಾರ್ಡ್‌ರೋಡ್, ಎರಡನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

ವ್ಯವಸ್ಥಾಪಕರು.

Regd. No. KRNB 312
Licenced to post without pre-payment No. WPP-25



ವೆಂಕಟೇಶ್ವರ ಮಂದಿರ, ಪಿಟ್ಸ್‌ಬರ್ಗ್ (U.S.A.)

ವಿಶ್ವಕಲ್ಯಾಣ ಮಿಷನ್,
ನಂ. 24, ಎರಡನೇ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು-10